
ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 1 ಸಂಚಿಕೆ 9
ಜುಲೈ 29, 2007
ಕನ್ನಡ ವಾರಪತ್ರಿಕೆ
ರೂ. 5/-



ಕಲ್ಬುರ್ಗಿ

ದಲಿತನ ಕೊಲೆಗಾರರಿಗೆ ಉಸ್ತುವಾರಿ ಸಚಿವನೇ ರಕ್ಷಕ !



ಎಪಿಎಂಸಿ ಕಾಯ್ದೆ ತಿದ್ದುಪಡಿ


ರೈತನ ಬೆನ್ನಿಗೆ ಚೂರಿ



ಪೇಜ್ 8

ಗಣಿಯ ಕುಣಿಯಲ್ಲಿ

ಬಳ್ಳಾರಿ ರಾಜಕೀಯ



ಪೇಜ್ 9



'ಹುಡ್ಕೊ' ಲೂಟಿ ಅನಂತಕುಮಾರ್‌ಗೆ ಯಾರು ಸಾಟಿ ?

ಕಾಂಚಾಣದ ಬೆನ್ನು ಹತ್ತಿದ ಕೇಬಲ್ ಉದ್ಯಮ



‘ಬಂಡಾಯ’ ಸಾಹಿತ್ಯ ಸಂಘಟನೆ ಕ್ರಿಯಾಶೀಲತೆಯತ್ತ

ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ತನ್ನದೇ ವಿಶಿಷ್ಟ ಛಾಪು ಮೂಡಿಸಿ, ಐತಿಹಾಸಿಕ ಮಹತ್ವದ ಪಾತ್ರ ವಹಿಸಿರುವ ಬಂಡಾಯ ಸಾಹಿತ್ಯ ಸಂಘಟನೆಯು ಮತ್ತೆ ಕ್ರಿಯಾಶೀಲಗೊಳ್ಳುವ ಗುರುತರ, ಪ್ರಯತ್ನ ಆರಂಭಗೊಂಡಿವೆ. ‘ಕಲೆಗಾಗಿ ಕಲೆಯಲ್ಲ, ಜನರಿಗಾಗಿ ಕಲೆ’, ‘ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಪ್ರಾಣಮಿತ್ರ’ ಎಂಬ ಧ್ಯೇಯವಾಕ್ಯದ, ‘ಕಲ್ಲುಬಂಡೆಗಳ ಮೇಲೆ ಚಿಗುರಬೇಕಿದೆ’ ಎಂಬ ವಾಸ್ತವದೊಂದಿಗೆ ಬಂಡಾಯ ಸಾಹಿತ್ಯ ಸಂಘಟನೆಯು - ಆರಂಭಗೊಂಡಾಗಿನಿಂದ ಜನ ಚಳುವಳಿಗಳ ಜೊತೆಗೆ ಸಾಗಿ, ತನ್ನನ್ನು ವ್ಯವಸ್ಥೆಯ ಯಜಮಾನಿಕೆಗೆ ಸವಾಲಾಗಿ ಬೆಳೆಯಿತು. ಕಾಲಾಂತರದಲ್ಲಿನ ಮಹತ್ವದ ಬೆಳವಣಿಗೆಗಳಲ್ಲಿ ಬಂಡಾಯದ ಚಟುವಟಿಕೆಗಳು ಕ್ಷೀಣ ಎನ್ನುವಂತಾಗಿದ್ದ ಹಿನ್ನೆಲೆಯಲ್ಲಿ ವರ್ತಮಾನದ ಸವಾಲುಗಳನ್ನು ಗುರುತಿಸಲಾಗಿದೆ. ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯ ಎರಡು ದಿನಗಳ ಶಿಬಿರ ಬೆಂಗಳೂರಿನ ಎನ್‌ಜಿಓ ಸಭಾಂಗಣದಲ್ಲಿ ಜುಲೈ 15 ಮತ್ತು 16 ರಂದು ಜರುಗಿತು. ಶಿಬಿರ ಉದ್ಘಾಟಿಸಿದವರು ಬಂಡಾಯ ಚಳುವಳಿಯ ಪ್ರಮುಖರಲ್ಲೊಬ್ಬರಾದ ಬರಗೂರು ರಾಮಚಂದ್ರಪ್ಪನವರು.

ಶಿಬಿರದಲ್ಲಿ ‘ಸಾಹಿತ್ಯ ಮತ್ತು ಸಾಮಾಜಿಕ ಜವಾಬ್ದಾರಿ’- ಡಾ. ಜಿ.ರಾಮಕೃಷ್ಣ, ‘ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು’ - ರಾಜಪ್ಪ ದಳವಾಯಿ, ‘ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಕಾಳಜಿ’ - ಗಂಗಾಧರ ಮೊದಲಿಯಾರ್, ‘ಜಾಗತೀಕರಣ ಮತ್ತು ಸಮಕಾಲೀನ ಸವಾಲು’ - ಪಾರ್ಥಸಾರಥಿ, ‘ಕೋಮುವಾದ ಮತ್ತು ಸಾಂಸ್ಕೃತಿಕ ಸನ್ನಿವೇಶ’ - ಗುರುಶಾಂತ್. ಸಮಾರೋಪ ಸಮಾರಂಭದಲ್ಲಿ ಇಂದೂಧರ ಹೊನ್ನಾಪುರ, ಡಾ. ಎಲ್.ಹನುಮಂತಯ್ಯ, ಗುಡಿಹಳ್ಳಿ ನಾಗರಾಜ್ ಭಾಗಹಿಸಿದ್ದರು.


ರಾಜ್ಯಮಟ್ಟದ ಈ ಶಿಬಿರದಂತೆಯೇ ಜಿಲ್ಲೆಗಳಲ್ಲಿಯೂ ಶಿಬಿರಗಳನ್ನು ಸಂಘಟಿಸಲು, ನಂತರ ಜನಸಂಸ್ಕೃತಿ ಜಾಥಾ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯ್ದ ಉತ್ಸಾಹಿ ಕ್ರಿಯಾಶೀಲ ಗೆಳೆಯರು ಭಾಗವಹಿಸಿದ್ದರು.

ಸಾಮಾಜಿಕ ನ್ಯಾಯದ ಪರ ದನಿ

- ಬರಗೂರರ ಉದ್ಘಾಟನಾ ಮಾತುಗಳ

‘ಸಮಾಜದ ಪ್ರಗತಿಗೆ ಮಾರಕವಾದ ಜಾಗತೀಕರಣ ಮತ್ತು ದೇಗುಲೀಕರಣಗಳು ಬಲಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಎಡಪಂಥೀಯ ಒಲವುಳ್ಳ ಎಲ್ಲ ಪ್ರಗತಿಪರರು ಒಗ್ಗಟ್ಟಿನಿಂದ ಸಾಮಾಜಿಕ ನ್ಯಾಯದ ಪರವಾಗಿ ದನಿ ಎತ್ತಬೇಕು’

ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪರವಾಗಿರುವ ಎಲ್ಲ ಮನಸ್ಸುಗಳು ಒಗ್ಗೂಡಿ, ಸಮಾಜದ ಕೆಳಸ್ತರದ



ಜನತೆಯಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕಿದೆ.

ಚರಿತ್ರೆಯ ಪುನರ್‌ರಚನೆ ಮತ್ತು ಸ್ಥಳೀಯ ಸಂಸ್ಕೃತಿಯ ಬೇರುಗಳನ್ನು ಬಲಪಡಿಸುವ ಕಾರ್ಯದಲ್ಲಿ ಪ್ರಗತಿಪರರು ಮತ್ತು ರಂಗನಟರು ಪ್ರಮುಖ ಜವಾಬ್ದಾರಿ ನಿರ್ವಹಿಸಬೇಕಿದೆ. ಈವರೆಗೆ ಸ್ಥಳೀಯ ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ದೊರೆತಿಲ್ಲ. ಆದರೆ ಜಾಗತೀಕರಣದ ಪ್ರಭಾವವನ್ನು ಎದುರಿಸಲು ಸ್ಥಳೀಯ ಸಂಸ್ಕೃತಿಯಲ್ಲಿ ಅಡಗಿರುವ ಶಕ್ತಿಗಳನ್ನೇ ಬಳಸಿಕೊಳ್ಳುವ ಅಗತ್ಯವಿದೆ.

‘ಅರಚಾಡುವವರು ಮತ್ತು ಕಿರುಚಾಡುವವರು ಕ್ರಾಂತಿಕಾರಿಗಳಲ್ಲ. ಹಾಗೆಯೇ ಮೌನಿಗಳೆಲ್ಲ ಮುತ್ಸದ್ದಿಗಳಲ್ಲ. ಅಂತೆಯೇ ಎಚ್ಚೆತ್ತುಕೊಳ್ಳಬೇಕಾದ ಹೊತ್ತಿನಲ್ಲಿ ಸಾಂಸ್ಕೃತಿಕ ವ್ಯಕ್ತಿಗಳ ಮೌನವೂ ಅಪಾಯ, ಸಮಾಜವನ್ನು ಅಪಾಯದ ಅಂಚಿನಿಂದ ಪಾರು ಮಾಡಬೇಕಾದ ಮೌನಿ ಮತ್ತು ಮುತ್ಸದ್ದಿಗಳಿಗೆ ಜ್ಞಾನೋದಯವಾಗುವುದು ಯಾವಾಗ’.

ಇಪ್ಪತ್ತನೇ ಶತಮಾನ ‘ಜಾಗೃತ ಶತಮಾನ’ವಾಗಿತ್ತು. ಆದರ 21ನೇ ಶತಮಾನ ‘ಶರಣಾಗತಿಯ ಶತಮಾನ’ ವಾಗಿದೆ. 1970ರ ದಶಕದಲ್ಲಿ ಬಂದ ಬದಲಾವಣೆಗಳನ್ನು ಸರಳವಾಗಿ ಗ್ರಹಿಸಬಹುದಿತ್ತು. ಆದರೆ ಈಗ ಬದಲಾವಣೆಗಳೂ ನಾಜೂಕಿನಿಂದ ನಡೆಯುತ್ತಿವೆ. ಆದ್ದರಿಂದ ಹೊಸ ಸವಾಲುಗಳನ್ನು ಎದುರಿಸಲು ಯುವ ಸಮುದಾಯವನ್ನು ಸಜ್ಜುಗೊಳಿಸಬೇಕು.

ಬಂಡಾಯ ಸಾಹಿತ್ಯಕ್ಕೆ ಹಿಂದಿಗಿಂತ ಈಗ ಹೊಣೆಗಾರಿಕೆ ಹೆಚ್ಚಿದೆ. ಅದು ತನ್ನ ಹಿಂದಿನ ಬೆಳಕಿನಲ್ಲಿ ಭವಿಷ್ಯದ ಹೊಸ ದಾರಿಗಳನ್ನು ಕಂಡುಕೊಳ್ಳಬೇಕಿದೆ. ಆದರೆ ಈ ಹೊತ್ತಿನಲ್ಲಿ ತಾತ್ವಿಕ ಮತ್ತು ಸೈದ್ಧಾಂತಿಕ ರಾಜಿಗೆ ಒಳಗಾಗಬಾರದು. ‘ಬಂಡಾಯ’ ದ ಕಾರಣದಿಂದಾಗಿ ಸಾಮಾಜಿಕ ಜವಾಬ್ದಾರಿ ಎನ್ನುವುದು ಸಾಹಿತಿಯ ಒಂದು ಅನಿವಾರ್ಯತೆ ಎಂಬಷ್ಟರ ಮಟ್ಟಿಗೆ ಒಂದು ಸಿದ್ಧಾಂತವೇ ರೂಪುಗೊಂಡಿರುವುದು ಸಂತಸದ ವಿಷಯ.

• • •

‘ಜಾತೀಯತೆ, ಕೋಮುವಾದವನ್ನು ವಿರೋಧಿಸುವ ನಾವು ಈಗ ಹಿಂಸಾವಾದವನ್ನೂ ವಿರೋಧಿಸಬೇಕು. ಪ್ರಗತಿಪರತೆಯ ಹೆಸರಿನಲ್ಲಿ ಹಿಂಸಾವಾದವನ್ನು ಬೆಂಬಲಿಸುವುದನ್ನು ಒಪ್ಪಿಕೊಳ್ಳಲಾಗದು.

ಈ ರೀತಿ ಮಾತನಾಡಿದರೆ ನಮ್ಮನ್ನು ಫ್ಯಾಶಿಸ್ಟ್ ಶಕ್ತಿಗಳೆಂದು ಹೀಗಳೆಯುತ್ತಾರೆ. ಆದರೆ ಈ ಮಾತಿನ ಹಿಂದಿನ ಕಳಕಳಿಯನ್ನು ಅರ್ಥಮಾಡಿಕೊಂಡರೆ ಎಲ್ಲವೂ ತಿಳಿಯುತ್ತದೆ’.

- ಲಕ್ಷ್ಮೀನಾರಾಯಣ ನಾಗವಾರ

ಬಂಡಾಯ ಮತ್ತಷ್ಟು ಕ್ರಿಯಾಶೀಲವಾಗಲಿ

ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ವಿಶಾಲ ವೇದಿಕೆಯಾದ ಬಂಡಾಯ ಸಾಹಿತ್ಯ ಸಂಘಟನೆ ತನ್ನ ಮೊದಲಿನ ಘೋಷಿತ ಆಶಯದೊಂದಿಗೆ ಮತ್ತಷ್ಟು ಕ್ರಿಯಾಶೀಲವಾಗಬೇಕು. ಇಂತಹ ಪ್ರಜಾಸತ್ತಾತ್ಮಕ ಸಂಘಟನೆ ಅಪರೂಪ. ಹಿಂದೆಂದಿಗಿಂತ ಈಗ ಇದರ ಅಗತ್ಯ ಇದೆ.

- ಹಲವರ ಆಶಯ

★

ಕಂಬಾಲಪಲ್ಲಿಯಲ್ಲಿ ದಲಿತರನ್ನು ಹತ್ಯೆ ಮಾಡಿದ ಆರೋಪಿಗಳನ್ನು ಖುಲಾಸೆ ಮಾಡಿದ ನ್ಯಾಯಾಲಯದ ನಿರ್ಧಾರ ಹಾಗೂ ಕೋಮುವಾದಿಗಳ ಅಟ್ಟಹಾಸವನ್ನು ವಿರೋಧಿಸಿ ಬಂಡಾಯ ವ್ಯಾಪಕ ಚಳುವಳಿ ಹಮ್ಮಿಕೊಳ್ಳಬೇಕಾಗಿತ್ತು.

- ಎಂ.ವೆಂಕಟಸ್ವಾಮಿ

ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಹೊಸಬರು ಹೆಚ್ಚು ಕ್ರಿಯಾಶೀಲರಾಗ ಬೇಕಾದದ್ದು ಅಗತ್ಯ.

- ಡಾ.ಎಲ್. ಹನುಮಂತಯ್ಯ

ಸಂಸತ್ತು, ವಿಧಾನಸಭೆ, ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಒಪ್ಪಿಕೊಂಡೇ ಸಮಾಜ ಬದಲಾವಣೆಯ ನಿಲುವಿಗೆ ಬಂಡಾಯ ಸಾಹಿತ್ಯ ಸಂಘಟನೆ ಬದ್ಧವಾಗಿತ್ತು. ಆದರೆ ಸಂಸತ್ತನ್ನೇ ಬುಡಮೇಲು ಮಾಡುವ ವಿಚಾರಧಾರೆಗಳು ಸಂಘಟನೆಯಲ್ಲಿ ಹೇಗೋ ನುಸುಳಿ ಗೊಂದಲ ಸೃಷ್ಟಿಸಿದವು.

- ಗುಡಿಹಳ್ಳಿ ನಾಗರಾಜ

★



ಜನದನಿ

ಶ್ರೀನಿವಾಸ್‌ರವರ ಕ್ಯಾತೆ ಚೆನ್ನಾಗಿದೆ

ವಿಜಯಾ, ಮಾಲೂರು

★

ಭಾಷೆ-ಗಡಿ ಹೆಸರಿನಲ್ಲಿ ಜನರ ನಡುವೆ ವಿಭಜನೆ ತರುವ ಯತ್ನ ವಿರೋಧಿಸಲೇಬೇಕು. ದೇಶದಲ್ಲಿ ಪ್ರತ್ಯೇಕತಾ ಶಕ್ತಿಗಳು, ಭಯೋತ್ಪಾದಕ-ಕೋಮುವಾದಿ ಮತೀಯವಾದಿಗಳು, ಛಿದ್ರಕಾರಿಗಳು ಸಕ್ರಿಯವಾಗಿರುವಾಗ ಜನರ ಒಗ್ಗಟ್ಟು ಕಾಯ್ದುಕೊಳ್ಳುವುದು ಅತ್ಯಗತ್ಯ. ಆದ್ದರಿಂದ ಗಡಿ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದೇ ಸೂಕ್ತ. ರಕ್ಷಣಾ ವೇದಿಕೆಯ ಪುಂಡಾಟಿಕೆಯನ್ನು ಮಟ್ಟ ಹಾಕಬೇಕು.

ರಾಜೇಶ್, ಹಳಿಯಾಳ

ನಕ್ಸಲೀಯರ ಕಾರ್ಯಾಚರಣೆ, ಅವರು ಮುಂದೊಡ್ಡುವ ತರ್ಕಗಳನ್ನು ಗಮನಿಸಿದರೆ ಅವರಿಗೆ ಸಮಸ್ಯೆಗಳು ಇತ್ಯರ್ಥವಾಗುವುದಕ್ಕಿಂತ ಹೆಚ್ಚಾಗುವುದೇ ಬೇಕಾದಂತಿದೆ. ಇದನ್ನೇ ಬಳಸಿ ಆಳುವವರು ಪ್ರಜಾಸತ್ತಾತ್ಮಕ ಚಳುವಳಿ ಹಕ್ಕುಗಳನ್ನು ದಮನಗೊಳಿಸಲು ಅವಕಾಶ ಕಲ್ಪಿಸಿದೆ.

ಸತ್ಯನಾರಾಯಣ, ಶಿವಮೊಗ್ಗ

★

ಭಯೋತ್ಪಾದಕ ಬೀಜಗಳು, ಹಸಿವೆಂಬ ಹದ್ದು... ಲೇಖನಗಳು ವಾಸ್ತವವನ್ನು ತೆರೆದಿಟ್ಟಿವೆ.

ಎಂ.**ರಮೇಶ್**, ಬಳ್ಳಾರಿ

ನನ್ನ ತಾಯಿ ನಾಡು



ಇದೇ ನನ್ನ ತಾಯಿ ನಾಡು
ಇದೇ ನನ್ನ ತೊಟ್ಟಿಲು,
ಅನ್ನ ನೀರನಿತ್ತು ಸಲಹಿ
ದಂಥ ತಟ್ಟೆ ಬಟ್ಟಲು.
ಆದಿ ಪಂಪ, ಆಸೆ ಪಟ್ಟ
ದುಂಬಿಯಾಗಿ ಹುಟ್ಟಲು.
ನಂದನಕ್ಕೆ ಇಲ್ಲಿಂದಲೆ
ಇರುವದೊಂದೆ ಮೆಟ್ಟಲು.
ಕಪ್ಪು ಮಣ್ಣು. ಆದಿ ವಾಸಿ
ಹೆಣ್ಣು. ಈಕೆ ಹಾಡಲು
ಗಿರಿಯ ತೊರೆದು ಬರುವ
ವಿಲ್ಲಿ ಗಿಳಿ ನವಿಲುಗಳಾಡಲು.
ಹಸಿರನುಟ್ಟ ಕಣಿವೆ ಬೆಟ್ಟ
ಚೆಲುವು ಕೊಟ್ಟ ಉಂಬಳಿ
ಬಾಳಿ ಬದುಕಲೆಂದು ಹಾಸಿ
ದಂಥ ರತ್ನಗಂಬಳಿ,
ಸೂರ್ಯಚಂದ್ರ ಸುಡುವ
ರಿವಳಿಗಾಗಿ ಗಂಧಕರ್ಪೂರ
ಮುಗಿಲಿನೊಳಗಸಂಖ್ಯ ತಾರೆ
ಇವಳ ಮನೆಯ ಚಪ್ಪರ.
ಸಪ್ತವರ್ಣಗಳನು ಹೆಣೆದ
ಮುಡಿಯ ರತ್ನಮಾಲೆಯು
ತೇಲಿನಡೆದ ತುಂಬು ಮೋಡ
ಇವಳ ಚಂದ್ರಶಾಲೆಯು.
ಮುತ್ತು ಹವಳ ಬಿತ್ತಿದವಳು
ಬೆಳೆದ ಜೋಳ ಗೋದಿಯು,
ಹೊಳೆಗಳಲ್ಲಿ ದೀಪ ಹಚ್ಚಿ,
ಇವಳು ನಡೆದ ಹಾದಿಯು,
ಭೂಪರಿಲ್ಲಿ ಧೂಪ ಹಾಕಿ
ಇವಳಿಗುಧೋ ಎಂದರು
ನಮ್ಮ ಸುಖದ ಸರಕು ಹೊತ್ತ
ನಾವೆಗಿವಳೆ ಬಂದರು.

- ಸು.ರಂ. ಎಕ್ಕುಂಡಿ

(‘ಗೋಧಿ ತೆನೆಗಳು’ ಸಂಕಲನದಿಂದ
ನವಕರ್ನಾಟಕ ಪ್ರಕಾಶನ ಪ್ರೈ.ಲಿ. ಬೆಂಗಳೂರು)

ಸಂಪಾದಕೀಯ

ರಾಷ್ಟ್ರಾಧ್ಯಕ್ಷರ ಚುನಾವಣೆ ಜೆಡಿ(ಎಸ್)ನ ಮೌನದ ಭಾಷೆ

ನಮ್ಮ ದೇಶದ ರಾಷ್ಟ್ರಾಧಕ್ಷರ ಚುನಾವಣೆಯ ಮತದಾನವೀಗ ಮುಗಿದಿದೆ. ಫಲಿತಾಂಶ ಅಧಿಕೃತವಾಗಿ ಪ್ರಕಟವಾಗುವುದೊಂದೇ ಬಾಕಿ. ಈಗಾಗಲೇ ಪ್ರಸ್ತುತಸ್ಥಿತಿಯನ್ನು ಅವಲೋಕಿಸಿದರೆ ಸಂಯುಕ್ತ ಪ್ರಗತಿಪರ ರಂಗ (ಯುಪಿಎ) ಮತ್ತು ಎಡಪಕ್ಷಗಳ ಅಭ್ಯರ್ಥಿ ಶ್ರೀಮತಿ ಪ್ರತಿಭಾ ಪಾಟೀಲರ ಆಯ್ಕೆ ನಿಶ್ಚಿತ. ಅಂದರೆ ಭಾರತದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಮಹಿಳೆಯೊಬ್ಬರು ದೇಶದ ಅತ್ಯುನ್ನದ ಹುದ್ದೆ ವಹಿಸಿಕೊಳ್ಳಲಿದ್ದಾರೆ. ಅಲ್ಪಸಂಖ್ಯಾತ, ದಲಿತ ಸಮುದಾಯಗಳಿಂದಲೂ ಈ ಉನ್ನತ ಹುದ್ದೆಗೇರಿದ ಉದಾಹರಣೆಗಳಿವೆ. ಈಗ ಪ್ರಥಮ ಶೋಷಿತೆಯಾಗಿರುವ ಮಹಿಳೆಯರ ಪ್ರತಿನಿಧಿ ಸರದಿ.

ಹೀಗೆ ವಿವಿಧ ರೀತಿಯಲ್ಲಿ ತುಳಿತಕ್ಕೊಳಗಾದ, ನಿರ್ಲಕ್ಷಿತ ಜನಸಮುದಾಯಗಳ ನಡುವಿನಿಂದ ಬಂದವರೂ ಕೂಡಾ ಆಗೀಗ ಇಂತಹ ಉನ್ನತ ಹುದ್ದೆಗೇರುವುದು ಪ್ರಜಾಪ್ರಭುತ್ವದ ಚಮತ್ಕಾರಗಳಲ್ಲಿ ಒಂದು. ನಿಜ, ಪ್ರತಿಭಾ ಪಾಟೀಲರ ಆಯ್ಕೆ ಕೇವಲ ಮಹಿಳೆ ಎಂಬ ಕಾರಣಕ್ಕೆ ಮಾತ್ರ ಅಲ್ಲ, ನಿಜ ಅವರಿಗೆ ಧರ್ಮನಿರಪೇಕ್ಷತೆಗೆ ಬದ್ಧತೆ ಇದೆ, ದೇಶದ ರಾಜಕೀಯ ಆಗು-ಹೋಗುಗಳ ಸೂಕ್ಷ್ಮತೆ ಅರಿವಿದೆ, ಆಡಳಿತದ್ದೂ ಅನುಭವವಿದೆ ಕೂಡಾ.

ಭಾರತದ ಪ್ರಥಮ ಪ್ರಜೆಯೆಂದೇ ಕರೆಯಲಾಗುವ ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಒಂದು ಗಂಭೀರತೆ ಇದೆ. ಆದರೆ ಈ ಬಾರಿ ಬಿಜೆಪಿ ಅತ್ಯಂತ ಹತಾಶೆ, ಅಸಹನೆಯಿಂದ ಕೆಸರೆರೆಚುವ ಕಾರ್ಯದಲ್ಲಿ ಚುನಾವಣೆ ಉದ್ದಕ್ಕೂ ತೊಡಗಿತು. ಆದರೆ ಆರ್‌ಎಸ್‌ಎಸ್ ನ ಕಟ್ಟಾಳುವಾಗಿದ್ದ ಬೈರೇನ್‌ಸಿಂಗ್ ಶೇಖಾವತ್‌ರವರನ್ನು 'ಸ್ವತಂತ್ರ' ಅಭ್ಯರ್ಥಿಯೆಂದು ತಾನೇ ಕರೆದು ಕೊನೆಗೂ ತನ್ನ ಜೊತೆಗಿದ್ದವರ ಬೆಂಬಲವನ್ನು ಕಳೆದುಕೊಂಡರೂ ಸ್ಪರ್ಧೆಗೆ ಇಳಿಯಿತು. ಹಿಂದೆ ಅದು ಮಾಡುತ್ತಿದ್ದ ವಾದಗಳೆಲ್ಲಾ ತಲೆಕೆಳಗು.


ಮುಖ್ಯವಾದ ಸಂಗತಿ ಎಂದರೆ ಮೂರನೆಯರಂಗದ ಭಾಗಿದಾರರು ಕಲಾಂರನ್ನು ಪುನರ್‌ಸ್ಪರ್ಧೆಗೆ ಸಿದ್ಧಗೊಳಿಸಲು ಹೋಗಿ ಆಗದೇ ಸುಸ್ತಾಗಿ, ಮತದಾನದಿಂದಲೇ ದೂರ ಉಳಿದಿದ್ದು ಅದನ್ನು ಧಿಕ್ಕರಿಸಿದ ಎಐಎಡಿಎಂಕೆ ಒಳಗೊಂಡು ಕೆಲವರು ಮತ ಹಾಕಿದ್ದು ಒಂದು ಶೋಚನೀಯ ಕಥೆ. ಎನ್‌ಡಿಎ ಜೊತೆಗೆ ಎಲ್ಲರೂ ಹೋಗಬೇಕೆಂಬ ಕೆಲವರ ಅಪೇಕ್ಷೆ ಆಗದೇ ಹೋಗಿದ್ದು ಒಂದು ಸಕಾರಾತ್ಮಕ ಬೆಳವಣಿಗೆ ಎನ್ನಬಹುದು. ಆದರೆ ನಮ್ಮ ರಾಜ್ಯದಲ್ಲಿ ಬಿಜೆಪಿಯೊಂದಿಗೆ ಕೈಜೋಡಿಸಿ ಸರ್ಕಾರ ನಡೆಸುತ್ತಿರುವ ಜಾತ್ಯಾತೀತ ಜನತಾದಳ ಪಕ್ಷವು ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಏನು ಮಾಡಲಿದೆ ಎಂಬುದು ಕುತೂಹಲಕರವಾಗಿಯೇ ಇತ್ತು. ಚುನಾವಣೆಯ ಹಿಂದಿನ ದಿನ ಈ ಮತದಾನದಲ್ಲಿ ಭಾಗವಹಿಸದೇ ತಟಸ್ಥವಾಗಿ ಉಳಿಯುವ ನಿರ್ಧಾರವನ್ನು ಅದು ಕೈಗೊಂಡಿತು. ಅಂತೆಯೇ ಜುಲೈ 19 ರಂದಿನ ಮತದಾನದಲ್ಲಿ ಅದರ ಶಾಸಕರು, ಸಂಸದರೂ ಪಾಲ್ಗೊಳ್ಳದೇ ಹೊರಗುಳಿದರು.

ತಮ್ಮ ಅಭ್ಯರ್ಥಿಗೆ ಮತ ಹಾಕುವಂತೆ ಜೆಡಿ(ಎಸ್)ನ ನಾಯಕತ್ವದ ಮೇಲೆ ಬಿಜೆಪಿ ಬಹಳಷ್ಟು ಒತ್ತಡವನ್ನು ಹೇರುತ್ತಲೇ ಇತ್ತು. ಆದರೆ ಅವರು ಅದಕ್ಕೆ ಮಣಿದಿಲ್ಲ. ಅಂದರೆ ಕೋಮುವಾದಿಗಳೊಂದಿಗೆ ತಮ್ಮದು ಸಂಪೂರ್ಣ ಭಾಗಿತ್ವ ಇಲ್ಲ ಎಂದಲ್ಲದೇ ಜೆಡಿ(ಎಸ್) ಪಕ್ಷ ತಾನು ಜಾತ್ಯಾತೀತವಾಗಿ ಉಳಿಯಬೇಕೆಂಬ ಭಾವನೆಯ ಒಂದು ಪ್ರತೀಕವೂ ಆಗಿದೆ. ವಿವಿಧ ಸನ್ನಿವೇಶಗಳಲ್ಲಿ ಅದು ವಿಭಿನ್ನ ನಿಲುವು ತಾಳುತ್ತದೆ ನಿಜ. ಆದರೆ ಈ ಬಾರಿ ಈ ನಿಲುವು ವಿಶೇಷವಾಗಿ ಇನ್ನೇನು ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಲು ಸಮಯ ಹತ್ತಿರವಿರುವಾಗ ಕೆಲವು ಅರ್ಥಗಳನ್ನು ಇದು ಹೊರಡಿಸಬಹುದು. ರಾಷ್ಟ್ರಮಟ್ಟದಲ್ಲಿ ತನ್ನ ವರ್ಚಸ್ಸು ಉಳಿಸಿಕೊಳ್ಳುವ ಜೆಡಿ(ಎಸ್)ನ ಪರಿಗಣನೆಯಂತೆ ರಾಜ್ಯದಲ್ಲಿಯೂ ಬಿಜೆಪಿಗೆ ಅಧಿಕಾರ ಹಸ್ತಾಂತರವಾಗದಂತೆ ಏನಾದರೂ ಸಂಭವಿಸಬಹುದೇ?

ಇತ್ತೀಚಿನ ಬೆಳವಣಿಗೆಗಳಲ್ಲಿ ಬಿಜೆಪಿ ರಾಷ್ಟ್ರಮಟ್ಟದಲ್ಲಿಯೂ ರಾಜ್ಯದಲ್ಲಿಯೂ ಸತತವಾದ ಸೋಲು ಅನುಭವಿಸುತ್ತಿದೆ. ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ಅದು ಏನೆಲ್ಲಾ ಸರ್ಕಸ್ ನಡೆಸಿದರೂ ಅಧಿಕಾರ ಹಿಡಿಯಲು ಸಾಧ್ಯವಾಗಲಿಲ್ಲ. ಉ.ಪ್ರ. ದ ಜನತೆ ಬಿಜೆಪಿಯ ಕೋಮುವಾದಿ ಹಿಂದುತ್ವದ ಮಾತುಗಳಿಗೆ ಮರುಳಾಗದೇ ತಿರಸ್ಕರಿಸಿದರು. ರಾಜ್ಯದಲ್ಲಿ ಇತ್ತೀಚಿನ ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಸೇರಿದ್ದರಿಂದ ಅಲ್ಪಸಂಖ್ಯಾತರು ಸೇರಿ ಒಟ್ಟಾರೆ ಧರ್ಮನಿರಪೇಕ್ಷಿತ ಶಕ್ತಿಗಳು ಜೆಡಿ(ಎಸ್)ನಿಂದ ದೂರ ಉಳಿದರು. ಉಳ್ಳಾಲದಲ್ಲಿಯೂ ಬಿಜೆಪಿಯ ತಿಣುಕಾಟಕ್ಕೆ ಜನ ಮನ್ನಣೆ ನೀಡಲಿಲ್ಲ. ಜೆಡಿ(ಎಸ್)ಗೂ ಪುರಸ್ಕಾರ ಸಿಗಲಿಲ್ಲ. ಹೀಗೆ ತಿರಸ್ಕಾರಕ್ಕೆ ಒಳಗಾಗುವ ಬಿಜೆಪಿಯೊಂದಿಗೆ ರಾಷ್ಟ್ರಮಟ್ಟದ ಈ ಚುನಾವಣೆಯಲ್ಲಿ ಕೈಜೋಡಿಸಿದರೆ ಆಗಬಹುದಾದ ರಾಜಕೀಯ ಪರಿಣಾಮಗಳ ಅರಿವು ದೇವೇಗೌಡರಿಗೆ ಇಲ್ಲದಿಲ್ಲ. ಇಂದಿನಂತೆ ಇದೇ ನಿಲುವನ್ನು ಮುಂದೆಯೂ ಅನುಸರಿಸಿಯಾರೇ?

○

'ಹುಡ್ಕೊ ಲೂಟಿ' ಅನಂತಕುಮಾರ್‌ಗೆ ಯಾರು ಸಾಟಿ?



ಮಾಜಿ ಕೇಂದ್ರ ಸಚಿವ, ಬೆಂಗಳೂರು ದಕ್ಷಿಣದ ಹಾಲಿ ಸಂಸದ ಅನಂತಕುಮಾರ್ ಮುಖಕ್ಕೆ ಸುಪ್ರೀಂಕೋರ್ಟ್ ಮತ್ತೊಮ್ಮೆ ಛೀಮಾರಿ ಹಾಕಿದೆ. 'ಹುಡ್ಕೋ ಹಗರಣ'ವೆಂದೇ ಕುಖ್ಯಾತಿಪಡೆದ ಈ ಪ್ರಕರಣದಲ್ಲಿ ಕೇಂದ್ರದ ವಿಚಕ್ಷಣಾ ಆಯೋಗದ ವರದಿಯನ್ನು ಕೇಂದ್ರ ಸರ್ಕಾರ ಆರು ವಾರಗಳಲ್ಲಿ ನೀಡಲು ಹಾಗೂ ಹಗರಣದ ಮೊಕದ್ದಮೆ ಹೂಡಲು ಸೂಚಿಸಿದೆ. ಈ ಹಗರಣದಲ್ಲಿ ಭಾಗಿಯಾದ ಸಂಸ್ಥೆಯ ಅಧಿಕಾರಿಗಳ ವಿರುದ್ಧವೂ ಕ್ರಮವಹಿಸಲು ನಿರ್ದೇಶಿಸಿದೆ.

ಹಿಂದೆ 'ಮುತ್ಸದ್ದಿ' ವಾಜಪೇಯಿಯವರ ಸಂಪುಟದಲ್ಲಿ ಅನಂತಕುಮಾರ್ ಗೃಹ ಹಾಗೂ ನಗರಾಭಿವೃದ್ಧಿ ಸಚಿವರಾಗಿದ್ದಾಗ (2003) ಗೃಹ ಮತ್ತು ನಗರಾಭಿವೃದ್ಧಿ ಕಾರ್ಪೋರೇಷನ್ ಸಂಸ್ಥೆಯ(ಹುಡ್ಕೋ) 14,500 ಕೋಟಿ ರೂ.ಗಳ ಅಪಾರ ಪ್ರಮಾಣದ ಮೊತ್ತವನ್ನು ಸಂಸ್ಥೆಯ ನಿಯಮಾವಳಿಗಳನ್ನು ಅನುಸರಿಸದೇ ಅವುಗಳನ್ನು ಮೀರಿ ಸಾಲ ನೀಡಲಾಗಿತ್ತು. ಕೇವಲ ಒಂದು ತಾಸಿನಲ್ಲೇ ಎಲ್ಲಾ ಪ್ರಕ್ರಿಯೆಗಳೂ ನಡೆದು ಖಾಸಗಿ ಕಂಪನಿಯೊಂದಕ್ಕೆ 5300 ಕೋಟಿ ರೂಪಾಯಿಗಳ ಹಣವನ್ನು ಮಂಜೂರು ಮಾಡಲಾಗಿತ್ತು! ಇದು ಒಂದು ಉದಾಹರಣೆ. ಇದೇ ಗತಿ ಉಳಿದ ಪ್ರಕರಣಗಳಲ್ಲಿಯೂ.



ಆರ್‌ಎಸ್‌ಎಸ್ ನ ಪರಮಾಪ್ತ, ನಿಷ್ಠ ಸ್ವಯಂಸೇವಕನೂ, ಬಿಜೆಪಿಯೊಳಗೆ ಪ್ರಭಾವಿ (ಅಡ್ವಾಣಿ ಶಿಷ್ಯ ಎಂದೂ) ಮುಖಂಡನೂ ಆಗಿದ್ದ, ಆಗಿರುವ ಅನಂತಕುಮಾರ್ (ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ) ತಾನು ಹೇಳುವ ದೇಶನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದ ಮುಕ್ತನಾದವ, ಬೋಧನೆ ಏನಿದ್ದರೂ ಬೇರೆಯವರಿಗೆ - ತನಗಲ್ಲ ಎಂದೇ ಭಾವಿಸಿದಂತಿದೆ. ಈ ಸಾಲ ಮಂಜೂರಾತಿಯಲ್ಲಿ ಎಷ್ಟು ಹಣ ಲಂಚವಾಗಿ ಪಡೆಯಲಾಗಿದೆ ಎಂಬ 'ಡೀಲ್' ಇದು ಒಂದು ಕಡೆಯಾದರೆ ಸಂಸ್ಥೆಯ ಹಣವನ್ನು ಮನಬಂದಂತೆ ತನ್ನ ವೈಯಕ್ತಿಕ ಇಚ್ಛೆಯಂತೆ ದುರ್ಬಳಕೆ ಮಾಡಿದ್ದೂ ಇದೆ. ಮೊಬೈಲ್ ಖರ್ಚಿಗೆಂದು 3,33,592 ರೂಪಾಯಿಗಳನ್ನು, ಮನೆ ಅಡುಗೆ ಮಾಡುವವರಿಗೆ (ಪ್ರವಾಸೋದ್ಯಮ ಇಲಾಖೆ ನೌಕರನಿಗೆ) 4 ಲಕ್ಷ 97 ಸಾವಿರ ರೂ.ಗಳು, ಅಶೋಕಟ್ರಾವೆಲ್ಸ್ ಬೆಂಗಳೂರಿನ ವಾಹನಗಳಿಗೆ 14 ಲಕ್ಷ 95 ಸಾವಿರ ಮತ್ತು ಕಛೇರಿ - ಮನೆಗೆಂದು ನಾಲ್ಕು ಟ್ಯಾಕ್ಸಿಗಳ ಬಾಡಿಗೆ 9.8 ಲಕ್ಷ ವೆಂದು ನೀಡಲಾಗಿದೆ. ಸಾರ್ವಜನಿಕ ಸಂಸ್ಥೆಯೊಂದರ ಹಣವನ್ನು ತನ್ನ ಜೇಬಿನ ಹಣವೆಂಬಂತೆ ಮನಬಂದಂತೆ ಖರ್ಚು ಮಾಡಿರುವುದು ಸಾರ್ವಜನಿಕರ ಖಜಾನೆಗೆ ಕನ್ನ ಹಾಕಿದಂತಾಗಿದೆ. ಹೊಣೆಗಾರಿಕೆ ಇಲ್ಲದ ಇವರು ದೇಶ ರಕ್ಷಕರು!

ಈ ಮಹಾಶಯ ಮಂತ್ರಿಯಿರುವಾಗಲೇ ಪ್ರವಾಸೋದ್ಯಮ ಇಲಾಖೆ ಹೋಟೆಲ್ ಆಸ್ತಿಗಳನ್ನು ದುಗ್ಗಾಣಿಗೆ ಮಾರಿದ್ದು, ಚುನಾವಣೆ ಮುನ್ನಾ ಅವಧಿಯಲ್ಲಿ ದಿಢೀರನೆ ಸುಮಾರು 500 ಕೋಟಿ ರೂ.ಗಳ ವಿಮಾನಗಳನ್ನು ಖರೀದಿಸಿ ಕಮಿಷನ್ ಹೊಡೆದು ಬಹಿರಂಗಗೊಂಡದ್ದು ಕೆಲವು ಮಾತ್ರ. ಇಂತಹ 'ಸ್ವಯಂ ಸೇವೆ'ಗಳು ಒಂದರಡೇನಲ್ಲ. 'ಸಚ್ಚಾರಿತ್ರ್ಯ, ಶೀಲ ನಿರ್ಮಾಣ' ಮಾಡುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಧ್ಯೇಯವಾದದ 'ಫಲವಂತಿಕೆ' ಅನಂತಕುಮಾರ್‌ರವರಲ್ಲಿ ಕಾಣಬಹುದು!

ಹುಡ್ಕೋದಲ್ಲಿ ಕುಮಾರನ ಇಂತಹ ಅಂಧಾದುಂದಿ ದರ್ಬಾರನ್ನು ಪ್ರಶ್ನಿಸಿ ಸ್ವಯಂ ಸೇವಾ ಸಂಸ್ಥೆಯೊಂದು ನ್ಯಾಯಾಲಯದ ಮೊರೆ ಹೋಗಿತ್ತು. 2004 ರಲ್ಲೇ ಸುಪ್ರೀಂಕೋರ್ಟ್ ಹುಡ್ಕೋ ಹಾಗೂ ಅನಂತಕುಮಾರ್‌ಗೆ ನೋಟೀಸ್ ನೀಡಿತ್ತು. 2006 ರ ಮಾರ್ಚ್‌ನಲ್ಲಿ ಆರೋಪ ನಿಖರವಾಗಿ ಸಾಬೀತಾಗಿರುವುದನ್ನು ವಿಚಕ್ಷಣ ಆಯೋಗ ಗುರುತಿಸಿತ್ತು. ಆದರೆ ಅಂದಿನಿಂದ ಇಂದಿನವರೆಗೆ ಯಾಕೆ ಕ್ರಮ ಜರುಗಿಸಿಲ್ಲ?

ಸುಪ್ರೀಂಕೋರ್ಟ್‌ನ ನಿರ್ದೇಶನದ ನಂತರವಾದರೂ ತಪ್ಪಿತಸ್ಥ ಅಧಿಕಾರಿಗಳು ಮತ್ತು ಅನಂತಕುಮಾರ್ ಮೇಲೆ ಕ್ರಮವನ್ನು ಕ್ಷಿಪ್ರವಾಗಿ ಜರುಗಿಸಬೇಕು. ಕ್ರಿಮಿನಲ್ ಮೊಕದ್ದಮೆ ಹೂಡಬೇಕು.

○

ಚುಕ್ಕಾಣಿ ಹಿಡಿದರೆ ಏನುಗತಿ?

'ಭಯ, ಭೂಕ್, ಭ್ರಷ್ಟಾಚಾರ'ಗಳನ್ನು ತೊಡೆದುಹಾಕಲೆಂದೇ ಅವತರಿಸಿರುವುದಾಗಿ ಬಿಜೆಪಿ ನಾಯಕರು ಹೇಳಿಕೊಳ್ಳುತ್ತಿದ್ದ ಡೋಂಗಿತನ ಬಯಲುಗೊಂಡ ಪ್ರಕರಣಗಳು ಹಲವು, ಬಿಜೆಪಿ ಪಕ್ಷವು ಅನಂತಕುಮಾರನ ಮೇಲೆ ಕ್ರಮ ಕೈಗೊಳ್ಳುವ ನೈತಿಕ ಧೈರ್ಯ ತೋರುವುದೇ? ಇಂತಹ ಬಿಜೆಪಿ ನಾಯಕ ಮಹಾಶಯರು ಕರ್ನಾಟಕದ ಮುಖ್ಯಮಂತ್ರಿಯಾಗಲು 'ಹೊಸ ಧಿರಿಸು' ಹೊಲಿಸಿ ದೇಶೋದ್ಧಾರ ಮಾಡಲು ಕ್ಯೂ ನಿಂತಿರುವುದು ಎಂತಹ ದುರಂತ ಕಾದಿದೆ ಎಂಬ ಆತಂಕ ಹುಟ್ಟಿಸುತ್ತಿದೆ.


8ನೇ ತರಗತಿ ಓದುವ ಕಡು ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸೈಕಲ್ ವಿತರಿಸುವ ಕಾರ್ಯಕ್ರಮ ಕ್ರಾಂತಿಕಾರಿ ಎಂದು ಡಂಗುರ ಹೊಡೆದು ಸಾರುತ್ತಿದ್ದಾರೆ ಉಪಮುಖ್ಯಮಂತ್ರಿ ಯಡಿಯೂರಪ್ಪ. 4,70,000 ಸೈಕಲ್ ಖರೀದಿಯ ವ್ಯವಹಾರವೇ ಪ್ರಶ್ನಾರ್ಹವೆಂಬುದು ಈಗ ಹೇಳಲಾಗುತ್ತಿದೆ. ನಾಲ್ಕು ದೊಡ್ಡ ಕಂಪನಿಗಳಿಗೆ ಅನುಕೂಲವಾಗುವಂತೆ ಟೆಂಡರ್ ನಿಯಮ ರೂಪಿಸಿ, ಸೈಕಲ್ ಖರೀದಿಸಿದ್ದರಿಂದ 35 ಸಣ್ಣ ಕಂಪನಿಗಳು ಹಿಂದೆ ಸರಿಯುವಂತಾಗಿ ಸೈಕಲ್ ಒಂದಕ್ಕೆ 300 ರಿಂದ 400 ರವರೆಗೆ ಹೆಚ್ಚುವರಿ ನೀಡಲಾಗಿದೆಯೆಂದು ಒಂದು ಅಂದಾಜಿದೆ. ಅಂದರೆ ಕೊಟ್ಯಾಂತರ ಸಾರ್ವಜನಿಕರ ಹಣ ಗುಳುಂ. ಅಂದ ಹಾಗೆ ಹುಡ್ಕೋ ಅನಂತಕುಮಾರ್, ಸೈಕಲ್ ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕಾಗಿ ಬಹಿರಂಗ ಕದನ ನಡೆಸುತ್ತಾರೆ. ಆದರೆ ಇಬ್ಬರ ಅಂತರಂಗವೂ ಒಂದೇ. ಇಲ್ಲೂ ಗಳಸ್ಯ ಕಂಠಸ್ಯ. ಇನ್ನು ಸೈಕಲ್ ಸಿಕ್ಕಾಗಲೇ ಇಷ್ಟು, ಇನ್ನು ರಾಜ್ಯ ಅಧಿಕಾರ ಪೂರ್ತಿ ಸಿಕ್ಕರೆ ಇನ್ನೆಷ್ಟು?

ಛೀಮಾರಿಯಿಂದ ಕಲಿತಾರೇ?

ಅಧಿಕಾರದ ವಿಕೇಂದ್ರೀಕರಣದ ಅಂತಃಸತ್ವವನ್ನೇ ಕೊಲ್ಲುವ ಕರ್ನಾಟಕ ಪಂಚಾಯತ್ ಕಾಯ್ದೆಗೆ ತಿದ್ದುಪಡಿ ತಂದು(?) ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿದ್ದನ್ನು ರಾಜ್ಯಪಾಲರು ಅಂಕಿತ ಹಾಕದೇ ತಿರಸ್ಕರಿಸಿವುದು ಸ್ವಾಗತಾರ್ಹ. ಅವರು ಈ ತಿದ್ದುಪಡಿಗಳು ಹೇಗೆ ಮಾರಕ ಎಂಬುದನ್ನು 10 ಪುಟಗಳಲ್ಲಿ ವಿವರಿಸಿದ್ದಾರೆ.

ತಿದ್ದುಪಡಿಗಳನ್ನು ವಿವಿಧ ಸಂಘಟನೆಗಳು ಬುದ್ದಿಜೀವಿಗಳು ಹೊರಗೆ ಹಾಗೂ ವಿಧಾನಸೌಧದ ಒಳಗೆ ಪ್ರತಿಭಟಿಸಿದ್ದರು. ಸರ್ಕಾರ ಪ್ರಜಾಪ್ರಭುತ್ವ ನಿಲುಮೆಯನ್ನು ಹಿಂತೆಗೆದು ಕೊಂಡಿರಲಿಲ್ಲ. ಈಗಲಾದರೂ ಸರ್ಕಾರ ಅಂತಹ ಯತ್ನ ಕೈ ಬಿಟ್ಟೀತೇ?

ಪದಚ್ಯುತಗೊಂಡ ರಾಜಮಹಾರಾಜರು, ಸುಲ್ತಾನರ ಮತ್ತು ಪಾಳೇಗಾರಿಶಾಹಿಗಳ ಬಂಡಾಯ



ಸಿ.ಯತಿರಾಜು

1857ರ ಯುದ್ಧಗಳನ್ನು ಪದಚ್ಯುತಿಗೊಂಡ ರಾಜ ಮಹಾರಾಜರ, ಸುಲ್ತಾನರ, ಪಾಳೇಗಾರರ, ಜಮೀನ್ದಾರ, ತಾಲ್ಲೂಕ್ದಾರರ ಬಂಡಾಯವಾಗಿ ಅನೇಕ ಇತಿಹಾಸಕಾರರು ಪರಿಭಾವಿಸಿದ್ದಾರೆ. ಇದಕ್ಕೆ ಪ್ರಬಲವಾದ ಸಮರ್ಥನೆಗಳು ಕೂಡಾ ಇವೆ.

ಮೊಘಲರ ಕಡೆಯ ದೊರೆ ಬಹದ್ದೂರ್ ಷಾ ನನ್ನು ಹಿಂದೂಸ್ಥಾನದ ಸಾಮ್ರಾಟನನ್ನಾಗಿ ಘೋಷಿಸಲಾಯಿತು. ಆರಂಭದಲ್ಲಿ ಜವಾಬ್ದಾರಿ ವಹಿಸಿಕೊಳ್ಳಲು ಅವರು ನಿರಾಕರಿಸಿದರೂ ಒಮ್ಮೆ ಒಪ್ಪಿದ ನಂತರ ಮತ್ತೆ ಹಿಂದಿರುಗಿ ನೋಡಲಿಲ್ಲ. ಬಂಡಾಯದ ಅಧಿಕೃತ ನಾಯಕನನ್ನಾಗಿ ದೆಹಲಿ ಸಿಂಹಾಸನದ ಮೇಲೆ ಅವರನ್ನು ಪ್ರತಿಷ್ಠಾಪಿಸಲಾಯಿತು.

ಕಾನ್ಪುರದಲ್ಲಿ ಬಂಡಾಯಕ್ಕೆ ನೇತೃತ್ವ ನೀಡಿದವರು ನಾನಾ ಸಾಹೇಬ್. ಬ್ರಿಟಿಷರ ಕಬಳಿಕೆಯ ನೀತಿಯಿಂದಾಗಿ ಸಿಂಹಾಸನವೇರುವ ನ್ಯಾಯಯುತ ಹಕ್ಕಿನಿಂದ ವಂಚಿತನಾದ ನಾನಾ ಸಾಹೇಬ್ ಸ್ವಯಂ ಆಗಿ 'ಪೇಶ್ವಾ' ಎಂದು ಘೋಷಿಸಿಕೊಂಡು ತಾಂತ್ಯಾಟೋಪಿ ಮತ್ತು ಅಜಿಮುಲ್ಲಾರ ಬೆಂಬಲದೊಂದಿಗೆ ಬ್ರಿಟಿಷರ ವಿರುದ್ಧ ಬಂಡೆದ್ದರು.

ಮಧ್ಯ ಭಾರತದಲ್ಲಿ 1857ರ ಬಂಡಾಯದ ದಂತಕತೆಯಾಗಿರುವ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಡಾಲ್ ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯಿಂದಾಗಿ ಅನಿವಾರ್ಯವಾಗಿ ತನ್ನ ದತ್ತು ಪುತ್ರನ ಸಿಂಹಾಸನದ ಮೇಲಿನ ಹಕ್ಕನ್ನು ಪ್ರತಿಷ್ಠಾಪಿಸಲು ಅನಿವಾರ್ಯವಾಗಿ ರಣರಂಗಕ್ಕಿಳಿಯಲ್ಪಟ್ಟ ಮೇಲೆ ಅತ್ಯಂತ ಧೀರೋದಾತ್ತ ಹೋರಾಟ ಮಾಡಿ ಇಂದಿಗೂ ಈ ಹೋರಾಟದ ದಂತಕತೆಯಾಗಿದ್ದಾಳೆ.

ಔದ್‌ನಲ್ಲಿ ಬೇಗಂ ಹಜ್ರತ್ ಮಹಲ್ ಔದ್‌ನ ನವಾಬನನ್ನಾಗಿ ತನ್ನ ಮಗನಾದ ಬಿರ್‌ಜಿಸ್ ಖಾದಿರ್‌ನನ್ನು ಪ್ರತಿಷ್ಠಾಪಿಸಿ ಲಕ್ನೋದ ಬ್ರಿಟಿಷ್ ವಸತಿಗಳಿಗೆ ದಿಗ್ಬಂಧನ ಹಾಕಿ ಬ್ರಿಟಿಷರ ವಿರುದ್ಧ ಅತ್ಯಂತ ವೀರಾವೇಶದಿಂದ ಹೋರಾಡಿದಳು. ಬೇಗಂಳ ಈ ಹಿಡಿತವನ್ನು ಸಡಿಲಿಸಿ ಅಲ್ಲಿದ್ದ ಬ್ರಿಟಿಷ್ ಪ್ರಜೆಗಳನ್ನು ಪಾರು ಮಾಡಲು ಆಂಗ್ಲ ಸೈನ್ಯ ಸಾಕಷ್ಟು ದೀರ್ಘಕಾಲ ಪ್ರಯತ್ನಿಸಬೇಕಾಯಿತು.

ಜಗದೀಶ್‌ಪುರದ ಕುವ್ವರ್‌ಸಿಂಗ್ ಮತ್ತು ಅಮರ್‌ಸಿಂಗ್ ಬ್ರಿಟಿಷರನ್ನು ಅಪಾರವಾಗಿ ಕಾಡಿದರು. 80 ವರ್ಷದ ವಯೋವೃದ್ಧ ಕುವ್ವರ ಸಿಂಗ್ ಒಂದೇ ಕೈನಿಂದ ಹೋರಾಡಬೇಕಾಗಿ ಬಂದರೂ ಧೃತಿಗೆಡದೆ ಸೈನಿಕರಿಗೆ, ಜಮೀನ್ದಾರರಿಗೆ ತಾಲ್ಲೂಕುದಾರರಿಗೆ ನೇತೃತ್ವ ನೀಡಿ ಅತ್ಯಂತ ಸ್ಫೂರ್ತಿದಾಯಕ ಹೋರಾಟ ಮಾಡಿದರು. ರೇವಾ, ಕಲ್ಪಿ, ಕಾನ್ಪುರ, ಲಕ್ನೋ, ಅಜಮ್‌ಘರ್ ಮುಂತಾದ ಭಾಗಗಳಲ್ಲಿ ಬ್ರಿಟಿಷ್ ಪಡೆಗಳಿಗೆ ಅಪಾರ ಹಾನಿಯನ್ನು ಕುವ್ವರ್‌ಸಿಂಗ್ ಮತ್ತು ಅಮರ್‌ಸಿಂಗ್ ಉಂಟು ಮಾಡಿದರು.

ಬರೈಲಿಯ ಖಾನ್ ಬಹಾದ್ದೂರ್ ಖಾನ್ ವೀರಾವೇಶದಿಂದ ಹೋರಾಡಿ ಅಂತಿಮವಾಗಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟನು.

ಜನರನ್ನುದ್ದೇಶಿಸಿದ್ದ ಘೋಷಣೆ

ಈ ಅರಸರ ಆರಂಭದ ಮನವಿಗಳಲ್ಲಿ ಹಿಂದಿನ ಪಾಳೇಗಾರಿಶಾಹಿ ಆಡಳಿತವನ್ನು ಪುನರ್ ಪ್ರತಿಷ್ಠಾಪಿಸುವ ಆಶಯಗಳು ಅಭಿವ್ಯಕ್ತಿಗೊಂಡಿದ್ದವು. ಆದರೆ ರಾಜರು ತಾಲ್ಲೂಕುದಾರರು, ಜಮೀನ್ದಾರರು ಬೃಹತ್ ವಸಾಹತು ಸಾಮ್ರಾಟರ ವಿರುದ್ಧವಾಗಿ ಹೋರಾಡಲು ಆರಂಭಿಸಿದ ನಂತರ ಅನೇಕ ಜನಪ್ರಿಯ ಪರಿಸ್ಥಿತಿಗಳ ಒತ್ತಡಗಳು ಅವರ ದೃಷ್ಟಿಕೋನ ಮತ್ತು ಮನೋಭಾವಗಳಲ್ಲಿ ಬದಲಾವಣೆಗಳನ್ನುಂಟು ಮಾಡಿದವು. ಈ ಹೋರಾಟದ ನೇತೃತ್ವ ವಹಿಸಿಕೊಂಡಿದ್ದ ಪಾಳೇಗಾರಿಶಾಹಿ ರಾಜ ಮಹಾ ರಾಜರುಗಳು ಘೋಷಣಪತ್ರಗಳನ್ನು ಹೊರಡಿಸಿದಾಗ ಅವುಗಳು ಜನ ಸಾಮಾನ್ಯರನ್ನುದ್ದೇಶಿಸಿದ ಘೋಷಣೆಗಳಾಗಿದ್ದವು. 1857ರ ಜುಲೈನಲ್ಲಿ ಔದ್ ನವಾಬನಾದ ಬಿರ್‌ಜಿಸ್ ಖಾದಿರ್‌ನ ಮುದ್ರಿತ ಘೋಷಣೆ 2 ಭಾಷೆಗಳಲ್ಲಿ ಜೊತೆಯಾಗಿಯೇ ಮುದ್ರಿಸಲ್ಪಟ್ಟಿತ್ತು. ಅದರ ಬಲಭಾಗದಲ್ಲಿ ಉರ್ದು ಭಾಷೆಯನ್ನು ಹಾಗೂ ಎಡಭಾಗದಲ್ಲಿ ನಾಗರಿ ಭಾಷೆಯನ್ನು ಬಳಸಲಾಗಿದ್ದರೂ, ಭಾಷೆಗಳ ಬಳಕೆಯಲ್ಲಿ ಸಾಮ್ಯತೆ ಇತ್ತು. ಉರ್ದು ಭಾಷೆಯ ಬರಹದಲ್ಲಿ ಅತಿಕಡಿಮೆ ಪರ್ಶಿಯನ್ ಪದಗಳು ಬಳಸಲ್ಪಟ್ಟಿದ್ದರೆ ನಾಗರೀ ಭಾಷೆಯ ಬರಹದಲ್ಲಿ ಅತಿ ಕಡಿಮೆ ಪ್ರಾಕೃತ ಪದಗಳ ಬಳಕೆ ಮಾಡಿ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗಬಹುದಾದ ಶೈಲಿಯಲ್ಲಿ ಬರೆಯಲಾಗಿತ್ತು. ನವಂಬರ್ 1857ರಲ್ಲಿ ವಿಕ್ಟೋರಿಯಾ ರಾಣಿ ಹೊರಡಿಸಿದ ಘೋಷಣೆಗೆ ಉತ್ತರ ರೂಪವಾಗಿ ಹೊರಡಿಸಿದ ಘೋಷಣೆಗಳ ಆರಂಭದಲ್ಲಿಯೇ



ಸೈನಿಕರು ಮತ್ತು ಜನರಿಗೆ ರಾಣಿ ವಿಕ್ಟೋರಿಯಾಳ ಮೋಸ ಮತ್ತು ವಂಚನೆಯನ್ನು ನಂಬದಿರುವಂತೆ ಕರೆ ನೀಡಲಾಗಿದೆ.

ಪಾಳೇಗಾರಶಾಹಿ ಬಂಡಾಯವಲ್ಲ


ಇಷ್ಟೆಲ್ಲಾ ಆದರೂ 1857ರ ಬಂಡಾಯವನ್ನು ಪಾಳೇಗಾರಿಶಾಹಿ ಬಂಡಾಯವೆಂದು ಕರೆಯಲಾಗುವುದಿಲ್ಲ. ರಾಜ ಮಹಾರಾಜರು, ನವಾಬರು, ತಾಲ್ಲೂಕುದಾರರು, ಜಮೀನ್ದಾರರು ಸೈನಿಕರು ಮತ್ತು ಸಾಮಾನ್ಯರೊಂದಿಗೆ ಸೇರಿಕೊಂಡು ಹೋರಾಡಿದರು. ಏಕೆಂದರೆ ಅವರು ದುರಾಕ್ರಮಣಕಾರಿ ಈಸ್ಟ್ ಇಂಡಿಯಾ ಕಂಪನಿಯ ದೌರ್ಜನ್ಯಪೂರಿತ ದುರಾಕ್ರಮಣಕ್ಕೆ ಬಲಿಯಾಗಿ... ಬಂಡಾಯ ಮುಂದುವರಿಯುತ್ತಾ ಹೊದ... ಜನಪ್ರಿಯ ಒತ್ತಡಗಳು ಅವರನ್ನು ರಣರಂಗ... ತಂದವು.

ಅನೇಕ ರಾಜರು, ಪಾಳೇಗಾರರು ... ಜಮೀನ್ದಾರರು ಬ್ರಿಟಿಷರ ಬೆಂಬಲಕ್ಕೆ ನಿ... ಗ್ವಾಲಿಯರ್‌ನ ಸಿಂಧ್ಯಾ ಅರಸರು ಪಾಟಿ... ಮತ್ತು ನೇಪಾಳದ ಅರಸರು ಬ್ರಿಟಿಷ... ಬೆಂಬಲಿಸಿದರು. ಇವರುಗಳ ಬೆಂಬಲವಿಲ್ಲ... ಬ್ರಿಟಿಷರು ಈ ದೇಶದಲ್ಲಿ ಬದುಕು... ಸಾಧ್ಯವಿರಲಿಲ್ಲ. ಪಾಳೇಗಾರಿಶಾ... ನಾಯಕತ್ವದಲ್ಲಿನ ವಿಫಲತೆಗಳು ಬಂಡಾಯಕ್ಕೆ ... ವೇಳೆ ದೊಡ್ಡ ಹೊಡೆತಗಳನ್ನು ಕೊಟ್ಟವು. ಅ... ಅಪನಂಬಿಕೆ, ಅನೈಕ್ಯಮತ್ಯ ಮತ್ತು ವ್ಯವಸ್ಥಿತ... ಕ್ರಿಯಾ ಯೋಜನೆಗಳಿಲ್ಲದಿರುವುದು ಬಂಡಾ... ಹಿನ್ನಡೆಯನ್ನುಂಟು ಮಾಡಿದವು. ಅ... ನಿರ್ಣಾಯಕ ಸಮಯದಲ್ಲಿ... ಪಾಳೇಗಾರಿ ಶಾಹಿ ಮುಖಂಡರು ... ಪಕ್ಷಗಳನ್ನು ಬದಲಿಸಿ ಬ್ರಿಟಿಷರೊ... ರಾಜಿಯಾಗಿ ಹೋರಾಟಕ್ಕೆ ದ್ರೋ... ಬಗೆದರು.

ಪಂಡಿತ್ ಜವಹರ್‌ಲಾ... ನೆಹರೂ ತಮ್ಮ 'Discove... India' ಪುಸ್ತಕದಲ್ಲಿ 18... ಹೋರಾಟವನ್ನು ಮೂಲಭೂತ... ಒಂದು ಪಾಳೇಗಾರಿ... ಬಂಡಾಯವಾಗಿ ಗುರುತಿಸು... ಎಂ.ಎನ್.ರಾಯ್ 18... ಕ್ರಾಂತಿಯನ್ನು ರಾಜಕೀಯ ಮೇಲ್ಮೆ ಸಾಧ... ಹೊಸದಾಗಿ ರೂಪಿತಗೊಂಡ ವಾ... ಬಂಡವಾಳಶಾಹಿ ಮತ್ತು ಸವಕಲಾ... ಪಾಳೇಗಾರಿಶಾಹಿಗಳ ನಡುವಿನ ಸಂಘರ್ಷ... ವಿವರಿಸುತ್ತಾರೆ. 1857ರ ಬಂಡಾಯದ ಸೋ... ಅವರು ಪಾಳೇಗಾರಿಶಾಹಿಯ ಪುಡಿಗ... ಅವಸಾನವನ್ನು ಕಾಣುತ್ತಾರೆ. ಭಾರತ... ಅರಸೊತ್ತಿಗೆಗಳನ್ನು ಅವರು ಮಧ್ಯಯು... ನಿರಂಕುಶ ಆಳ್ವಿಕೆಯ ವಸ್ತು ಸಂಗ್ರಹಾಲಯ... ತುಂಡುಗಳೆಂದು ಕರೆಯುತ್ತಾರೆ.

ಗೊತ್ತಿಲ್ಲ ಮಗು.....

"ಅಪ್ಪ ತುಂಬಾ ದೊಡ್ಡ ಕನಸುಗಳನ್ನು ಕಾಣಬೇಕಂತೆ"
"ಹೌದು ಮಗು ಹಾಗಂತ ನಮ್ಮ ರಾಷ್ಟ್ರಪತಿ ಅಬ್ದುಲ್ ಕಲಾಂರವರು ಹೇಳುತ್ತಿರುತ್ತಾರೆ"
"ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಪ್ರಯತ್ನ ಮಾಡಬೇಕಂತೆ ಹೌದೇನಪ್ಪ?"
"ಹೌದು ಮಗು, ಹಾಗಂತ ಅಬ್ದುಲ್ ಕಲಾಂ ಸರ್ ಹೇಳ್ತಿರ್‍ತಾರೆ"
"ಅಪ್ಪ, ತೃತೀಯ ರಂಗದವರು ಅಬ್ದುಲ್ ಕಲಾಂರವರನ್ನು ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದರು"
"ಹೌದು ಮಗು, ಬಿ.ಜೆ.ಪಿಯವರೂ ಸಪೋರ್ಟ್ ಮಾಡಿದ್ದರು"
"ಆದ್ರೆ ಅಪ್ಪ, ಅವರು ಗೆಲ್ಲುವುದು ಖಚಿತವಾದರೆ ಮಾತ್ರ ಸ್ಪರ್ಧೆ ಮಾಡ್ತೀನಿ ಅಂದರಂತೆ"
"ಹೌದು ಮಗು"
"ಹಾಗಾದ್ರೆ ಅಪ್ಪ, ಕಲಾಂ ಸರ್ ಎರಡನೇ ಅವಧಿಗೆ ರಾಷ್ಟ್ರಪತಿಯಾಗುವ ದೊಡ್ಡ ಕನಸು ಕಾಣಲಿಲ್ಲ ಅಲ್ಲವೇ?"
"ಗೊತ್ತಿಲ್ಲ ಮಗು"
"ಅವರು ಪ್ರಯತ್ನವನ್ನೂ ಮಾಡಲಿಲ್ಲ ಅಲ್ವ



ಶ್ರೀನಿವಾಸ

ಅಪ್ಪ?"
"ದೊಡ್ಡವರ ವಿಚಾರ, ನನಗೆ ಗೊತ್ತಿಲ್ಲ ಮಗು"

—— o ——

"ಅಪ್ಪ, ತೃತೀಯ ರಂಗದವರು ಉಪರಾಷ್ಟ್ರಪತಿ ಸ್ಥಾನಕ್ಕೆ ತಮ್ಮ ಅಭ್ಯರ್ಥಿಯನ್ನು ನಿಲ್ಲಿಸುತ್ತಾರಂತೆ"
"ಹೌದು ಮಗು"
"ಅಪ್ಪ, ತೃತೀಯ ರಂಗದವರು ಶೇಖಾವತ್ ಅವರನ್ನು ನಿಲ್ಲಿಸಬಹುದಾ?"
"ಯಾಕೆ ಮಗು"
"ಯಾಕೆಂದ್ರೆ ಅಪ್ಪ, ತೃತೀಯ ರಂಗದವರಿಗೆ ದ್ವಿತೀಯ ಅವಧಿ ಅಂದ್ರೆ ಇಷ್ಟ ಅಂತ ಕಾಣುತ್ತೆ ಅಲ್ವಾ?"
"ಗೊತ್ತಿಲ್ಲ ಮಗು"
"ಅಪ್ಪ ತೃತೀಯ ರಂಗದವರಿಗೆ ಮತದಾನ ಬಹಿಷ್ಕಾರ ಮಾಡೋಕೆ ಒಂದು ನೆಪ ಬೇಕು ಅದಕ್ಕೆ ಇಂಥ ಅಭ್ಯರ್ಥಿಗಳನ್ನು ನಿಲ್ಲಿಸ್ತಾರೆ ಅನ್ನಿಸುತ್ತೆ ಅಲ್ವಾ?"
"ಗೊತ್ತಿಲ್ಲ ಮಗು"

—— o ——

"ಅಪ್ಪ ಉಪರಾಷ್ಟ್ರಪತಿ ಸ್ಥಾನಕ್ಕೆ ಬಿಜೆಪಿಯವರು ಮಹಿಳೆಯರನ್ನು ನಿಲ್ಲಿಸುತ್ತಾರಂತೆ"
"ಹೌದು ಮಗು"
"ರಾಷ್ಟ್ರಪತಿ ಸ್ಥಾನಕ್ಕೆ ಮಹಿಳಾ ಅಭ್ಯರ್ಥಿಯನ್ನು ವಿರೋಧಿಸಿದ್ದರಿಂದ ತಮಗೆ ಮಹಿಳಾ ವಿರೋಧಿ ಅನ್ನೋ ಕಳಂಕ ಬರಬಾರದು ಅಂತ ... ನಿರ್ಧಾರಾನಾ ಅಪ್ಪಾ?"
"ಗೊತ್ತಿಲ್ಲ ಮಗು"
"ಅಪ್ಪಾ ಶೇಖಾವತ್‌ರವರು ರಾಷ್ಟ್ರಪತಿ ಸ್ಥಾ... ಸ್ವತಂತ್ರ ಅಭ್ಯರ್ಥಿ ಅಂತೆ"
"ಹೌದು ಮಗು"
"ಇದನ್ನು ಪ್ರಕಟಿಸಿದ್ದು ಬಿಜೆಪಿಯವರ... ಯಾಕಪ್ಪಾ?
"ಗೊತ್ತಿಲ್ಲ ಮಗು"

—— o ——

"ವಿರೋಧ ಪಕ್ಷದ ಬೆಂಬಲ ಇರೋದ್ರಿ... ಅವರನ್ನು ವಿರೋಧಿ ಅಭ್ಯರ್ಥಿ ಅ... ಕರಿಬಹುದು ಅಲ್ವ ಅಪ್ಪ?"
"ಹೌದು ಮಗು"
"ಎರಡನ್ನೂ ಸೇರಿಸಿ ಅವರನ್ನು 'ಸ್ವತ... ವಿರೋಧಿ' ಅಭ್ಯರ್ಥಿ ಎಂದು ಕರೆಯಬಹುದ... ಅಪ್ಪ?"
"ಗೊತ್ತಿಲ್ಲ ಮಗು"

ಪಿಎಂಸಿ ಕಾಯ್ದೆ ತಿದ್ದುಪಡಿ



ಜನ ಬೇಡ ಬೇಡವೆಂದರೂ ಎಪಿಎಂಸಿ ಕಾಯ್ದೆಗೆ ಪಡಿತರಲಾಗಿದೆ. ರೈತರು ಮತ್ತು ರಾಜ್ಯದ ಜನರ ಬೆನ್ನಿಗೆ ಇರಿಯಲಾಗಿದೆ.

ೈತನ ಬೆನ್ನಿಗೆ ಇರಿತ

ರಕವಿ ದ.ರಾ.ಬೇಂದ್ರೆಯವರು ದೇಶಕ್ಕೆ ಅನ್ನ ರ ರೈತನನ್ನು ಭೂಮಿಯ ತಾಯಿಯ ಮಗ ಎಂದು ಕರೆದರು. ರಾಷ್ಟ್ರ ಕವಿ ಕುವೆಂಪು ತು ನೇಗಿಲ ಯೋಗಿ ಎಂದು ಹಾಡಿದರು. ಬ್ಬರೂ ರೈತನ ಸಂಕಷ್ಟಗಳನ್ನು ಅತ್ಯಂತ ರಿಂದ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ ಕವಿಗಳು. ರಿಗೆ ಇಂತಹ ಬಿರುದು ಬಾವಲಿ ವ ವಿಚಾರದಲ್ಲಿ ನಮ್ಮ ಆಳುವ ನು ಕಡಿಮೆ ಇಲ್ಲ. ಮೈಕ್ ಸಿಕ್ಕರೆ ತ, ದೇಶದ ಬೆನ್ನೆಲುಬು ಎಂದು ಕತೆಗಾರರೂ ನಾಚಿಕೊಳ್ಳಬೇಕು ೈತನ ಬಗ್ಗೆ ಮಾತನಾಡುತ್ತಾರೆ. ಆದರೆ ಜಾರಿಗೆ ತರುತ್ತಿರುವ ನೀತಿಗಳು ರೈತನ ಬೆನ್ನಿಗೆ ಇರಿಯುವಂತಹ ಾಗಿವೆ.

ದೇ ಜುಲೈ 17 ರಂದು ಕರ್ನಾಟಕದ ಸಭೆಯು ಕರ್ನಾಟಕ ಕೃಷಿ ಉತ್ಪನ್ನ ಕಟ್ಟೆ ವ್ಯವಹಾರ (ನಿಯಂತ್ರಣ) ಡಿ ವಿಧೇಯಕವನ್ನು ಅಂಗೀಕರಿಸುವ ಕ ರೈತ ಸಮುದಾಯ ಹೊತ್ತು ುವ ಸಂಕಷ್ಟಗಳ ಮಣ ಭಾರಕ್ಕೆ ಮತ್ತಷ್ಟು ಯನ್ನು ಹೇರಲಾಗಿದೆ.

ದುವರೆಗೆ ನಮ್ಮ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ಂತ್ರಣ) ಅಧಿನಿಯಮ -1966 ಎಂಬ ಕಾಯ್ದೆ.

ರು ನಮ್ಮ ರೈತರು

ಮ್ಮ ರೈತರು ಮುಗ್ಧರು ಸಾಮಾನ್ಯವಾಗಿ ನೆ, ಥಳುಕು, ಬಳುಕು ಮಾಡಲು ಗೊತ್ತಿಲ್ಲದ ಪ್ರಾಮಾಣಿಕರು. ತಮಗೆ ಯಾರಾದರೂ ವಂಚಿಸಲು ಬರುವರೆಂದರೆ ಅದನ್ನು ಅರಿಯಲಾರದಂತಹವರು, ಅಥವಾ ಅದನ್ನು ಎದುರಿಸಲಾರದಂತಹವರು. ಹೀಗಾಗಿ ಅವರು ಬೆಳೆದ ಬೆಳೆಗೆ, ನ್ಯಾಯಬದ್ಧವಾದ ಬೆಲೆ, ಸರಿಯಾಗಿ ತೂಕ ಮಾಡುವುದು, ಸರಿಯಾದ ಮಾರುಕಟ್ಟೆ ವ್ಯವಸ್ಥೆ, ಉತ್ಪನ್ನಗಳ ಶೇಖರಣೆಗೆ



ಸಂಗ್ರಹ ವ್ಯವಸ್ಥೆ ಮಾಡುವುದು, ತಮ್ಮರಕ್ತ ಹೀರಲು ಬರುವ ದುಷ್ಟ ಶಕ್ತಿಗಳಿಂದ ಕನಿಷ್ಠ ರಕ್ಷಣೆ ನೀಡುವುದು ಅಗತ್ಯವೆಂಬ ವ್ಯಾಪಕ ಜನಾಭಿಪ್ರಾಯ, ಒತ್ತಡದಿಂದ 1966ರ ಎ.ಪಿ.ಎಂ.ಸಿ. ಕಾಯ್ದೆಯಂತಹ ಕಾಯ್ದೆಯೊಂದು ರೂಪುಗೊಂಡಿತ್ತು.

ಇದುವರೆಗೆ ಇದ್ದುದೇನು?

ಈ ಕಾಯ್ದೆಯ ಪ್ರಕಾರ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ರಚಿಸಿ ಅವುಗಳಿಗೆ ನಿರ್ದಿಷ್ಟ ವ್ಯಾಪ್ತಿ ನಿಗದಿ ಮಾಡಲಾಗಿದೆ. ಅಂದರೆ ಬೆಳೆದ ಬೆಳೆಯನ್ನು ಎಲ್ಲೆಲ್ಲಿಯೋ ಮಾರುವಂತಿಲ್ಲ, ಕೊಳ್ಳುವಂತಿಲ್ಲ. ನಿರ್ದಿಷ್ಟ ಮಾರುಕಟ್ಟೆಗೇ ಬರಬೇಕು. ಯಾವುದೇ ಖಾಸಗಿ ಕಂಪನಿ ನೇರವಾಗಿ ರೈತರ ಬಳಿ ಕೃಷಿ ಉತ್ಪನ್ನ ಖರೀದಿಸುವಂತಿಲ್ಲ. ಕೃಷಿ ಮಾರುಕಟ್ಟೆಗೆ ತಂದ ಮೇಲೆ ಸಹ ರೈತರ ಪರಿವಾರ ಹಲವು ರಕ್ಷಣಾ ನಿಯಮಗಳಿವೆ.

ಇದುವರೆಗೆ ಜಾರಿಯುಲ್ಲಿದ್ದ ಮಾರುಕಟ್ಟೆ ವ್ಯವಸ್ಥೆ ಪರಿಪೂರ್ಣವಾಗಿತ್ತು ಎಂದೇನೂ ಅಲ್ಲ. ಹಲವು ಕೊರತೆಗಳು ಸಮಸ್ಯೆಗಳ ನಡುವೆಯೂ ರೈತರಿಗೆ ಕೆಲವು ಕನಿಷ್ಠ ರಕ್ಷಣೆ, ಭದ್ರತೆಯನ್ನು ಇವು ಒದಗಿಸಿದ್ದವು. ಸುಗ್ಗಿಯ ಕಾಲವೇ ಇರಲಿ ಮತ್ತೊಂದೇ ಇರಲಿ ಬೆಳೆಗೆ ಬೆಲೆ ಕುಸಿದರೆ ಸರ್ಕಾರದ ಬೆಂಬಲ ಬೆಲೆಯ ಒಂದು ಆಧಾರ ಸಿಗುತ್ತಿತ್ತು.

ಈಗ ಏನೇನು ತಿದ್ದುಪಡಿ ತಂದಿದ್ದಾರೆ:

ಎಲ್ಲಕ್ಕಿಂತ ಮುಖ್ಯವಾಗಿ ಖಾಸಗಿ, ವ್ಯಕ್ತಿಗಳು ಕಂಪನಿಗಳು ಎಪಿಎಂಸಿ ಮಾರುಕಟ್ಟೆಯ ಪ್ರಾಂಗಣದಲ್ಲೇ ಅದರ ತೀರಾ ಪಕ್ಕದಲ್ಲೇ ತಮ್ಮ ಖಾಸಗಿ ಮಾರುಕಟ್ಟೆ ಸ್ಥಾಪಿಸಬಹುದು. ಮತ್ತು ಖಾಸಗಿ ಕಂಪನಿಗಳು ರೈತರೊಂದಿಗೆ ಒಪ್ಪಂದ ಮಾಡಿಕೊಂಡು ನಡೆಸಲಾಗುವ ಕರಾರು ಕೃಷಿ, ಅಥವಾ ಒಪ್ಪಂದದ ಕೃಷಿಗೆ ಅನುಮತಿ ನೀಡಲಾಗಿದೆ.

ಪುಟ 11 ಕ್ಕೆ

ಈಗ ಯಾರಾದರೂ ಆಗಲಿ ಕೃಷಿ ಉತ್ಪನ್ನಗಳನ್ನು ಕೃಷಿ ಮಾರುಕಟ್ಟೆಯಲ್ಲೇ ಕೊಳ್ಳಬೇಕು, ಮಾರಬೇಕು ಎಂಬ ನಿಯಮವೇನಿಲ್ಲ. ಕಂಪನಿಗಳೇ, ಖಾಸಗಿ ವ್ಯಕ್ತಿಗಳೇ ರೈತರ ಹೊಲ ಗದ್ದೆಗಳ ಬಳಿ ಖರೀದಿ ನಡೆಸಬಹುದು. ಇದಲ್ಲದೆ ಕೃಷಿ ಉತ್ಪನ್ನಗಳ ಸಂಸ್ಕರಣೆ, ಅಂದರೆ ಒಣಗಿಸುವುದು, ಪಾಲಿಶ್ ಮಾಡುವುದು, ತೊಗಟೆ ತೆಗೆಯುವುದು, ಹೊಟ್ಟು ತೆಗೆಯುವುದು ತ್ಯಾದಿ ಹತ್ತಾರು ಬಗೆಯ ಕೆಲಸಗಳಿಗೆ ಖಾಸಗಿ, ಬಹುರಾಷ್ಟ್ರೀಯ ಕಂಪನಿಗಳು ಕೈ ಹಾಕಲು ಅವಕಾಶ ನೀಡಲಾಗಿದೆ.

ಇದಲ್ಲದೆ ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಳ್ಳುವ ಎಪಿಎಂಸಿ ಸಮಿತಿಯ ಸಂರಚನೆಯಲ್ಲಿ ನಾಮಕರಣ, ನಿಯಮಗಳು, ರೈತ

ಪುಟ 11 ಕ್ಕೆ

ಹಿಂಗವ್ರೆ ನಮ್ಮ ನೇತಾರ‍್ರು

ಯಾರ‍್ಯಾರ ಬಣ್ಣ ಏನೆಂದು ನೋಡಿ

ಎಪಿಎಂಸಿ ಕಾಯ್ದೆ ತಿದ್ದುಪಡಿಯಂತಹ ಒಂದು ಮಹತ್ವದ ಕಾಯ್ದೆ ಬಗೆಗೆ ರಾಜ್ಯದ ವಿಧಾನ ಸಭೆಯಲ್ಲಿ ಚರ್ಚೆ ನಡೆದಿದೆ. ಚರ್ಚೆಯಲ್ಲಿ ಯಾರ‍್ಯಾರ ಬಣ್ಣ ಹೇಗೆ ಎಂದು ಬಯಲಾಗಿರುವ ಪರಿ ನೋಡಿ.

ಕಾಂಗ್ರೆಸ್ ಒಂದು ಪಕ್ಷವಾಗಿ ಒಂದು ನಿಲುವು ತೆಗೆದುಕೊಂಡೇ ಇಲ್ಲ. ಪ್ರತಿಯೊಬ್ಬರು ತಮಗೆ ತೋಚಿದಂತೆ ಚರ್ಚೆ ಎಳೆದಾಡಿದ್ದಾರೆ. ಮೊದಲು ಕಾಂಗ್ರೆಸ್ಸಿಗರು ತಿದ್ದುಪಡಿ ಪರವಾಗಿದ್ದಂತಿದ್ದರು.

ಜುಲೈ 16 ರಂದು ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ತಿದ್ದುಪಡಿಯ ಅಪಾಯಗಳ ಕುರಿತು ಎಳೆ ಎಳೆಯಾಗಿ ಸದನದಲ್ಲಿ ಎರಡೂವರೆ ಗಂಟೆ ಮಾತನಾಡಿದ ಮೇಲೆ ಹೇಗಾದರೂ . ಅದನ್ನು ಅಂದೇ ಸದನದಲ್ಲಿ ಪಾಸು ಮಾಡಿ ಬಿಡಲು ಕಾತರರಾಗಿದ್ದವರು ಬೆಚ್ಚಿ ಬಿದ್ದು ಅಥವಾ ಬೆಚ್ಚಿದಂತೆ ಮಾಡಿ ಹೀಗಿದೆಯೇ? ಎಂದು ರಾಗ ಬದಲಿಸಿದ್ದಾರೆ. ಧರ್ಮಸಿಂಗ್‌ರವರು ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಬೇಕೆಂದಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್, ಶ್ರೀನಿವಾಸಗೌಡ, ಕೃಷ್ಣಭೈರೇಗೌಡ, ಇವರೆಲ್ಲಾ ತಿದ್ದುಪಡಿ ಅಂಗೀಕಾರವಾಗದೇ ಹೋದರೆ ಆಕಾಶ ತಲೆ ಮೇಲೆಯೇ ಬೀಳಲಿದೆ ಎಂಬಂತೆ ಚಡಪಡಿಸಿದ್ದಾರೆ.

ಈ ಮಧ್ಯೆ ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಇಂಥಾ ತಿದ್ದುಪಡಿ ಆಗಿಯೇ ಹೋಗಿದೆ ಎಂಬ ಆಧಾರ ರಹಿತ ಮಾತುಗಳು ಕೇಳಿ ಬಂದು ಶ್ರೀರಾಮರೆಡ್ಡಿ ಅದಕ್ಕೆ ಹಾಗಾಗಿಲ್ಲ ಎಂಬ ಸ್ಪಷ್ಟನೆ ನೀಡಿದ್ದಾರೆ.

ಇದಲ್ಲದೇ ಜೆಡಿ(ಯು)ನ ಮಾಧುಸ್ವಾಮಿ ಯವರು ಸೂಚಿಸಿರುವ ತಿದ್ದುಪಡಿ ಸೂಚನೆ ಪ್ರತಿ ಎಲ್ಲರಿಗೂ ಸಿಕ್ಕದೆ ಆಕ್ಷೇಪವೆತ್ತಲಾಗಿದೆ. ನಿಯಮಗಳ ಪ್ರಕಾರ ಇಂತಹ ತಿದ್ದುಪಡಿಗಳನ್ನು ಶಾಸಕರಿಗೆ ನೀಡಿದ 2 ದಿನಗಳ ನಂತರವಷ್ಟೇ ಅಂಗೀಕರಿಸಬಹುದು. ಸ್ಪೀಕರರ ದ್ವಂದ್ವ, ಮಸೂದೆ ಬಗೆಗೆ ಚರ್ಚಿಸಬೇಕಾದ ಕಾಂಗ್ರೆಸ್ ಧುರೀಣ ಖರ್ಗೆ ಮುಂತಾದವರ ನಾಪತ್ತೆ, ಜಿ.ವಿ.ಶ್ರೀರಾಮರೆಡ್ಡಿ, ವಾಟಾಳ್ ನಾಗರಾಜ್, ಮಾಧುಸ್ವಾಮಿಯವರ ವಿರೋಧ - ಸಭಾತ್ಯಾಗದ ನಡುವೆ ತಿದ್ದುಪಡಿ ಮಸೂದೆ ಜುಲೈ 17 ರಂದು ಅಂಗೀಕಾರ ಆಗೇ ಹೋಯ್ತು. ಜಂಟಿ ಆಯ್ಕೆ ಸಮಿತಿ ರಚಿಸಿ ಅದು ತಿದ್ದುಪಡಿ ಪರಿಶೀಲಿಸಲಿ ಎಂದಿದ್ದ, ವಿರೋಧಪಕ್ಷ ಕಾಂಗ್ರೆಸ್‌ನ ಧುರೀಣರ ನಿಲುವು ರಾತ್ರೋರಾತ್ರಿ ಬದಲಾಗಿ ಹೋಯ್ತು!

ಪುಟ 10 ಕ್ಕೆ

ರಾರು ಕೃಷಿ ಎಂಬ ಸುಂದರ ಕತ್ತಿ

ದ್ದುಪಡಿಯ ಮೂಲಕ ರಾಜ್ಯದಲ್ಲಿ ಗುತ್ತಿಗೆ ಕೃಷಿ ಥವಾ ಕರಾರು ಕೃಷಿಗೆ ಅವಕಾಶ ಡಿಕೊಡಲಾಗಿದೆ. ಗುತ್ತಿಗೆ ಕೃಷಿ ಎಂದರೆ ಸಗಿ, ಬಹುರಾಷ್ಟ್ರೀಯ ಕಂಪನಿಗಳು ಮತ್ತು ರ ನಡುವೆ ಒಪ್ಪಂದವೇರ್ಪಟ್ಟು ಅದರಂತೆ ಬೆಳೆಯುವುದು. ಇಲ್ಲಿ ಬೆಲೆಯೂ ಮೊದಲೇ ದಿ ಯಾಗಿರುತ್ತದೆ. ರೈತರಿಗೆ ಕಂಪನಿಯೇ ಬೀಜ, ಬ್ಬರ, ಔಷಧಿ ಎಲ್ಲವನ್ನೂ ಪೂರೈಸುತ್ತದೆ. ರ್ಗದರ್ಶನವನ್ನು ನೀಡುತ್ತದೆ. ಉತ್ಪನ್ನವನ್ನು ಪನಿಯೇ ಪಡೆದುಕೊಳ್ಳುತ್ತದೆ.

ಇದರಿಂದ ರೈತರಿಗೆ ತುಂಬಾ ಅನುಕೂಲ, ೆ ಕುಸಿತದ ಆತಂಕವಿಲ್ಲ, ರೈತ ಕೃಷಿಯ ಖರ್ಚು ಗಳಿಗೆ ಹಣ ಹೊಂದಿಸಬೇಕಾದ ಅಗತ್ಯವಿಲ್ಲ ದು ಸರ್ಕಾರ ವಾದಿಸುತ್ತದೆ.

ಆದರೆ ಒಪ್ಪಂದದ ಕರಾರು ಒಂದು ಸುಂದರ ಯಂತೆ, ಅದರ ಕುರಿತು ಓದುವಾಗ, ಅಥವಾ ಸುವಾಗ ಆಗುವ ಸಂತೋಷ ವಾಸ್ತವವಾಗಿ ರಿಯಾಗುವಾಗ ಇರುವುದು ಸಾಧ್ಯವಿಲ್ಲ. ಗುತ್ತಿಗೆ ಯ ಅನುಭವ ಭಿನ್ನವಾಗಿದೆ. ಅದು ಸುಂದರ ಯಾದರೂ ಪರಿಣಾಮ ಭೀಕರವಾಗಿದೆ.

ಾರ ಭದ್ರತೆಗೆ ಅಪಾಯ

ಮುಖ್ಯವಾಗಿ ಇಂತಹ ಕರಾರು ಒಪ್ಪಂದದಿಂದ ದೇಶದ ಕೃಷಿಯ ಮೇಲೆ ಖಾಸಗಿ ಬಹುರಾಷ್ಟ್ರೀಯ ಕಂಪನಿಗಳ ಹಿಡಿತ, ಹೆಚ್ಚುತ್ತದೆ. ಈ ಕಂಪನಿಗಳಿಗೆ ದೇಶದ ಅಗತ್ಯ ಏನು ಎಂಬುದಕ್ಕಿಂತ, ಯಾವುದನ್ನೂ ಬೆಳೆದರೆ ಸೂಪರ್ ಲಾಭ ಎಂಬುದರ ಕಡೆಗೆ ಆಸಕ್ತಿ. ಅದೂ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಉತ್ಪನ್ನಕ್ಕೆ ಅವರ ಆದ್ಯತೆ ಇರುತ್ತದೆ.

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಈಗಾಗಲೇ ಭಾರತ ಆತಂಕದ ಸನ್ನಿವೇಶ ಎದುರಿಸುತ್ತಿದೆ. ಜನಸಂಖ್ಯೆಯ ಬೆಳವಣಿಗೆಯ ದರಕ್ಕಿಂತ ಆಹಾರ ಧಾನ್ಯ ಉತ್ಪಾದನೆಯ ಬೆಳವಣಿಗೆ ದರ ಕಡಿಮೆಯಾಗಿದ್ದು ಮುಂದೆ ಒಂದು ದಿನ ಭಾರತವು ಜಗತ್ತಿನ ಅತಿದೊಡ್ಡ -ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ರಾಷ್ಟ್ರವಾಗಲಿದೆ ಎಂದು ತಜ್ಞರು ಎಚ್ಚರಿಸುತ್ತಿದ್ದಾರೆ. ಕರಾರು ಕೃಷಿಯಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ.

ಲಾಭವಾದರೆ ಓಕೆ. ಇಲ್ಲವಾದರೆ....

ರೈತರಿಗೆ ನ್ಯಾಯ ಬೆಲೆ ನೀಡಲಾಗುವುದು, ಆತಂಕ ನಿವಾರಿಸಲಾಗುತ್ತದೆ ಎಂಬುದಲ್ಲಾ ಭ್ರಮೆಯೇ ಸರಿ. ಭಾರಿ ಸಬ್ಸಿಡಿಯ ಬೆಂಬಲ ಹೊಂದಿರುವ ಶ್ರೀಮಂತ ದೇಶಗಳ ಕೃಷಿ ಉತ್ಪನ್ನಗಳೊಂದಿಗೆ ನಮ್ಮ ದೇಶಿಯ ಉತ್ಪನ್ನಗಳು ಪೈಪೋಟಿ ನಡೆಸುವುದು ಸುಲಭವೇನಲ್ಲ. ಬೆಳೆ ಬರುವ ಮುಂಚೆಯೇ ಬೆಲೆ ನಿಗದಿಮಾಡುವುದರಿಂದ ಬೆಲೆಯು ಕಡಿಮೆ ನಿಗದಿಯಾಗುವ ಸಂದರ್ಭವೇ ಜಾಸ್ತಿ. ರೈತನೊಂದಿಗೆ ಒಪ್ಪಂದವಾಗಿದ್ದ ಬೆಲೆಗಿಂತ ಮಾರುಕಟ್ಟೆಯಲ್ಲಿ ಬೆಳೆಗೆ ಹೆಚ್ಚು ಬೆಲೆ ಬಂದರೆ ಕಂಪನಿ ಸೂಪರ್ ಲಾಭ ಹೊಡೆದು ಕೊಳ್ಳುತ್ತದೆ. ಆದರೆ, ಒಂದೊಮ್ಮೆ ಬೆಲೆ ಕುಸಿದರೆ ಆಗ! ಗುಣಮಟ್ಟದ ವಿಷಯದಲ್ಲಿ ಇಲ್ಲವೆ ಸೂಚನೆ ಪಾಲಿಸದ, ಅಥವಾ ಒಪ್ಪಂದ ಉಲ್ಲಂಘಿಸಿದ ನೆಪ ಒಡ್ಡಿ ಕಂಪನಿಯು ಉತ್ಪನ್ನವನ್ನು ಕೊಳ್ಳಲು ನಿರಾಕರಿಸುತ್ತದೆ.

ಆನೆ ಮತ್ತು ಆಡು ಪೈಪೋಟಿಗೆ ಜಗಳಕ್ಕೆ ನಿಂತರೆ ಗೆಲ್ಲುವವರು ಯಾರು ಎಂಬುದನ್ನು ಯಾರಾದರೂ ಸರಳವಾಗಿ ಅಂದಾಜು ಮಾಡಬಹುದು. ರಾಜ್ಯದ ರೈತರಲ್ಲಿ ಶೇ.78 ರಷ್ಟು ಜನ ಸಣ್ಣ ರೈತರು ಎಂಬುದನ್ನು ನಾವು ಮರೆಯುವಂತಿಲ್ಲ.

ಫಲವತ್ತತೆ ನಾಶ

ಲಾಭ ಲೂಟಿಗಾಗಿಯೇ ಬರುವ ದೊಡ್ಡ ಕಂಪನಿಗಳು ಬಹು ರಾಷ್ಟ್ರೀಯ ಕಂಪನಿಗಳಿಗೆ ನಮ್ಮ ನೆಲ ಜಲದ ಬಗೆಗೆ ಯಾಕಾದರೂ ಕಾಳಜಿ ಇದ್ದಿತು. ಅವರು ಕೊಡುವ ಬೀಜ, ಗೊಬ್ಬರ, ಔಷಧಿ ಸುರಿದು, ಸುರಿದು ಬೆಳೆ ಬೆಳೆದರೆ ಭೂಮಿಯ ಫಲವತ್ತತೆ ನಾಶವಾಗಲಿದೆ ಎಂಬ ಎಚ್ಚರಿಕೆಯನ್ನು ತಜ್ಞರು ನೀಡಿದ್ದಾರೆ.

ಅಲ್ಲದೆ ಭೂಮಿ ಕೇಂದ್ರೀಕರಣವಾಗಿ ಭೂ ಸುಧಾರಣೆ ತಿರುಗು ಮುರುಗಾಗುತ್ತದೆ.

ಆಷಾಡದ ಗಾಳಿಯಲ್ಲಿ ರೈತರ ಗೋಳು ಇತ್ತ ಆಲ್ಕೋಡಪ್ಪನ ಕಬಡ್ಡಿಯ ಧೂಳು

ಸತತವಾಗಿ ಪ್ರತಿ ವರ್ಷ ಮಳೆ-ಬೆಳೆ ಇಲ್ಲದೆ ಬರಗಾಲವೆಂಬ ಭೂತ ಬೆಂಬಿಡದ ಪ್ರದೇಶವಾದ ರಾಯಚೂರು ಜಿಲ್ಲೆ ರಾಷ್ಟ್ರದಲ್ಲೇ ಹಿಂದುಳಿದ ಜಿಲ್ಲೆಯೆಂದು ಕರೆಯಿಸಿಕೊಂಡಿದೆ. ಈ ಕಳಂಕ ತಪ್ಪಿಸಬೇಕೆಂದು ಎಷ್ಟೋ ಶಾಸಕ-ಸಚಿವರನ್ನು ಬದಲಾಯಿಸಿರುವ ಇಲ್ಲಿನ ಜನತೆಯ ಕನಸು ಕನಸ್ಸಾಗಿಯೇ ಉಳಿದಿದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅರಕೇರಾ ಗ್ರಾಮದವರಾದ ಜಿಲ್ಲೆಯ ಸಂಸದರು ನಿರಂತರವಾಗಿ ಆಯ್ಕೆಯಾಗುತ್ತಾ ಬಂದಿದ್ದಾರೆ. ಆದರೆ ಅವರಿಂದ ಇಸ್ಪೀಟು ಆಡಲು ಊರಿಗೊಂದು ಆಗಸೆ(ಚಾವಡಿ) ಕಟ್ಟೆಗಳನ್ನು ಬಿಟ್ಟರೆ ಉಳಿದದ್ದನ್ನು ಜನ ನಿರೀಕ್ಷಿಸುವಂತಿಲ್ಲ. ದೇವದುರ್ಗಕ್ಕೆ ಶಾಸಕರಾಗಿ ಆಯ್ಕೆಯಾಗುವ ವ್ಯಕ್ತಿಗಳು ಹೊರಗಿನವರೆಂದು ಯಲ್ಲಪ್ಪ ಅಕ್ಕರಿಕಿಯಂತಹ ಮೋಟಾ ಮನುಷ್ಯನನ್ನು ಸ್ಥಳೀಯನೆಂಬ ಕಾರಣಕ್ಕಾಗಿ ಆಯ್ಕೆ ಮಾಡಿದಾಗ ಆತ ಮೂರು ತಲೆಮಾರಿಗಾಗುವಷ್ಟು ಸಂಪಾದಿಸಿ ಹೋಗಿಬಿಟ್ಟ.

ಭರ್ಜರಿ ಭಕ್ಷ್ಯ

ಇದೇ ಸಂದರ್ಭದಲ್ಲಿ ಎಂ.ಎಲ್.ಸಿ. ಯಾಗಿದ್ದ ರೈತರ ಪರ, ಹಿಂದುಳಿದ ದಲಿತರ ಪರ, ದೇವದುರ್ಗ ಬಲದಂಡೆಯ ಪರ ಧ್ವನಿ ಎತ್ತುವ ಸೋಗಿನ ಕೆಲಸ ಮಾಡಿದ ಹನುಮಂತಪ್ಪ ಆಲ್ಕೋಡಪ್ಪನವರನ್ನು ಜನ ಬಹು ನಿರೀಕ್ಷೆಯಿಂದ ಮರು ಚುನಾವಣೆಯಲ್ಲಿ ಗೆಲ್ಲಿಸಿ ಬಿಟ್ಟರು. ನಂತರ ಜಾ-ಕೋ ಸರ್ಕಾರದಲ್ಲಿ ಅವರಿಗೆ ಸಚಿವ ಸ್ಥಾನ ಸಿಕ್ಕಾಗ ಮತ್ತು ರಾಯಚೂರು ಜಿಲ್ಲಾ ಉಸ್ತುವರಿ ನೀಡಿದಾಗ ಜಿಲ್ಲೆಯ ರೈತಾಪಿ ವರ್ಗ ಹಿಂದುಳಿದ ಜಿಲ್ಲೆಯೆಂಬ ಹಣೆಪಟ್ಟಿ ಕಳಚಬಹುದೆಂದು ಹರ್ಷಚಿತ್ತರಾಗಿದ್ದರು.



ಆದರೆ ಅಕ್ಕರಿಕಿ ಯಲ್ಲಪ್ಪನ ಅಣ್ಣನಂತೆ ತಿನ್ನುವುದರಲ್ಲಿ ನಾನೇನು ಕಮ್ಮಿ ಎಂದು ತೋರಿಸಿಕೊಡುತ್ತಿರುವ ಆಲ್ಕೋಡಪ್ಪ ಜನರ ಕನಸಿನ ಕನ್ನಡಿ ನುಚ್ಚುನೂರು ಮಾಡಿದ್ದಾರೆ. ಎಲ್ಲಾ ಇಲಾಖೆಗಳಲ್ಲಿ ತನಗೆಬೇಕಾದ ಅಂದರೆ ತಿಂಗಳ ತಿಂಗಳ ಕಪ್ಪ ಕಾಣಿಕೆ ನೀಡುವ ಅಧಿಕಾರಿಗಳನ್ನು ಮಾತ್ರ ಇಟ್ಟುಕೊಂಡು ಭರ್ಜರಿ ಭಕ್ಷ್ಯ ಹೊಡೆಯುತ್ತಿದ್ದಾರೆ.

'ಪ್ರಸಾದ' ಕ್ಕಾಗಿ ವಿರಸ

ಆಲ್ಕೋಡಪ್ಪನ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ದೇವದುರ್ಗ ತಾಲ್ಲೂಕಿನವರಾದ ಅಂದಿನ ತಾಲ್ಲೂಕು ಪಂಚಾ ಕಾರ್ಯನಿರ್ವಾಹಕ ಅಧಿಕಾರಿ ಮ ಕರಿಗಾರನಲ್ಲಿಯೂ ಸಹ ಪ್ರಸಾದದ ವಿಷಯಕ್ಕೆ ಉಂಟಾಗಿ ಮುಕ್ಕಣ್ಣನನ್ನು ಎತ್ತಿಹಾಕಿ ಆ ಸ್ಥಾ ಬಂದ ಯಾರು ನಿಲ್ಲದಿರುವಾಗ ಎಸ್.ಡಿ.ಹುಚ್ಚಮ್ಮನವರ ಎಂಬ 'ಅ ನಾಮಧಾರಿ' ಯನ್ನು ಜ ಹಾಕಿದ್ದಾನೆ. ಈತ ಸಚಿ ಕಪ್ಪಕಾಣಿಕೆ ಸಲ್ಲಿಸುವ ಸಲುವಾ ಗ್ರಾಮ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ಉದ್ಯೋಗ ಖಾತ್ರಿಯ ಯೋಜನೆಯಿಂದಲೂ ದೋಚುತ್ತಿರುವುದನ್ನು ಹ ' ಗ ' ಲ ು - ರಾ ಮಾತನಾಡಿಕೊಳ್ಳುತ್ತಿದ್ದಾರೆ. ಅದೇ ನಿಷ್ಠಾವಂತ ದೇವದುರ್ಗದ ಶಿಕ್ಷಣಾಧಿಕಾರಿಯಾದ ನಾರಾಯಣಗೌಡರನ್ನು ಹಾಕಿ ಈಶ್ವರಪ್ಪ ನೀರಡಗಿಯ ಗಾಂಪರೊಡೆಯನನ್ನು ಪ್ರತಿಷ್ಠಾಪಿಸಿದ ದೇವದುರ್ಗದ ಸರ್ಕಲ್ ಇನ್ಸ್‌ಪೆಕ್ಟರ್ ಹುಣ ಇವರ ಹಿಂಬಾಲಕ. ಅದರಂತೆ ಇಡೀ ಜಿಲ್ಲೆ ದೋಚುವ ಪಡೆಯನ್ನು ಸೃಷ್ಟಿಸಿದ್ದಾನೆ.

ಇದರಿಂದಾಗಿ ಜಿಲ್ಲೆಯ ನಿಷ್ಠಾವಂತ ಕಾರ್ಯನಿರ್ವಾಹಕ ಅಧಿಕಾರಿ ಮಂಜು ಪ್ರಸಾದ ಇವನಿಗೆ ಪ್ರಸಾದ ಕೊಡಲು ಒಪ್ಪದೆ ಹೊರಟು ಹೋದರು. ಅಂದಿನಿಂದ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕರ ಜಿಲ್ಲಾಧಿಕಾರಿಗಳಾಗಲಿ ಇಂಡಿಯಾ ಕ್ರಿ ಟೀಮಿನಂತೆ ಅಂಕಣಕ್ಕೆ ಬರುತ್ತಿ ಹಿಂತಿರುಗುತ್ತಿದ್ದಾರೆ. ಮೊನ್ನೆ ತಾನೆ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ತನ್ನ ಚೇಲಾಗಳ ಮುಖಾಂತರ ಕೋಟಿ ದೋಚಲಾಗಿದೆ.

ಆಷಾಢದ ಗಾಳಿ


ಇನ್ನೊಂದು ಕಡೆ ಮುಂಗಾರು ಬೀಜದಲ್ಲಿ ಕೂಡ ದೊಡ್ಡ ಮಟ್ಟದ ಅವ್ಯವಹಾರ ನಡೆದಿದೆ. ಇದರ ಬಗ್ಗೆ ಸಚಿವರು ಒಮ್ಮೆಯ ತಲೆ ಕೆಡಿಸಿಕೊಳ್ಳಲಿಲ್ಲ. ಎಲ್ಲಾ ರಾಜ ಪುಡಾರಿಗಳ ಭೂ ಮಾಲೀಕ ಮತ್ತು ಕಾಳ ಸ ಪಾಲಾದ ಬೀಜ ರೈತರಿಗೆ ಸಿಗದಂತಾಗಿ ಕಂಗಾಲಾಗಿ ಕುಳಿತರು. ಒಂದೆಡೆ ಮುಂಗಾರು ಬೀಜ ಬಿತ್ತುವ ಒತ್ತಡ. ಎರಡೂ ದೇವರು ವರದಂತೆ ಒಲಿದು ಬಂದಾಗ ಇತ್ತ ಬಿತ್ತನೆ ಸಿಂಗದಂತಾದಾಗ, ಬೇರೆ ದಾರಿ ಕಾಣದ ಕಾಳ ಸಂತೆಯಲ್ಲೋ ಅಥವಾ ಇನ್ನೆಲ್ಲೋ ಸೋಲವ ಮಾಡಿ ಬೀಜ ಖರೀದಿಸಿ ಬಿತ್ತನೆ ನಿಟ್ಟುಸಿರು ಬಿಡುತ್ತಿರುವಾಗಲೇ, ಆರಂಭ ಆಷಾಢದ ಗಾಳಿಗೆ ಮೊಳಕೆಯೊಡೆದ ಬೀ ಬಾಡುತ್ತಿರುವಾಗ, ಕೈಕೊಟ್ಟ ಮಳೆಗಾಗಿ ಆಗ ಮಳೆಯ ಹನಿಗಳನ್ನೊತ್ತು ಚಲಿಸುವ ಮೋಡ ದಿಟ್ಟಿಸಿ ನೋಡುತ್ತಾ ತಲೆಯ ಮೇಲೆ ಕೈ ರೈತ ಕುಳಿತುಬಿಟ್ಟಿದ್ದಾನೆ.

ಇದೇ ಸಂದರ್ಭಕ್ಕೆ ಸರಿಯಾಗಿ ಸಚಿವ ಆ ಹನುಮಂತಪ್ಪ ದೇವದುರ್ಗದಲ್ಲಿ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಶಿಪ್ ಆಯೋ ಶಹಬಾಷ್‌ಗಿರಿ ಪಡೆಯುವ ಆತುರದಲ್ಲಿ ಕಬಡ್ಡಿಯ ಹೆಸರಿನಲ್ಲಿ ಜಿಲ್ಲೆಯ ಎಲ್ಲಾ ಇಲಾ ಖನ್ನ ಹಾಕಿ ಕುಳಿತುಬಿಟ್ಟಿದ್ದಾರೆ.

ರೈತರು ಆಷಾಢದ ಗಾಳಿಗೆ ಬಾಡುವ ಚಿಂತೆಯಲ್ಲಿ ಮುಳುಗಿದರೆ, ಆಲ್ಕೋಡ ಧೂಳಿನಲ್ಲಿ ಮುಳುಗಿದ್ದಾನೆ. ಜಿಲ್ಲೆಗೆ ಸಚಿವರು ಶಾಸಕರು ಸಂಸದರು ಎಷ್ಟ ಬಂದ್ಹೋದರೂ ಹಿಂದುಳಿದ ಪ್ರದೇಶ ಬ ಪ್ರದೇಶವೆಂಬ ಹಣೆಪಟ್ಟಿ ಕೀಳಲು ಸಾಧ್ಯ

■ ಶಂಷುದ್ದೀನ್ ನಾಗ

ಗಣಿಯ ವಿಜ್ಞಾನ-ತಂತ್ರಜ್ಞಾನ



ಭೂಮಿ ತನ್ನ ಗರ್ಭದಲ್ಲಿ ಅಗಾಧ ರಾಶಿಯ ಸಂಪನ್ಮೂಲಗಳನ್ನೆ ಹುದುಗಿಸಿಟ್ಟುಕೊಂಡಿದೆ. ಅದರಲ್ಲಿ ಕಬ್ಬಿಣ, ತಾಮ್ರ, ಬಾಕ್ಸೈಟ್, ಚಿನ್ನ, ಬೆಳ್ಳಿ, ರತ್ನಗಳಂತಹ ಅಮೂಲ್ಯ ವಸ್ತುಗಳು ಸೇರಿಕೊಂಡಿವೆ. ಭೂಮಿಯ ಯಾವ ಭಾಗದಲ್ಲಿ ಖನಿಜವಿದೆ ಎಂದು ಕಂಡು ಹಿಡಿದು ಅವುಗಳನ್ನು ಹೊರತೆಗೆಯುವುದಕ್ಕೆ 'ಗಣಿಗಾರಿಕೆ' ಎಂದು ಕರೆಯುತ್ತಾರೆ. ಖನಿಜ, ಲೋಹ, ಇತ್ಯಾದಿಗಳು ಅದಿರಿನ ರೂಪದಲ್ಲಿ ನೆಲದ ಮೇಲೂ ಇರಬಹುದು ಮತ್ತು ಸಾಗರ ಸಮುದ್ರ ತಳದಲ್ಲೂ ಇರಬಹುದು.

ನೆಲದ ಮೇಲಿನ ಅದಿರನ್ನು ಅಗೆದು ತೆಗೆದರೆ ಅದು 'ತೆರೆದ ಮೇಲ್ಮೈ ಗಣಿ' ಎನಿಸಿಕೊಳ್ಳುತ್ತದೆ. ಉದಾಹರಣೆಗೆ, ಕೆಮ್ಮಣ್ಣುಗುಂಡಿಯ ಕಬ್ಬಿಣದ ಗಣಿಯು ತೆರೆದ ಮೇಲ್ಮೈ ಗಣಿಯಾಗಿದ್ದು ಅಲ್ಲಿ ಕಬ್ಬಿಣದ ಅದಿರು ಹುದುಗಿರುವ ಬೆಟ್ಟಗಳನ್ನು ಕಡೆದು ಕಬ್ಬಿಣದ ಅದಿರನ್ನು ಹೊರತೆಗೆಯಲಾಗುತ್ತದೆ.



ಭೂಮಿಯ ಆಳದಲ್ಲಿರುವ ಅದಿರನ್ನು ತೆಗೆಯುವುದು ಸಹಜವಾಗಿಯೇ ತೆರೆದ ಗಣಿಗಿಂತ ಹೆಚ್ಚು ಕಷ್ಟದ್ದು. ಉದಾಹರಣೆಗೆ, ಹಟ್ಟಿ ಮತ್ತು ಕೋಲಾರದ ಚಿನ್ನದ ಗಣಿಯಲ್ಲಿ ಭೂಮಿಯನ್ನು ಕೊರೆದು ಒಳಗಡೆಯಿಂದ ಚಿನ್ನದ ಅದಿರನ್ನು ತೆಗೆಯುತ್ತಾರೆ.

ಖನಿಜ ನಿಕ್ಷೇಪವು ಭೂಮಿಯ ಮೇಲ್ಮೈಯಲ್ಲೇ ಇದ್ದಾಗ ಹೈಡ್ರಾಲಿಕ್ ಗಣಿಗಾರಿಕೆ ಮಾಡಲಾಗುತ್ತದೆ. ಇಲ್ಲಿ ಖನಿಜವು ಅದಿರಿನೊಳಗೆ ಸೇರಿಕೊಂಡಿಲ್ಲದಿರುವುದರಿಂದ ಮಣ್ಣು, ಮರಳಿನೊಂದಿಗೆ ಅದು ಬೆರೆತುಕೊಂಡಿರುತ್ತದೆ. ರಭಸವಾಗಿ ನೀರನ್ನು ಚಿಮ್ಮಿ ಖನಿಜ ಮಿಶ್ರಿತ ಮಣ್ಣನ್ನು, ಕಾಲುವೆಯೊಂದಕ್ಕೆ ಹರಿಸಲಾಗುತ್ತದೆ. ನಂತರ ಇದನ್ನು ಮಣ್ಣು ಅಥವಾ ಮರಳಿನಿಂದ ಬೇರ್ಪಡಿಸಿ ಖನಿಜವನ್ನು ಪಡೆಯುತ್ತಾರೆ.



ಮೊದಲಿಗೆ, ಭೂಮಿಯ ಆಳದಲ್ಲಿ ಯಾವ ಭಾಗದಲ್ಲಿ ಅದಿರು ಅಡಕವಾಗಿದೆ ಎಂಬುದನ್ನು ದೂರಸಂವೇದಿ ಉಪಗ್ರಹಗಳ ಮೂಲಕ ತೆಗೆದ ಫೋಟೋಗ್ರಾಫ್‌ಗಳಿಂದ ಗುರುತು ಮಾಡಲಾಗುತ್ತದೆ. ಭೂವಿಜ್ಞಾನಿಗಳು ಅದರಲ್ಲಿ ಅದಿರು ಸಿಗಬಹುದಾದ ಸ್ಥಳಗಳನ್ನು ಗುರುತಿಸಿ, ನಿರ್ದಿಷ್ಟ ಸ್ಥಳಗಳಲ್ಲಿ ಭೂಮಿಯನ್ನು ಅಗೆದು ಮಾದರಿಗಳನ್ನು ಸಂಗ್ರಹಿಸುತ್ತಾರೆ. ಹೀಗೆ ಭೂಮಿಯಾಳದಿಂದ ಹೊರತೆಗೆದ ವಿವಿಧ ಹಂತಗಳ ಮಾದರಿಗಳನ್ನು ಪರೀಕ್ಷೆ ಮಾಡಿದ ನಂತರ ಸೂಕ್ತ ಸ್ಥಳದಲ್ಲಿ ಗಣಿ ತೋಡುವ ಕೆಲಸ ಆರಂಭಿಸಲಾಗುತ್ತದೆ. ಕಬ್ಬಿಣ ಮತ್ತು ನಿಕಲ್ ಅದಿರನ್ನು ಪತ್ತೆ ಹಚ್ಚಲು ಕಾಂತಮಾಪಕ ಎಂಬ ಉಪಕರಣವನ್ನು ಬಳಸಲಾಗುತ್ತದೆ. ಯುರೇನಿಯಂ ಅದಿರಿನ ನಿಕ್ಷೇಪವನ್ನು ಪತ್ತೆ ಹಚ್ಚಲು ಗೈಗರ್‌ಮುಲ್ಲರ್ ನಳಿಕೆ ಎಂಬ ಉಪಕರಣವನ್ನು ಬಳಸಲಾಗುತ್ತದೆ.

ಅದಿರು ಇರುವ ಭೂಭಾಗವನ್ನು ಕೊರೆಯುವುದು ಮತ್ತು ಸ್ಫೋಟಿಸುವುದು ಗಣಿಗಾರಿಕೆಯ ಆರಂಭಿಕ ಕೆಲಸ. ತುಂಡು ತುಂಡಾಗಿ ಸಿಡಿದ ಅದಿರನ್ನು ಸಂಗ್ರಹಿಸಿ ಇನ್ನೊಂದೆಡೆಗೆ ಸಾಗಿಸುವುದು ಎರಡನೆಯ ಹಂತ. ಖನಿಜ ನಿಕ್ಷೇಪ ಆಳದಲ್ಲಿದ್ದಾಗ ವಿಶಾಲವಾದ ತೂತುಗಳನ್ನು ಕೊರೆಯುತ್ತಾರೆ. ಅಗೆದು ತೆಗೆದ ಅದಿರನ್ನು ಸುರಂಗದ ಮೂಲಕ ರೈಲುಗಾಡಿಯಿಂದ, ಡೀಸೆಲ್ ಟ್ರಕ್‌ಗಳಿಂದ ಸಾಗಿಸಲಾಗುತ್ತದೆ. ಗಣಿಯಾಳ ಹೆಚ್ಚಿದಂತೆ ಉಷ್ಣತೆಯೂ ಹೆಚ್ಚುವುದರಿಂದ ಅಲ್ಲಿನ ವಾತಾವರಣವನ್ನು ತಂಪುಗೊಳಿಸಲು ಭೂಮಿಯ ಮೇಲ್ಮೈನಿಂದ ಸುಮಾರು 1.5 ಕಿ.ಮೀ ಕೆಳಗೆ ಶೈತ್ಯಕಾರಕ ಸ್ಥಾವರಗಳನ್ನು ಇರಿಸುತ್ತಾರೆ.

ಗಣಿಯ ಒಳಗಿನ ಮುಖ್ಯವಾದ ಅಪಾಯಗಳೆಂದರೆ - ಕೆಲಸಗಾರರು ಉಪಯೋಗಿಸುವ ದೀಪಗಳಿಂದ ಬೆಂಕಿ ಹೊತ್ತಿಕೊಳ್ಳುವುದು, ವಿಷಾನಿಲ ಮತ್ತು ಮಲಿನ ಗಾಳಿಯು ಬಿಡುಗಡೆಯಾಗುವುದು, ಛಾವಣಿಯಿಂದ, ಅಕ್ಕಪಕ್ಕಗಳಿಂದ ಹಠಾತ್ತನೆ ಬಂಡೆಗಳು ಬೀಳುವುದು. 1815 ರಲ್ಲಿ ಹಂಪ್ರಿ ಢೇವಿ ಎಂಬುವನು ಸುರಕ್ಷಿತ ದೀಪವನ್ನು ನಿರ್ಮಿಸಿದ. ಈ ದೀಪವು ಅನಿಲಗಳು ಹತ್ತಿಕೊಂಡು ಉರಿಯುವ ಹಂತಕ್ಕೆ ತಲುಪದಂತೆ ಮಾಡುತ್ತದೆ. ಗಣಿಯ ಛಾವಣಿ ಕುಸಿಯುವ ಅಪಾಯ ತಪ್ಪಿಸಲು ಛಾವಣಿ ಮತ್ತು ಗೋಡೆಗಳಿಗೆ ಉಕ್ಕಿನ ಕಂಬಗಳು ಮತ್ತು ಮರಗಳನ್ನು ಕಟ್ಟಿ ನಿಲ್ಲಿಸಲಾಗುತ್ತದೆ. ವಿಷಾನಿಲ ಬಿಡುಗಡೆಯನ್ನು ಗುರುತಿಸುವ ಗಾಳಿ ರಕ್ಷಕ ಸಾಧನಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ಹೀಗೆ ಭುವಿಯಿಂದ ಹೊರತೆಗೆದ ಅದಿರು ಮಿಶ್ರಿತ ಖನಿಜವನ್ನು ಸಂಸ್ಕರಣೆ ಮಾಡಿ ಖನಿಜವನ್ನು ಅದಿರಿನಿಂದ ಬೇರ್ಪಡಿಸಲಾಗುತ್ತದೆ. ○

ಜನಶಕ್ತಿ ಕನ್ನಡ ವಾರಪತ್ರಿಕೆ

ಕರ್ನಾಟಕದಲ್ಲಿ ನಕ್ಸಲ್‌ವಾದಿಗಳು ಸಮಸ್ಯೆ ಮತ್ತು ಪರಿಹಾರ

ಜಿ.ಎನ್.ನಾಗರಾಜ್

ನಕ್ಸಲ್‌ವಾದಿಗಳು ಪಶ್ಚಿಮ ಘಟ್ಟಗಳನ್ನು ತಮ್ಮ ಅಡಗುತಾಣವನ್ನಾಗಿ ಬಳಸಿಕೊಳ್ಳುವುದನ್ನು ತಪ್ಪಿಸಲು ದೃಢಕ್ರಮಗಳನ್ನು ಕೈಗೊಳ್ಳುವಾಗಲೇ ಅಮಾಯಕರು ಬಲಿಯಾಗದಂತೆ ಎಚ್ಚರವಹಿಸಬೇಕು.

ಕರ್ನಾಟಕದಲ್ಲಿ ದುಡಿಯುವ ಜನ ಅನೇಕ ಸಮಸ್ಯೆಗಳನ್ನು ಸಂಕಟಗಳನ್ನು ಎದುರಿಸುತ್ತಿದ್ದಾರೆ. ಈ ಸಂಕಟ, ಸಮಸ್ಯೆಗಳಿಗೆ ಹಲವು ರೀತಿಯ ಪರಿಹಾರಗಳು ಸೂಚಿಸಲ್ಪಡುತ್ತವೆ. ಅವುಗಳಲ್ಲಿ ಕೆಲವು ಪರಿಹಾರಗಳು ಸಮಸ್ಯೆಯನ್ನು ಉಲ್ಬಣಿಸಲು ಕಾರಣವಾಗಿ ಸಂಕಟಗಳನ್ನು ಹೆಚ್ಚಿಸುತ್ತವೆ. ಆದರೆ ಅಂತಹ ಪರಿಹಾರಗಳನ್ನು ನೀಡುವವರಲ್ಲಿ ಕೆಲವರು ಈ ಸಂಗತಿ ಗೊತ್ತಿದ್ದೂ ಅಂತಹ ಪರಿಹಾರಗಳನ್ನು ಸೂಚಿಸುತ್ತಾರೆ. ಅವರಿಗೆ ಜನರ ಸಮಸ್ಯೆಗಳನ್ನು ತಮ್ಮದೇ ಸ್ವಾರ್ಥಕ್ಕೆ ಬಳಸಿಕೊಳ್ಳುವುದಷ್ಟೇ ಉದ್ದೇಶವಾಗಿರುತ್ತದೆ. ಆದರೆ ಜನರನ್ನು ಇದೇ ಪರಿಹಾರ ಎಂದು ನಂಬಿಸುತ್ತಾರೆ. ಇಲ್ಲವೆ ಜನರು ಬೇರೆ ಆಯ್ಕೆಯಿಲ್ಲದೆ ಈ ಪರಿಹಾರಗಳನ್ನು ಒಪ್ಪಿಕೊಳ್ಳುವಂತೆ ಜನರ ಮೇಲೆ ಹೇರುತ್ತಾರೆ. ಮತ್ತೆ ಕೆಲವರು ತಾವು ಸೂಚಿಸುವ ಪರಿಹಾರಗಳು ಜನರ ಸಂಕಟವನ್ನು ಹೆಚ್ಚಿಸುತ್ತವೆ ಎಂಬುದು ಗೊತ್ತಿದ್ದು ದೀರ್ಘಕಾಲದಲ್ಲಿ ಜನರ ಸಂಕಷ್ಟವನ್ನು ಪರಿಹರಿಸುತ್ತವೆ ಎಂದು ನಂಬಿರುತ್ತಾರೆ ಅಥವಾ ಹಾಗೆಂದು ನಂಬಿಸುವವರ ಜೊತೆಗೆ ಅಮಾಯಕರಾಗಿ ಸೇರಿಕೊಳ್ಳುತ್ತಾರೆ. ಸಂಕಟಗಳನ್ನು ಅನುಭವಿಸುತ್ತಾರೆ. ತಮ್ಮ ಮುಗ್ಧತೆ, ಅಮಾಯಕತನ ಕಳೆದುಕೊಂಡ ನಂತರ ಅವರು ಆ ಪರಿಹಾರಗಳು ಪರಿಹಾರಗಳಲ್ಲ ಎಂಬುದನ್ನು ಕಂಡುಕೊಳ್ಳುತ್ತಾರೆ. ಅಂತಹ ಪರಿಹಾರದ ದಾರಿಯನ್ನು ಕೈಬಿಡುತ್ತಾರೆ. ಜನರ ಸಂಕಟಗಳಿಗೆ ನಿಜವಾದ ಪರಿಹಾರವನ್ನು ಸೂಚಿಸಿದವರು ದೃಢವಾಗಿ ಆ ಮಾರ್ಗವನ್ನೂ ಹಿಡಿದವರ ಜೊತೆಗೆ ಜನ ನಿಧಾನವಾಗಿಯಾದರೂ ಸೇರಿಕೊಳ್ಳುತ್ತಾ ಅಂತಹ ಪರಿಹಾರದ ಮಾರ್ಗವನ್ನೂ ಬಲಗೊಳಿಸುತ್ತಾರೆ.

ಭಿನ್ನ ದಾರಿಗಳು


ಇದರಲ್ಲಿ ಮೊದಲನೆಯ ಹಾದಿಯನ್ನು ಬಂಡವಾಳಶಾಹಿಗಳು, ಭೂ ಮಾಲಕರು ಅತಿ ಲಾಭಕೋರರು, ಭ್ರಷ್ಟರು ಒಟ್ಟಿನಲ್ಲಿ ಆಳುವ ವರ್ಗಗಳು ಅನುಸರಿಸಿದರೆ ಎರಡನೆಯ ಮಾರ್ಗ ನಕ್ಸಲ್‌ವಾದಿಗಳದ್ದು, ತಾವು ಹಿಡಿದ ಮಾರ್ಗಕ್ಕೂ ಮಾವೋವಾದಕ್ಕೂ ಏನೇನೂ ಸಂಬಂಧವಿಲ್ಲವಾದರೂ ಅದು ಮಾವೋವಾದವೆಂದು ನಂಬುತ್ತಾರೆ. ಬೇರೆಯವರನ್ನೂ ನಂಬಿಸುತ್ತಾರೆ. ಸದ್ಯದ ಸಂಕಷ್ಟಗಳು ಮುಂದೆ ಪರಿಹಾರಕ್ಕೆ ದಾರಿ ಎಂದು ಅಮಾಯಕರನ್ನು ನಂಬಿಸುತ್ತಾರೆ. ಸಮಸ್ಯೆಗಳಿಂದ ಭಾದಿತರಾದವರು ಕೆಲಕಾಲವಾದರೂ, ಬೇರೆ ನೈಜ ಪರಿಹಾರ ಸಿಗುವವರೆಗೂ ಈ ಹಾದಿಯನ್ನು ತುಳಿಯುತ್ತಾರೆ. ಹೀಗಾಗಿಯೇ 60 ರ ದಶಕದ ಕೊನೆಯಲ್ಲಿ ಬಹಳ ಸುದ್ದಿ ಮಾಡಿದ ನಕ್ಸಲ್ ಚಳುವಳಿ ಒಡೆದು ಚೂರು ಚೂರಾಗಿ ಸಾವಿರಾರು ಜನರು ತಮ್ಮ ವೈಯಕ್ತಿಕ ನೆಲೆಯಲ್ಲಿ ಅಥವಾ ಗುಂಪು ಗುಂಪಾಗಿ ಹೊರ ಬಂದಿದ್ದು, ಇತ್ತೀಚೆಗೆ ಮತ್ತೊಂದು ಬಹಳ ಪ್ರಮುಖ ಬೆಳವಣಿಗೆ ನಮ್ಮ ನೆರೆಯ ದೇಶ ನೇಪಾಳದಲ್ಲಿ ಜರುಗಿದೆ.

ನೇಪಾಳದ ಅನುಭವ

ಭಾರತದ ಮಾವೋವಾದಿಗಳಿಗಿಂತ ಎಷ್ಟೋ ಪಟ್ಟು ಹೆಚ್ಚು ಬಲಿಷ್ಠವಾಗಿದ್ದ ಚಳುವಳಿ ಸರಿಸುಮಾರು ಇಡಿಯಾಗಿ ತಮ್ಮ ದಾರಿ ಸರಿಯಿಲ್ಲವೆಂದು ಕಂಡುಕೊಂಡು ಪ್ರಜಾಸತ್ತಾತ್ಮಕ ಚಳುವಳಿಯ ಮಾರ್ಗವನ್ನು ಹಿಡಿದಿದ್ದಾರೆ. ತಮ್ಮ ಶಸ್ತ್ರಗಳನ್ನು ತ್ಯಜಿಸಿ ಸುಭದ್ರಗೋಡೌನುಗಳಲ್ಲಿರಿಸಿದ್ದಾರೆ ಹಾಗೂ ಇಂತಹ ತಪ್ಪು ದಾರಿಯನ್ನು ಹಿಡಿದ ಅನೇಕ ದೇಶಗಳ ಮಾವೋವಾದಿಗಳಿಗೆ ಮಾರ್ಗದರ್ಶಿ ಯಾಗಿದ್ದಾರೆ. ಈ ಕ್ರಿಯೆಯಲ್ಲಿ ಸಿಪಿಐ(ಎಂ) ಪಕ್ಷ ಒಂದು ಮುಖ್ಯ ಪಾತ್ರ ವಹಿಸಿ, ನಮ್ಮ ನೆರೆಯ ದೇಶದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಗೆ, ಹಿಂದೂ ರಾಜಪ್ರಭುತ್ವವೊಂದು ಸೆಕ್ಯುಲರ್ ಗಣರಾಜ್ಯವಾಗಿ ರೂಪುಗೊಳ್ಳುವುದಕ್ಕೆ ನೆರವು ನೀಡಿದೆ ಎಂಬುದು ಹೆಮ್ಮೆಯ ಸಂಗತಿ.

ಕೊಲೆ ದರೋಡೆಯ ಕುರುಡು ಹಾದಿ

ಆದರೆ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಕುರುಡಾಗಿ ಈ ಹಾದಿಯನ್ನು ಹಿಡಿದವರು ತಾವೂ ಬಲಿಯಾಗಿ, ತಮ್ಮ ಜೊತೆ ಸೇರಿದ 'ಅಮಾಯಕರನ್ನು' ಬಲಿಗೊಟ್ಟು ಕಾಡಿನ ನೆರೆಹೊರೆಯ ಜನ ಸಾಮಾನ್ಯರನೇಕರನ್ನು ಕೊಲೆಗೈದು, ದರೋಡೆ ಮಾಡುವುದರಲ್ಲಿ ನಿರತರಾಗಿದ್ದಾರೆ ಎಂಬುದೊಂದು ದುರಂತ. ತಮ್ಮ ಈ ಮಾರ್ಗದಿಂದ ದೇಶದಲ್ಲಿ ಕೋಮುವಾದಿ ಶಕ್ತಿಗಳನ್ನು ಆಳುವ ಯಂತ್ರದ ಪ್ರಜಾಪ್ರಭುತ್ವ ವಿರೋಧಿ ದಮನಕಾರಿ ಶಕ್ತಿಯನ್ನು ಬಲಪಡಿಸುತ್ತಿದ್ದಾರೆನ್ನುವುದು ದೇಶಕ್ಕೆ ಅಪಾಯಕಾರಿ.



ಇತ್ತೀಚೆಗೆ ಮಾವೋವಾದಿಗಳೆಂದು ಕರೆದುಕೊಳ್ಳುತ್ತಿರುವ ಈ ನಕ್ಸಲ್‌ವಾದಿಗಳು ತಮ್ಮ ತಪ್ಪು ನಂಬಿಕೆ, ತಪ್ಪುದಾರಿಯಿಂದ ಆದಷ್ಟು ಬೇಗ ಹೊರಬರಲಿ ಎಂದು ಸಿಪಿಐ(ಎಂ) ಆಶಿಸುತ್ತದೆ. ಅನೇಕ ಬುದ್ಧಿ ಜೀವಿಗಳನ್ನೂ, ಅಮಾಯಕರನ್ನು ಬಲಿಕೊಡಬೇಡಿ ಎಂದು ಒತ್ತಾಯಿಸುತ್ತದೆ.

ಅದೇ ಸಮಯದಲ್ಲಿ ಆದಿವಾಸಿಗಳ ಮೂಲ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಪ್ರಥಮ ಆದ್ಯತೆ ನೀಡಬೇಕು. ಅರಣ್ಯ ಕಾಯಿದೆಯಡಿ ಲಭ್ಯವಿರುವ ಎಲ್ಲ ಪ್ರಜಾಸತ್ತಾತ್ಮಕ ಪರಿಹಾರಗಳನ್ನು ನೀಡಬೇಕೆಂದು ಭೂಮಿಯ, ವಸತಿಯ ಹಕ್ಕು, ಅರಣ್ಯದ ಉಪ ಉತ್ಪನ್ನಗಳನ್ನು ಸಂಗ್ರಹಿಸುವ ಹಕ್ಕು ಮೂಲಭೂತ ಸೌಲಭ್ಯಗಳನ್ನೂ ನೀಡಬೇಕೆಂದು ಒತ್ತಾಯಿಸುತ್ತದೆ. ನಕ್ಸಲ್‌ವಾದಿಗಳು ಪಶ್ಚಿಮ ಘಟ್ಟಗಳನ್ನೂ ತಮ್ಮ ಅಡಗುತಾಣವನ್ನಾಗಿ ಬಳಸಿಕೊಳ್ಳುವುದನ್ನು ತಪ್ಪಿಸಲು ದೃಢಕ್ರಮಗಳನ್ನು ಕೈಗೊಳ್ಳುವಾಗಲೇ ಅಮಾಯಕರು ಬಲಿಯಾಗದಂತೆ ಎಚ್ಚರವಹಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

ಇಸ್ರೇಲಿನೊಂದಿಗೆ ಮಿಲಿಟರಿ ಸಹಕಾರ ಭಾರತಕ್ಕೆ ಅಪಾಯಕಾರಿ

ಭಾರತದಿಂದ ಇಸ್ರೇಲಿನ ಬೇಹುಗಾರಿಕೆ ಉಪಗ್ರಹ ಉಡಾವಣೆಗೆ ಸಿದ್ಧತೆ ನಡೆದಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಉಡಾವಣೆಯ ನಂತರ ಇದು ಸಂಪೂರ್ಣವಾಗಿ ಇಸ್ರೇಲೀ ಮಿಲಿಟರಿಯ ಹತೋಟಿಯಲ್ಲಿರುತ್ತದೆ ಎಂದು ಹೇಳಲಾಗಿದೆ. ಇದು ಅತ್ಯಂತ ಸಣ್ಣ ವಸ್ತುಗಳನ್ನೂ ಗುರುತಿಸುವ ಅತ್ಯಂತ ಮುಂದುವರೆದ ತಾಂತ್ರಿಕ ಸಾಮರ್ಥ್ಯ ಹೊಂದಿದ್ದು ಇದರಿಂದ ಇಸ್ರೇಲ್ ತನಗೆ ಅಪಾಯಕಾರಿ ಎಂದು ಭಾವಿಸುವ ವ್ಯಕ್ತಿಗಳ ಚಲನವಲನಗಳನ್ನೆಲ್ಲಾ ಪರೀಕ್ಷಿಸುತ್ತಿರಲು ಇದು ಇಸ್ರೇಲೀ ಮಿಲಿಟರಿಗೆ ಅವಕಾಶ ಮಾಡಿಕೊಡುತ್ತದೆ ಎಂದೂ ಹೇಳಲಾಗುತ್ತಿದೆ.

ಅಪಾಯಕಾರಿ ನೆಗೆತ

ಭಾರತ, ಇಸ್ರೇಲೀ ಮಿಲಿಟರಿ ಸರಕಾರದಲ್ಲಿ ಇದೊಂದು ದೊಡ್ಡ ನೆಗೆತವಾಗಿದ್ದು ಭಾರತದ ರಾಷ್ಟ್ರೀಯ ಹಿತಾಸಕ್ತಿಗಳಿಂದ ಹಾಗೂ ಮಾನವ ಕುಲದ ಒಳಿವಿನ ದೃಷ್ಟಿಯಿಂದ ಒಂದು ಅಪಾಯಕಾರಿ ಬೆಳವಣಿಗೆಗಳು ಎಂದು ಪ್ರಗತಿಪರ ವಲಯಗಳು ಅಭಿಪ್ರಾಯಪಟ್ಟಿವೆ. ಈ ಸುದ್ದಿ ಇಸ್ರೇಲಿ ಆಳುವ ಜನ ಪ್ಯಾಲೆಸ್ತೇನಿ ನೆಲವನ್ನು ಆಕ್ರಮಿಸಿಕೊಂಡು, ಅವರ ತಾಯ್ನಾಡಿನ ಹಕ್ಕನ್ನು ನಿರಾಕರಿಸಿ 40 ವರ್ಷಗಳು ಕಳೆದಿರುವ ಸಂದರ್ಭದಲ್ಲಿ ಬಂದಿರುವುದು ಇನ್ನೂ ಅನಿಷ್ಟಕಾರಿ ಎಂದು ಭಾವಿಸಲಾಗಿದೆ. ಏಕೆಂದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ನಮ್ಮ ಜನತೆ ಪ್ಯಾಲೆಸ್ತೇನಿಯನ್ನರ ತಾಯ್ನಾಡಿನ ಹಕ್ಕನ್ನು ಎತ್ತಿಹಿಡಿಯುತ್ತಾ ಬಂದಿದೆ. ಇಸ್ರೇಲ್ ತನ್ನ ಆಕ್ರಮಣವನ್ನು ತೆರವು ಮಾಡಬೇಕೆಂದು ವಿಶ್ವ ಸಂಸ್ಥೆ ಹಲವಾರು ನಿರ್ಣಯಗಳನ್ನು ಕೈಗೊಂಡಿದ್ದು ಭಾರತವೂ ಅವನ್ನು ಬೆಂಬಲಿಸುತ್ತಾ ಬಂದಿದೆ. ಈಗ ಇಸ್ರೇಲ್‌ನೊಂದಿಗೆ ಹೆಚ್ಚೆಚ್ಚು ಮಿಲಿಟರಿ ಸಹಕಾರ ಈ ಬೆಂಬಲ, ಸಮರ್ಥನೆಗಳನ್ನೆಲ್ಲಾ ಅರ್ಥಹೀನವಾಗಿಸುತ್ತಿದೆ. ಆದ್ದರಿಂದ ಇಂತಹ ಸಹಕಾರವನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಇಂತಹ ಮಿಲಿಟರಿ ಸಹಕಾರ, ಇಸ್ರೇಲಿನಿಂದ ಶಸ್ತ್ರಾಸ್ತ್ರಗಳ ಖರೀದಿಯ ಮೂಲಕ ಅಂತಿಮವಾಗಿ ಪ್ಯಾಲೆಸ್ಟೇನ್ ನೆಲದ ಆಕ್ರಮಣ ಪ್ಯಾಲೆಸ್ಟೇನ್ ಜನಗಳ ಹಕ್ಕುಗಳ ದಮನ ಮಾಡುವ ಇಸ್ರೇಲಿ ಆಳರಸರ ಪ್ರಯತ್ನಗಳಿಗೆ ಹಣಕಾಸು ಒದಗಿಸಿದಂತಾಗುತ್ತದೆ ಎಂದು ದೇಶದ ಎಡ ಮತ್ತು ಪ್ರಗತಿಪರ ವಲಯಗಳು ಹೇಳಿವೆ. ಇದು ಸ್ವತಃ ಯುಪಿಎ ತನ್ನ ರಾಷ್ಟ್ರೀಯ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಪ್ಯಾಲೆಸ್ತೇನಿ ಜನಗಳೊಂದಿಗೆ ವ್ಯಕ್ತಪಡಿಸಿದ ಸೌಹಾರ್ದಕ್ಕೆ ತದ್ವಿರುದ್ಧವಾದ ವರ್ತನೆ ಎಂದು ಸಿಪಿಐ(ಎಂ) ಹೇಳಿದೆ.

ಪ್ಯಾಲಿಸ್ತೇನಿಯರ ತಾಯ್ನಾಡನ್ನು ಆಕ್ರಮಿಸಿಕೊಂಡು ಅವರನ್ನು ದಮನ ಮಾಡುತ್ತಿರುವ ಇಸ್ರೇಲ್ ದೇಶದೊಂದಿಗೆ ಮಿಲಿಟರಿ ಸಹಕಾರವನ್ನು ಗಾಢಗೊಳಿಸುತ್ತಾ ಹೊರಟಿರುವ ಭಾರತದ ನೀತಿ ಅಮಾನವೀಯ ಮಾತ್ರವಲ್ಲ, ಅಪಾಯಕಾರಿ ಕೂಡ.

ಇದ್ದಕ್ಕಿದ್ದಂತೆ ಗಾಢ!

ಭಾರತ, ಇಸ್ರೇಲಿ ಮಿಲಿಟರಿ ಸಂಬಂಧಗಳು 1999ರಲ್ಲಿ ಆರಂಭವಾದವು. ಈಗ ಅವು ಇದ್ದಕ್ಕಿದ್ದಂತೆ ಗಾಢವಾಗುತ್ತಿವೆ. 2006ರಲ್ಲಿ ಇಸ್ರೇಲ್‌ನಿಂದ ಭಾರತ 160 ಕೋಟಿ ಡಾಲರುಗಳಷ್ಟು ಶಸ್ತ್ರಾಸ್ತ್ರ ಖರೀದಿಸಿದೆ. ಇತ್ತೀಚೆಗೆ ಸುಮಾರು 10,000 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಹೊಸ ಪೀಳಿಗೆಯ ಕ್ಷಿಪಣಿಗಳ ಉತ್ಪಾದನೆಗೆ ಜಂಟಿ ಉದ್ದಿಮೆಯನ್ನು ರಚಿಸುವ ಪ್ರಸ್ತಾವಕ್ಕೆ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಭದ್ರತೆ ಕುರಿತ ಸಂಪುಟ ಸಮಿತಿ ಮಂಜೂರಾತಿ ನೀಡಿದೆಯಂತೆ. ಇದನ್ನು ಭಾರತದ ಉನ್ನತ ದಕ್ಷಿಣ ಸಂಸ್ಥೆಯಾದ ಡಿಆರ್‌ಡಿಒ ಇದರ ಪ್ರಧಾನ ಕಾಂಟ್ರಾಕ್ಟ್‌ದಾರ ಎನ್ನಲಾಗಿದೆ.

ಭಾರತದ ಭದ್ರತೆಗೆ ಹಾನಿಯೇ

ಇಸ್ರೇಲಿನೊಂದಿಗೆ ಭಾರತದ ಮಿಲಿಟರಿ ಸಹಕಾರದಲ್ಲಿ ಕಾಣುತ್ತಿರುವ ಈ ತೀವ್ರ ಹೆಚ್ಚಳ ಭಾರತದ ಒಟ್ಟು ಹಿತಾಸಕ್ತಿಗಳಿಗೆ ಅಪಾಯಕಾರಿ ಎಂಬುದು ವಿಶ್ಲೇಷಕರ ವಿಶ್ಲೇಷಣೆ. ಇದು ಮೇಲೆ ಹೇಳಿದಂತೆ ಅರಬ್ ಪ್ರದೇಶಗಳನ್ನು ಆಕ್ರಮಿಸಿಕೊಂಡಿರುವ ಕೃತ್ಯದಲ್ಲಿ ಇಸ್ರೇಲಿಗೆ ಹಣಕಾಸು ನೆರವು ಒದಗಿಸುತ್ತದಷ್ಟೇ ಅಲ್ಲ, ಭಾರತದ ಭದ್ರತಾ ವ್ಯವಸ್ಥೆಯ ದೃಷ್ಟಿಯಿಂದಲೂ ಇದು ಅಪಾಯಕಾರಿ. ಏಕೆಂದರೆ ಭಾರತದ ಮಹತ್ವದ ಭದ್ರತಾ ಸಂಸ್ಥೆಯಾದ ಡಿಆರ್‌ಡಿಒ ದೊಳಗೆ ನುಸುಳಲು ಇಸ್ರೇಲಿಗೆ ಅವಕಾಶ ನೀಡಿದಂತಾಗುತ್ತದೆ. ಇಸ್ರೇಲಿನ ಬೇಹುಗಾರಿಕೆ ಸಂಘಟನೆ ಮೊಸ್ಸಾದ ಇಡೀ ಜಗತ್ತಿನಲ್ಲೇ ಕುಖ್ಯಾತಿ ಗಳಿಸಿರುವಂತದ್ದು.

ದಮನಕೋರರಿಗೆ ಬೆಂಬಲ

ಪ್ಯಾಲಿಸ್ತೇನಿ ಜನವೇ ತಾಯ್ನಾಡಿನ ಹಕ್ಕು ಹೊಂದುವ ಹೋರಾಟಕ್ಕೆ ಧೀರ್ಘಕಾಲದಿಂದ ಬೆಂಬಲ ನಿಡುತ್ತಾ ಬಂದಿರುವ ಪರಂಪರೆ ಹೊಂದಿರುವ ಭಾರತ ಈಗ ಆ ಹಕ್ಕನ್ನು ನಿರಾಕರಿಸುತ್ತಿರುವವರ, ದಮನ ಮಾಡುತ್ತಿರುವವರ ಕೈಗಳನ್ನು ಬಲಪಡಿಸುತ್ತಿರುವ ವಿರೋಧಾಭಾಸದ ಸ್ಥಿತಿ ಈಗ ಏರ್ಪಡುತ್ತಿದೆ.

ಇನ್ನೊಂದು ದೃಷ್ಟಿಯಿಂದಲೂ ಈ ಹೆಚ್ಚುತ್ತಿರುವ ಮಿಲಿಟರಿ ಸಹಕಾರ ನಮ್ಮ ಹಿತಾಸಕ್ತಿಗಳಿಗೆ ವ್ಯತಿರಿಕ್ತವಾದದ್ದು ಎಂದು ಕೆಲವು ವಿಶ್ಲೇಷಕರ ಅಭಿಪ್ರಾಯ. ಅರಬ್ ದೇಶಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಭಾರತೀಯರು ಕೆಲಸ ಮಾಡುತ್ತಿದ್ದಾರೆ. ಅರಬ್ ಜಗತ್ತಿನೊಂದಿಗೆ ನಮ್ಮ ವ್ಯಾಪಾರದ ಮೌಲ್ಯ 2500 ಕೋಟಿ ಡಾಲರು. ಭಾರತದ ಅನಿಲ ಮತ್ತು ತೈಲ ಆಮದಿನಲ್ಲಿ 60 ಶೇಕಡಾ ಅರಬ್ ಜಗತ್ತಿನಿಂದಲೇ ಬರಬೇಕು. ಇಂತಹ ಹಿನ್ನೆಲೆಯಲ್ಲಿ ಇಸ್ರೇಲಿನೊಂದಿಗೆ ಹೆಚ್ಚುತ್ತಿರುವ ಈ ಸಹಕಾರವನ್ನು ಹೆಚ್ಚಿನ ಅರಬ್ ಸರಕಾರಗಳು ಭಾರತದ ಒಂದು ವೈಷಮ್ಯಪೂರ್ಣ ಕೃತ್ಯವೆಂದೇ ಕಾಣುತ್ತವೆ. ಇಂತಹ ಭಾವನೆ ಖಂಡಿತಾ ಭಾರತದ ಹಿತಾಸಕ್ತಿಗಳಿಗೆ ಅಪಾಯಕಾರಿ. ಪಶ್ಚಿಮ ಏಷ್ಯಾದಲ್ಲಿ ಅಸ್ಥಿರತೆ, ಅಭದ್ರತೆ ಉಂಟುಮಾಡುವ ಇಸ್ರೇಲಿ ಆಳರಸರೊಂದಿಗೆ ಶಾಮೀಲನ್ನು ಯಾವ ರೀತಿಯಿಂದಲೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಹೇಳಿದೆ.

ಸ್ವತಂತ್ರ ವಿದೇಶಾಂಗ ನೀತಿಯ ಅಗತ್ಯ

ಆದ್ದರಿಂದ ಭಾರತದ ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆಗಳು, ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಲಿಕ್ಕಾಗಿ ಹಾಗೂ ಪ್ಯಾಲೆಸ್ತೀನ್ ಜನತೆಯೊಂದಿಗೆ ಸೌಹಾರ್ದತೆಯ ಸಂಬಂಧಗಳನ್ನು ಬಲಪಡಿಸಲಿಕ್ಕಾಗಿ, ದೇಶದೊಳಗೆ ಭಯೋತ್ಪಾದಕರ ಪ್ರಚಾರಕ್ಕೆ ಪ್ರಚೋದನೆ ಸಿಗದಂತಾಗಲು, ಅರಬ್ ಜಗತ್ತಿನೊಂದಿಗೆ ಸ್ನೇಹ ಸಂಬಂಧಗಳಿಗೆ ಧಕ್ಕೆ ಒದಗದಂತಾಗಲು, ಎಲ್ಲಕ್ಕೂ ಮಿಗಿಲು ಮಾನವತೆಯ ದೃಷ್ಟಿಯಿಂದ ಇಸ್ರೇಲಿನೊಂದಿಗೆ ಭಾರತದ ಹೆಚ್ಚುತ್ತಿರುವ ಮಿಲಿಟರಿ ಸಹಕಾರಗಳಿಗೆ ತಡೆ ಹಾಕಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ಒಂದು ಜನತೆ ತಮ್ಮ ತಾಯ್ನಾಡನ್ನು ಹೊಂದುವ, ತಮಗೆ ಬೇಕಾದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಆರಿಸಿಕೊಳ್ಳುವ, ಘನತೆಯಿಂದ ಬಾಳುವ ಹಕ್ಕು ಮಾನವೀಯ ಮೌಲ್ಯಗಳ ವಿಭಿನ್ನ ಅಂಗ. ಈ ಮಾನವೀಯ ಮೌಲ್ಯಗಳನ್ನು ತುಳಿದು ಹಾಕುವವರೊಂದಿಗೆ ಸಹಕಾರ ಮಾನವೀಯ ದೃಷ್ಟಿಯಿಂದಲೂ ಅಸಮರ್ಥನೀಯ ಎಂದು ಅದು ಹೇಳಿದೆ.

ಕಲ್ಬುರ್ಗಿ

ದಲಿತರಲ್ಲಿ ಸ್ವಾಭಿಮಾನ ಮೂಡುವುದನ್ನು ಜಾಗೃತಿ ಉಂಟಾಗುವುದನ್ನು ಮೇಲ್ಜಾತಿಯ - ಮೇಲ್ವರ್ಗದ ಸ್ಥಾಪಿತ ಹಿತಾಸಕ್ತಿಗಳು ಸಹಿಸುವುದಿಲ್ಲ. ಶಾಪುರ ತಾಲ್ಲೂಕಿನ ಪರಮಣ್ಣನ ಕೊಲೆ ಇದನ್ನೇ ಸಾರುತ್ತಿದೆ. ಸಂವಿಧಾನ ರಕ್ಷಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಿರುವ ಜೆಡಿ(ಎಸ್) ಪಕ್ಷದ ಸಚಿವ, ಜಿಲ್ಲಾ ಉಸ್ತುವಾರಿ ಮಂತ್ರಿಯೇ ಜಾತಿವಾದಿ ಜಮೀನ್ದಾರಿಗಳ, ಕೊಲೆಗಡುಕರ ರಕ್ಷಕರಾಗಿ ನಿಂತಿರುವುದು ಪರಿಸ್ಥಿತಿಯ ಕ್ರೂರ ವ್ಯಂಗ್ಯವಾಗಿದೆ.

ದಲಿತನ ಕೊಲೆಗಾರರಿಗೆ ಉಸ್ತುವಾರಿ ಸಚಿವನೇ ರಕ್ಷಕ!

ಕೆಂತ್ತಲೆಯ ಪರದೆ ಸರಿಸಿ ಅಂಬೆಗಾಲಿಡುವ ಸೂರ್ಯನ ಕಣ್ ಬೆಳಕಿನಲ್ಲಿ ಕಲ್ಬುರ್ಗಿ ಇಷ್ಟಿಷ್ಟೇ ಅರಳುವ ಹೊತ್ತಲ್ಲಿ ಪ್ರಜಾವಾಣಿಯ ಸುದ್ದಿಯೊಂದು ಅತಂಕ ಹೊತ್ತು ತಂದಿತ್ತು. ಅಲ್ಹಾಳದ ಘಟನೆ ಖಂಡಿಸಿ 'ಅಟ್ರಾಸಿಟಿಕಾಯ್ದೆ' ರದ್ದುಗೊಳಿಸಲು ಒತ್ತಾಯಿಸಿ ವೀರ ಶೈವ ಸಂಘದವರು ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿ ಮೆರವಣಿಗೆಯೊಂದು ಸುರಪುರದಲ್ಲಿ ನಡೆದಿದೆ. ನನಗೆ ಥಟ್ಟಂತ ನಾಲ್ಕು ವರ್ಷದ ಹಿಂದೆ ನ್ಯಾಯಾಧೀಶರೊಬ್ಬರು ಲೋಕಾಭಿರಾಮವಾಗಿ ಮಾತಾಡುತ್ತ, 'ಈ ವರದಕ್ಷಿಣೆ ಕಾಯ್ದೆ ದುರುಪಯೋಗ ಆಗ್ತಾ ಇದೆ. ರದ್ದಾದರೆ ಒಳ್ಳೆಯದು' ಎಂದು ನುಡಿದದ್ದು, ನೆನಪಾಯ್ತು. 'ಹೆಣ್ಮಕ್ಕಳು ಗೌರವದಿಂದ ಬದುಕು ನಡಸ್ಲಿಕ್ ಸಾಧ್ಯ ಇಲ್ದಂಗ ಆಗ್ಯಾದ. ದೌರ್ಜನ್ಯ ಎದುರಿಸಲಿಕ್ಕ ಮತ್ತೊಂದು ಸಮರ್ಥ ಕಾಯ್ದೆ ಇಲ್ಲ... ಇದ್ದ ಕಾಯ್ದೆನೂ ತಗದ್ರ ಹ್ಯಾಂಗ? ಅದಕ್ಕೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಜಾರಿ ಮಾಡ್ರಿ ಅಂತ ಜನವಾದಿ ಹೋರಾಟ ಅದಾ...' ಅಂದಿದ್ದೆ. ಈಗ ಇದೇ ಪಾಳೇಗಾರಿ ಮನಸ್ಸುಗಳು 'ಅಟ್ರಾಸಿಟಿ ಕಾಯ್ದೆ' ರದ್ದುಗೊಳಿಸಿ, ದಲಿತರ ಮೇಲೆ ನಡೆಸುವ ದೌರ್ಜನ್ಯಕ್ಕೆ ಸುಗಮದ ಹಾದಿ ಕೇಳಿದ್ದಾರೆ. ದೌರ್ಜನ್ಯ ತಡೆಗಟ್ಟುವ ಮಾನವೀಯ ಮನಸ್ಸಿಲ್ಲದ ಇವರು ಹಿಂದೆ ಚಿಟ್ಟಾ ಘಟನೆಯಾದಾಗಲೂ ಇದೇ ಜನ ವಿರೋಧೀ ಕೂಗು ಹಾಕಿ ಮೇಲ್ಜಾತಿಯ ಧಿಮಾಕು ಮೆರೆದಿದ್ದರು. 'ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ....' ಎಂದ ಬಸವಣ್ಣನ ನಾಡಲ್ಲಿ ಇಂಥ ಘಟನೆಗಳು ಏನನ್ನು ಧ್ವನಿಸುತ್ತವೆ? ಅಷ್ಟಕ್ಕೂ ಅಲ್ಹಾಳದ ಪ್ರಕರಣ (ಏಪ್ರಿಲ್ 14 ರಿಂದ) ದಿಂದೀಚೆಗೆ ಪೋಲೀಸ್ ಠಾಣೆಯಲ್ಲಿ ಒಂದೇ ಒಂದು ಅಟ್ರಾಸಿಟಿ ಕೇಸು ಆಗಿಲ್ಲ. ಆದಾಗ್ಯೂ ಈ ಬೇಡಿಕೆ!? ಜೆಡಿ(ಎಸ್) ಮುಖಂಡರು ಮೆರವಣಿಗೆಗೆ ನೇತೃತ್ವ ಕೊಟ್ಟಿದ್ದಾರೆ. ಶಂಕ್ರಣ್ಣ ವಣಕ್ಯಾಳ ದಲಿತರ ಓಟೂ ಪಡೆದು ಹಿಂದೆ ಝಡ್ ಪಿಯ ಉಪಾಧ್ಯಕ್ಷರಾದವರು. ಇದಕ್ಕೆ ಪ್ರತಿ ಹಂತದಲ್ಲಿಯೂ ಜಿಲ್ಲೆಯ ಉಸ್ತುವಾರಿ ಸಚಿವ ದರ್ಶನಾಪುರ ಆಶೀರ್ವಾದ. ಬಿಜೆಪಿಯೊಂದಿಗೆ ಕೈ ಜೋಡಿಸಿದ ಜೆಡಿ(ಎಸ್) ಅದರ ದಲಿತ ವಿರೋಧಿ ಮತ್ತು ಕೋಮುವಾದಿ ಅಜೆಂಡಾ ಜಾರಿ ಮಾಡುತ್ತಿದೆ.



ಕೊಲೆಯಾದ ದಲಿತ ಪರಮಣ್ಣ

ಅಲ್ಹಾಳದಲ್ಲಿ ನಡೆದಿದ್ದೇನು?

ಒಳಗಣ್ಣು ತೆರೆದು ಬಸವಣ್ಣನಂತೆ, ಅಲ್ಲಮನಂತೆ ಕನಿಷ್ಟ ಮನುಷ್ಯರಂತೆ ಒಮ್ಮೆ ನೋಡಲಾಗದೆ?

ಅದೊಂದು ಪುಟ್ಟ ಹಳ್ಳಿ. ಕೆಂಭಾವಿಯಿಂದ 20 ಕಿ.ಮೀ. ಗುಲ್ಬರ್ಗಾದಿಂದ 125 ಕಿ.ಮೀ. ದೂರ. ಶಾಪುರ ವಿಧಾನಸಭಾ ಕ್ಷೇತ್ರವಾದರೂ ಬಸವಣ್ಣ ಜನಿಸಿದ ಜಿಲ್ಲೆ ಬಿಜಾಪುರಕ್ಕೆ ಅಂಟಿಕೊಂಡ ಕಡೆಯ ಗಡಿ ಗ್ರಾಮ. 1500 ಜನಸಂಖ್ಯೆಯ ಹಳ್ಳಿಯ ಕೊನೆ ಮೂಲೆಯಲ್ಲಿ 300 ಜನ ದಲಿತರ ಸುಮಾರು 50 ಮನೆಗಳು. ದಲಿತರಿಗೆ ಒಂದಿಷ್ಟು ಭೂಮಿ ಇದೆ. ಹೀಗಾಗಿ ಉಂಡುಟ್ಟು ಗೌರವದಿಂದ ಬದುಕು ಸಾಗಿಸುತ್ತಿರುವ ಅವರ ನಡುವೆ ಶಿಕ್ಷಣ ಸಂಘಟನೆ ಹೋರಾಟದ ಪರಿಕಲ್ಪನೆಯಿದೆ. ಹೀಗಾಗಿಯೇ ಏಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದ್ದಾರೆ. ಹೇಗೂ ಬಿರು ಬಿಸಿಲು, ಕುಡಿವ ನೀರು ದಲಿತ ಓಣಿಯಲ್ಲಿಲ್ಲ. ಊರ ಬಾವಿಯ ನೀರು ಮುಟ್ಟುವ ಕಾರ್ಯಕ್ರಮ ಹಮ್ಮಿಕ್ಕೊಂಡಿದ್ದಾರೆ. ಪೋಲೀಸ್ ಬಂದೋಬಸ್ತಿನಲ್ಲಿ ಜಾರಿಯೂ ಮಾಡಿದ್ದಾರೆ. ಅಲ್ಲಿಂದ ಶುರುವಾಗಿದೆ ಸವರ್ಣೀಯರ ಮನದಾಳದಲ್ಲಿ ಕುದಿಯುತ್ತಿದ್ದ ತಲ್ಲಣ. ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಲೇ ನಯ ನಾಜೂಕಿನ ಸುಧಾರಣಾ ಕಾರ್ಯಕ್ರಮ ನಡೆಸುವವರು ಕುಪಿತರಾಗಿ ಅದೇ ದಿನ, ಸಾಯಂಕಾಲ ಊರ 'ಹನುಮಾನ' ಮಂದಿರ ದಲ್ಲಿ ಸಭೆ ಸೇರಿ (ದಲಿತೇತರರು) ಸಾಮಾಜಿಕ ಬಹಿಷ್ಕಾರಕ್ಕೆ ತೀರ್ಮಾನ ಮಾಡಿದ್ದಾರೆ. ಅಂದರೆ ಜಮೀನಿನಿಂದ ಬಿಡಿಸುವುದು, ಕಿರಾಣಿ ಕೊಡದಿರುವುದು. ದನ, ಕುರಿ ಕಾಯುವವರನ್ನು ಬಿಡಿಸುವುದು. ಇತ್ಯಾದಿ ಬೆಳಿಗ್ಗೆಯಿಂದ ಈ ಸಂವಿಧಾನ ವಿರೋಧಿ ಕಾನೂನು ಜಾರಿಯಾಗಿದೆ. ಅಷ್ಟಿಷ್ಟು ಅನುಕೂಲ ಇರುವುದರಿಂದ ಮತ್ತು ಇಂಥ ಕಷ್ಟ ಎದುರಿಸಲು ಮನಸೂ ಮಾಡಿ ದಲಿತರು ಹೊಲದಿಂದ ನಿರ್ಗಮಿಸಿದ್ದಾರೆ. ದುಡಿದುಣ್ಣಲು ಪಟ್ಟಣಕ್ಕೆ ಹೋದರಾಯ್ತೆಂದು ಕೊಂಡಿದ್ದಾರೆ. ಆದರೆ ಪ್ರಜ್ಞಾವಂತ ದಲಿತ ಮುಖಂಡರು ಸವರ್ಣೀಯ ಮುಖಂಡರ ಫರ್ಮಾನನ್ನು ಪ್ರಶ್ನಿಸಿದ್ದಾರೆ. ಜಾತ್ಯಾತೀತತೆಯೇ ಸಂವಿಧಾನದ ತಳಹದಿ, ಸಾಮಾಜಿಕ ಬಹಿಷ್ಕಾರ ಒಪ್ಪುವುದಿಲ್ಲವೆಂದು ಸಮೀಪದ ಪೋಲೀಸ್ ಸ್ಟೇಷನ್‌ಗೆ ದೂರು ಕೊಡಲು ಹೋಗಿದ್ದಾರೆ. ಆದರೆ ಪೋಲೀಸರು ದೂರು ದಾಖಲಿಸದೆ ತೇಪೆ ಹಚ್ಚುವ ಸಂಧಾನಕ್ಕೆ ಪ್ರಯತ್ನಿಸಿದ್ದಾರೆ. ಅಸ್ಪೃಶ್ಯತೆ ಆಚರಣೆ ಅಪರಾಧವೆಂಬುದು ಗೊತ್ತಿದ್ದೂ ಐಎಸ್‌ಪಿ ಮತ್ತು ಎಸ್‌ಐ(ಪ್ರಭುಗೌಡ ಪಾಟೀಲ್) ಹೀಗೆ



ದಲಿತರ ಮೇಲಿನ ಬಹಿಷ್ಕಾರ ಹಾಗೂ ದಲಿತ ಪರಮಣ್ಣನ ಕೊಲೆ ಬಗ್ಗೆ ವಿಷಯ ಅರಿಯಲು ಹೋದಾಗ ನಡದ ಹಲ್ಲೆಯಲ್ಲಿ ಕೈಮುರಿದುಕೊಂಡ ದಲಿತ ಸಂಘರ್ಷ ಸಮಿತಿ ನಾಯಕರಾದ ಮಾನಪ್ಪ ಕಲ್‌ಮನಿ

ವರ್ತಿಸಿರುವುದು ಪಕ್ಷಪಾತ ಧೋರಣೆಯಲ್ಲದೆ ಮತ್ತೇನು?

ಇದೇ ಸಂದರ್ಭದಲ್ಲಿ ಸಾಮಾಜಿಕ ಬಹಿಷ್ಕಾರ ನಡೆದಿರುವಾಗಲೇ ಪರಮಣ್ಣನ 'ಸಾವು' ಪ್ರಕರಣ ಮುಂದಾಗಿ ದಲಿತರ ಮೇಲಿನ ದೌರ್ಜನ್ಯದ ಕಾಂಡವೇ ಗಂಭೀರ ಸ್ವರೂಪ ಪಡೆದಿದೆ.

ಪರಮಣ್ಣನ ಸಾವು

ಇದು ಸಾವಲ್ಲ ಕೊಲೆ ಎಂಬುದು ಸಿಪಿಐ(ಎಂ) ಮತ್ತು ದಲಿತ ಮುಖಂಡರು ಸ್ಪಷ್ಟವಾಗಿ ಹೇಳುತ್ತಾರೆ. ಏಕೆಂದರೆ, ಗುರಣ್ಣಗೌಡ ಗೋಗಲ್ ಎಂಬ 150 ಎಕ್ರೆ ಜಮೀನ್ದಾರರು ತಾಳಿ ಕೋಟೆಯಲ್ಲಿ ಅಡಕೆ ವ್ಯಾಪಾರಿಯೂ ಆಗಿದ್ದು ಈತನ ಹೊಲವನ್ನು ದಲಿತ ಪರಮಣ್ಣ ಸಾಗುವಳಿ ಮಾಡುತ್ತಿದ್ದ ಮತ್ತು ಸರ್ಕಾರದಿಂದ ಕಡಿದು ಹಾಕಿಕೊಂಡಿದ್ದ ಆ ಹೊಲದ ಉಳುಮೆ ಇತ್ಯಾದಿಗೆಂದು ರೂ.40,000 ಖರ್ಚು ತಾನೇ ಮಾಡಿದ್ದ. ಹಣ ವಾಪಸ್ ಮಾಡಿದರೆ ಜಮೀನು ಬಿಡುವುದಾಗಿ, ನ್ಯಾಯದ ಮಾತಾಡಿದನು. ಇದಕ್ಕೊಪ್ಪದ ಗುರಣ್ಣಗೌಡ ಒತ್ತಾಯದಿಂದ ಟ್ರಾಕ್ಟರ್ ಮೂಲಕ ಹೊಲ ಉಳುಮೆ ಮಾಡುವಾಗ ಪರಮಣ್ಣ ತಡೆದಿದ್ದಾನೆ. ಗುರಣ್ಣ ತನ್ನ ಜಮೀನು ಪರಮಣ್ಣನಿಂದ ಬಿಡಿಸಿ ಕೊಡಿರೆಂದು ಪೋಲೀಸರಲ್ಲಿ ಮೊರೆ ಹೋಗಿದ್ದಾನೆ. ಪರಮಣ್ಣನನ್ನು ಎಸ್.ಐ. ಪ್ರಭುಗೌಡ ಕರೆ ಕಳಿಸಿದನು. ಆದರೆ ಪರಮಣ್ಣ ಸ್ಟೇಷನ್ನಿಗೆ ಹೋಗದ ಕಾರಣ ಮತ್ತು ಜಮೀನು ಪ್ರಕರಣ ರೆವಿನ್ಯೂ ವ್ಯಾಪ್ತಿಗೆ ಬರುವುದರಿಂದ ಪೋಲಿಸರು ತಾವೇನೂ ಮಾಡಂಗಿಲ್ಲ ಎಂದು ನೆಪ ಹೇಳಿದ ಮೇಲೆ ಗುರಣ್ಣ ನೇರ ಪರಮಣ್ಣನ ಮನೆಗೆ ಹೋಗಿ ಜೂನ್ 18 ರ ರಾತ್ರಿ ಪಂಚಾಯ್ತಿಗೆ ಬರಲು ಹೇಳಿದ್ದಾನೆ. ಪರಮಣ್ಣ ಒಪ್ಪಿಕೊಂಡು ರಾತ್ರಿ ಮನೆಯಿಂದ ಹೋದದ್ದಷ್ಟೆ ವಾಪಸ್ಸು ಬರಲೇ ಇಲ್ಲ. ಅಡವಿ, ಇತ್ಯಾದಿ ಕಡೆ ಹುಡುಕಾಡಿದರೂ ಸಿಕ್ಕಿಲ್ಲ. ಐದು ಮಕ್ಕಳ ತಂದೆ ಪರಮಣ್ಣನ ಹೆಣವು ಮರುದಿನ ಬೆಳಗು ಮುಂಜಾನೆ ಗುರಣ್ಣನ ಹೊಲದಲ್ಲಿನ ಮರಕ್ಕೆ ನೇತಾಡುತ್ತಿತ್ತು. ರಾತ್ರಿ ಗುರಣ್ಣ ಗೌಡ ಮತ್ತು ಅವನ ಗೂಂಡಾಪಡೆ ಪರಮಣ್ಣನನ್ನು ಹೊಡೆದು ಕೊಂದಿರುವ ಅನುಮಾನವಿದೆ. ಯಾರಿಗೆ

ಪುಟ 14ಕ್ಕೆ



ದೌರ್ಜನ್ಯಗಳನ್ನು ಖಂಡಿಸಿ ಎಷ್ಟೇ ದಬ್ಬಾಳಿಕೆ ಬಂದರೂ ಪ್ರತಿಭಟನಾ ಜಾಥಾ ನಡೆಸಿಯೇ ತೀರುವುದಾಗಿ ಪ್ರಕಟಿಸಿದ ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ನಾಯಕ ಮಾರುತಿ ಮಾನ್ಪಡೆ, ದಲಿತ ನಾಯಕರಾದ ಮಾನಪ್ಪ, ಲಕ್ಷ್ಮಣ ಮುಂತಾದವರು



ಉಸ್ತುವಾರಿ ಸಚಿವ ಸಂವಿಧಾನ ವಿರೋಧಿ

ಶಹಪುರದ ಅಲ್ಹಾಳ್ ದಲಿತ ಮೇಲಿನ ಬಹಿಷ್ಕಾರ ಹಾಗೂ ದಲಿತ ಭೂ ಕೃಷಿಕ ಪರಮಣ್ಣನ ಕೊಲೆ ಪ್ರಕರಣದಲ್ಲಿ ಇಷ್ಟೆಲ್ಲಾ ಅನಾಹುತಗಳು ಸಂಭವಿಸಲು ಗುಲಬರ್ಗಾ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರರ ಸಕ್ರಿಯ ಬೆಂಬಲ ಅಲ್ಲಿನ ಭೂ ಮಾಲೀಕರಿಗೆ ನೀಡುತ್ತಿರುವುದು ಎದ್ದು ಕಾಣುತ್ತದೆ. ಮೊನ್ನೆ 'ವೀರಶೈವರ' ಹೆಸರಿನಲ್ಲಿ ನಡೆಸಿದ ಮೆರವಣಿಗೆ ಜೆಡಿ(ಎಸ್) ಪಕ್ಷವೇ ವ್ಯವಸ್ಥೆಗೊಳಿಸಿದ್ದಾಗಿತ್ತು. ಇದಕ್ಕೆ ದರ್ಶನಾಪೂರರವರ ಸರ್ವ ಸಹಾಯವಿತ್ತು. ಭಾರತದ ಸಂವಿಧಾನದ ಮೇಲೆ ಪ್ರಮಾಣ ಮಾಡಿರುವ ಸಚಿವನೊಬ್ಬ ಈ ರೀತಿಯಲ್ಲಿ ದಲಿತರ ವಿರುದ್ಧದ ದೌರ್ಜನ್ಯಗಳಿಗೆ ಬೆನ್ನೆಲುಬಾಗಿ ನಿಲ್ಲುವುದು ಕೇವಲ ಜಾತಿವಾದಿತನವಲ್ಲ, ಅದು ಸಂವಿಧಾನ ವಿರೋಧಿ ಕೃತ್ಯವಾಗಿದೆ. ಇಂತಹ ಮುಕುಟಮಣಿಗಳು ಕುಮಾರಸ್ವಾಮಿ, ಯಡಿಯೂರಪ್ಪನವರ 'ಜಾ-ಕೋ' ಸರ್ಕಾರದಲ್ಲಿ ಮಿಂಚುತ್ತಿದ್ದಾರೆ. ತನ್ನ ಸಚಿವನೊಬ್ಬನ ಪುಂಡಾಡಿಕೆ, ಸಂವಿಧಾನ ವಿರೋಧಿ ಕೃತ್ಯಗಳನ್ನು ಅರಿಯದಷ್ಟು ಈ ನಾಯಕರು ಕುರುಡರೇ? ಅಥವಾ ಮೇಲ್ಜಾತಿ, [illegible] 'ಜಾ-ಕೋ' ಸರ್ಕಾರದ ಅವಧಿಯಲ್ಲೇ 50 ಕ್ಕೂ ಹೆಚ್ಚು ದಲಿತರ ಮೇಲಿನ ದೌರ್ಜನ್ಯಗಳು ನಡೆದರೂ [illegible] ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ ಇದು ಏನನ್ನು ಹೇಳುತ್ತದೆ?

ಗಣಿಯ ಕುಣಿಯಲ್ಲಿ ಬಳ್ಳಾರಿ ರಾಜಕೀಯ


ಬೇರುಗಳ ಬುಡಕ್ಕೂ ಚಾಚಿದ ಕೈಗಳು!

ಇಲ್ಲಿ ಗಣಿ ಹಣವೇ ರಾಜಕಾರಣ. ಕಬ್ಬಿಣದ ಗಣಿಯ ಹಣದ ಧೂಳು ರಾಜ್ಯದ ರಾಜಕಾರಣವನ್ನು ಆವರಿಸಿದೆ. ಇವರು ಮಣ್ಣಿನ ಮಕ್ಕಳೇ? ನಾಡಿನ ದ್ರೋಹಿಗಳೇ?

ಕಳೆದ ನಾಲ್ಕೈದು ವರ್ಷಗಳಿಂದ ಶುರುವಾದ ಗಣಿ ಉದ್ಯಮದ ಭರಾಟೆ ಧೂಳೆಬ್ಬಿಸುತ್ತಾ ನಡೆದಿದ್ದು, ಗಣಿ ಉದ್ಯಮಿಗಳು ನೆಲವನ್ನು ಬಿಟ್ಟು ಆಕಾಶಮಾರ್ಗದಲ್ಲಿ ಸಂಚರಿಸಲಾರಂಭಿಸಿದ್ದಾರೆ. ಜನರು ಮಾತ್ರ ಗಣಿಯ ಕುಣಿಯಲ್ಲಿ ಕುಸಿದು ಪಾತಾಳ ಸೇರುತ್ತಿದ್ದಾರೆ. ರಸ್ತೆಗಳು ಹದಗೆಟ್ಟು ವಿಜಯನಗರ ಕಾಲದ ಮಣ್ಣಿನ ಕುಣಿ ರಸ್ತೆಗಳಾಗಿವೆ. 'ಪರಿಸರ ಮಾಲಿನ್ಯ ನಿಮ್ಮ ಹಣೆಬರಹ. ಲಾಭ ಮಾತ್ರ ನಮ್ಮದು' ಎಂದು ಅತ್ಯಮೂಲ್ಯ ಸಂಪನ್ಮೂಲವಾದ ಉತ್ಕೃಷ್ಟ ಕಬ್ಬಿಣದ ಖನಿಜವನ್ನು ಸ್ವಂತಹ ಆಸ್ತಿ ಎನ್ನುವಂತೆ ಲೂಟಿ ಮಾಡಲಾಗುತ್ತಿದೆ. ಇದಕ್ಕೆ ಸರ್ಕಾರಗಳು ರಾಯಲ್ಟಿ ಎನ್ನುವುದನ್ನು ಪಡೆದು ಹಸಿರು ನಿಶಾನೆ ತೋರಿಸುತ್ತಿವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಏನೆಲ್ಲಾ ಮಾಡುತ್ತಿದೆ ಎನ್ನುವುದನ್ನು ನೋಡಬೇಕೆಂದರೆ ಬಳ್ಳಾರಿ ಜಿಲ್ಲೆಗೆ ಬಂದು ಹಾದು ಹೋದರೆ ಸಾಕು, ನಿಮ್ಮ ಮೈ, ಮನಸ್ಸು,ಬಟ್ಟೆ ಎಲ್ಲವೂ ಗಣಿ ಮಣ್ಣು ತುಂಬಿಕೊಂಡು ಜಾಗತೀಕರಣದ ಪರವಾಗಿ ಇರುವವರು ಸಹ ಧಿಕ್ಕಾರ ಕೂಗಿ ಬಿಡುತ್ತಾರೆ.

ಕಳೆದ ವಿಧಾನಸಭೆ ಹಾಗೂ


ವಿದೇಶಗಳತ್ತ ಹೊರಡಲಣಿಯಾಗುತ್ತಿರುವ ಅದಿರು

ಪಾರ್ಲಿಮೆಂಟ್ ಚುನಾವಣೆಯಲ್ಲಿ ಪಕ್ಷಬೇಧ ಮರೆತು ಇಂತಹ ಜಾಗತೀಕರಣದ ಪೂಜಾರಿ ಶಾಸಕರನ್ನು, ಸಂಸದರನ್ನು ಆಯ್ಕೆ ಮಾಡಿದೆ. ಜಿಲ್ಲೆಯ ಹರಪನಹಳ್ಳಿ ಕ್ಷೇತ್ರ ಸೇರಿದಂತೆ ಒಟ್ಟು 8ಜನ ಶಾಸಕರು, ಒಬ್ಬ ಸಂಸದರ ಪೈಕಿ 6ಜನ ಶಾಸಕರು ಗಣಿ ಉದ್ಯಮಕ್ಕೆ ನೇರ ಸಂಪರ್ಕ ಹೊಂದಿದವರಾಗಿದ್ದಾರೆ. ಸಂಸದ ಜಿ.ಕರುಣಾಕರ ರೆಡ್ಡಿ ಕೂಡಾ ಗಣಿ ಉದ್ಯಮಿಯೇ ಆಗಿದ್ದಾರೆ.



ಶಿರುಗುಪ್ಪದ ಸೋಮಲಿಂಗಪ್ಪ ಯಾವುದೇ ಗಣಿ ಉದ್ಯಮಿಯಲ್ಲವಾದರೂ ಗಣಿ ಉದ್ಯಮಿಗಳ ಬೆಂಬಲದಿಂದಲೇ ಗೆದ್ದವರಾಗಿದ್ದಾರೆ.

ಉಳಿದಂತೆ ಶ್ರೀರಾಮಲು, ಎಚ್.ಆರ್.ಗವಿಯಪ್ಪ, ಸೂರ್ಯನಾರಾಯಣ ರೆಡ್ಡಿ, ಅನೀಲ್ ಲಾಡ್, ಸಂತೋಷ ಲಾಡ್ ಇವರೆಲ್ಲಾ ಗಣಿ ಉದ್ಯಮಿಗಳೇ. ವಿಧಾನ ಪರಿಷತ್‌ಗೆ ನಾಮಕರಣಗೊಂಡ ಇಬ್ಬರು ಸದಸ್ಯರಲ್ಲಿ ಒಬ್ಬ ಜಿ. ಜನಾರ್ಧನ ರೆಡ್ಡಿ, ಇನ್ನೊಬ್ಬ ಕೆ.ಸಿ.ಕೊಂಡಯ್ಯ.

ಇವರೆಲ್ಲಾ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದಿಂದ ಗುರುತಿಸಿಕೊಂಡವರಾಗಿದ್ದಾರೆ. ಪಕ್ಷರಾಜಕಾರಣದ ಸ್ಥಿತಿ ಇದು. ಇದಲ್ಲದೇ ಡಿಗ್ಗಿಂಗ್, ಅಕ್ರಮ ಗಣಿಗಾರಿಕೆಯಲ್ಲೂ ಈ ರಾಜಕೀಯ ಪಕ್ಷಗಳ ಛೋಟಾ, ಮೋಟಾ ನಾಯಕರು ಹಿಂದೆ ಬಿದ್ದಿಲ್ಲ. ಗಣಿ ಹಣವೇ ರಾಜಕಾರಣವಾಗಿದೆ.

ಸಮಾಜಸೇವೆ

ಸಮಾಜಸೇವೆಯ ಹೆಸರಲ್ಲಿ ಅನೇಕ ಗಣಿ ಉದ್ಯಮಿಗಳು ಹೊರ ಬಿದ್ದಿದ್ದಾರೆ. ಬಡವರ ಕಲ್ಯಾಣ ಕಾರ್ಯಗಳಿಗೆ ಕೈಜೋಡಿಸುತ್ತಿದ್ದಾರೆ. ಇದಕ್ಕೆ ಮುಖ್ಯ ಚಾಲಕ ಶಕ್ತಿ ರಾಜಕೀಯ ಅಧಿಕಾರ ಪಡೆಯುವುದಾಗಿದೆ. ಒಮ್ಮೆ ಅಧಿಕಾರ ಬಂದರೆ ಮತ್ತೆ ರೊಕ್ಕ ಜಮಾ ಮಾಡಿಕೊಳ್ಳಬಹುದಲ್ಲ! ಇದಕ್ಕಾಗಿಯೇ ಈಗಾಗಲೇ ಇಂತಹ ರಿಹರ್ಸಲ್ ಶುರುವಾಗಿದೆ.

ಸರ್ಕಾರವೇ ಪತನ

ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್, ಜೆಡಿಎಸ್ ಮೈತ್ರಿಕೂಟ ಸರ್ಕಾರ ಪತನವಾಗಲು ಈ ಗಣಿ ಹಣವೇ ಮುಖ್ಯಪಾತ್ರ ವಹಿಸಿದೆ ಎನ್ನುವುದು ಗುಟ್ಟಾಗೇನೂ ಉಳಿದಿಲ್ಲ. ಬಿಜೆಪಿ ರೆಸಾರ್ಟ್ ಯಾತ್ರೆಯ ಹೊಣೆಯನ್ನು ಅನಿಲ್ ಲಾಡ್, ಜೆಡಿಎಸ್ ರೆಸಾರ್ಟ್ ಯಾತ್ರೆಯ ಹೊಣೆಯನ್ನು ನಾರಾ ಸೂರ್ಯನಾರಾಯಣ ರೆಡ್ಡಿ, ಸಂತೋಷ ಲಾಡ್‌ನಂತವರು ವಹಿಸಿದ್ದರು. ನಂತರ ನಡೆದ ರಾಜಕೀಯ ವಿದ್ಯಾಮಾನಗಳಲ್ಲಿ ಸಿಡಿ ರೆಡ್ಡಿ ಎಂದೇ ಖ್ಯಾತಿ ಪಡೆದ ವಿಧಾನ ಪರಿಷತ್ ಸದಸ್ಯ ಜಿ.ಜನಾರ್ಧನ ರೆಡ್ಡಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಗಣಿ ಉದ್ಯಮಿಗಳಿಂದ 200 ಕೋಟಿ ರೂ. ಪಡೆದ ಆರೋಪ ಮಾಡಿ ಸಿಡಿ ಪ್ರದರ್ಶಿಸಿದ್ದರು. ಸಿಡಿಯಲ್ಲಿ ಅರಣ್ಯಸಚಿವ ಚೆನ್ನಿಗಪ್ಪ ಹಣದ ವ್ಯವಹಾರ ಮಾತಾನ್ನಾಡುವ ಚಿತ್ರ ಕಾಣಿಸಿಕೊಂಡಿತ್ತು. ಈ ಪ್ರಕರಣ ಈಗ ನ್ಯಾಯಾಲಯ ಮೆಟ್ಟಿಲೇರಿದೆ. ಲೋಕಾಯುಕ್ತರ ತೆಕ್ಕೆಗೆ ಹೋಗಿದೆ.

ಗಣಿ ಉದ್ಯಮದಿಂದ ಸರ್ಕಾರ ನೂರಾರು ಕೋಟಿ ರೂ. ಆದಾಯ ಪಡೆದಿದೆ. ಇಲ್ಲಿಯ ಜನರ ಜೀವನ ಮಟ್ಟ ಸುಧಾರಣೆಯಾಗಿದೆ ಎಂದೆಲ್ಲಾ ಬುರಡೆ ಬಿಡಲಾಗುತ್ತಿದೆ. ವಾಸ್ತವವಾಗಿ ಸಂಪತ್ತು ಕೆಲವರಲ್ಲೇ ಕೇಂದ್ರೀಕರಣಗೊಂಡಿದೆ. ಬಡವರು ಇನ್ನಿಷ್ಟು ಬಡವರಾಗಿ ನಿರ್ಗತಿಕರಾಗುತ್ತಿದ್ದಾರೆ. ಗಣಿಗಾರಿಕೆಯಲ್ಲಿ ಕೆಲಸ ಮಾಡುವ ಶ್ರಮಜೀವಿಗಳ ಪಾಡಂತೂ ಇನ್ನೂ ಕಷ್ಟಕರವಾಗಿದೆ. ಅವರ ಆರೋಗ್ಯದ ಮಟ್ಟ ಕುಸಿಯುತ್ತಿದೆ. ಅಂತರ್ಜಲ ನಶಿಸುತ್ತಿದೆ. ಹೊಲಗಳು ಹಸಿರು ಬೆಳೆ ತೆಗೆಯುವುದು ಬಿಟ್ಟಿ ನೆಲ ಅಗೆದು ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ಎಷ್ಟು ಸಾಧ್ಯವೋ ಅಷ್ಟು ದೋಚು, ದೋಚಿದ ನಂತರ ದೊಡ್ಡ ಮನುಷ್ಯನಾಗು, ನಂತರ ನೀತಿ ಕಥೆ ಹೇಳು ಎಂಬ ಬಂಡವಾಳಶಾಹಿ ನೀತಿಯೇ ಈಗ ಮಂತ್ರವಾಗಿದೆ.


ಗಣಿಗಾರಿಕೆಯ ಸ್ಫೋಟಕ್ಕೆ ಸಿಕ್ಕು ಮನೆಗಳು ಬಿರುಕು ಬಿಟ್ಟಿವೆ. ಇಡೀ ಹಳ್ಳಿಗಳು ನಿರಾಶ್ರಿತರಾಗಿ ಗುಳೇ ಹೋಗಬೇಕಾದ ಸ್ಥಿತಿಗೆ ಬಂದಿವೆ. ರಸ್ತೆಗಳು ಹೊಂಡಗಳಾಗಿವೆ. ಗಣಿಧಣಿಗಳು ಮಹಾನಗರಗಳಲ್ಲಿ ವೈಭೋವೋಪಿತ ಜೀವನ ನಡೆಸುತ್ತಿದ್ದು, ಈ ಹಾಳಾದ ರಸ್ತೆಗಳ ಸಹವಾಸವೇ ಬೇಡ ಎಂದು ಹೆಲಿಕ್ಯಾಪ್ಟರ್ ಕೊಂಡು ಓಡಾಟ ಆರಂಭಿಸಿದ್ದಾರೆ. ಯಾರದೋ ಸಂತೋಷಕ್ಕೆ, ಯಾರದೋ ಲಾಭಕ್ಕೆ ಜಿಲ್ಲೆಯ ಅತ್ಯಮೂಲ್ಯ ಸಂಪನ್ಮೂಲವನ್ನು ಕಳೆದುಕೊಂಡು ನರಕವಾದ ಜಾಗದಲ್ಲಿಯೇ ಜೀವನ ಮಾಡುವವರ ಸಾಮಾನ್ಯರ ಸಂಕಟಗಳಿಗೆ, ದುಃಖದುಮ್ಮಾನಗಳಿಗೆ ಯಾವ ಬೆಲೆ ಇದೆ.


ಸಿಡಿ 'ಖ್ಯಾತಿ'ಯ ಜನಾರ್ದನ ರೆಡ್ಡಿ

ಇಂತಹ ಪ್ರಶ್ನೆಗಳೇ ಮುಂದೊಂದು ದಿನ ಉತ್ತರವಾಗಿ ನಿಲ್ಲುತ್ತವೆ.

ಗಣಿ ಉದ್ಯಮ

ಜಿಲ್ಲೆಯಲ್ಲಿ ಈ ಹಿಂದೆ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಡೋಣಿಮಲೈ ಎಂ.ಎಂ.ಟಿ.ಸಿ. ಮೂಲಕವೇ ಕಬ್ಬಿಣದ ಅದಿರು ಬೇರೆ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಎಲ್ಲಾ ಗಣಿ ಉದ್ಯಮಿಗಳು ಈ ಸಂಸ್ಥೆಯ ಮುಂದೆ ಕ್ಯೂ ನಿಲ್ಲಬೇಕಿತ್ತು. ಸರ್ಕಾರಿ ಸ್ವಾಮ್ಯದ ಕಬ್ಬಿಣ ಕಾರ್ಖಾನೆಗೆ ಅದಿರು ಸಾಗಿಸಿ ಹೆಚ್ಚುವರಿಯನ್ನು ಪರದೇಶಕ್ಕೆ ರಫ್ತು


ಅಕ್ರಮ ಗಣಿಗಾರಿಕೆಗೆ ಅಡ್ಡಿ ಎಲ್ಲಿ?

ಮಾಡಲಾಗುತ್ತಿತ್ತು. ಯಾವಾಗ ಜಾಗತೀಕರಣ ಕಾಲಿಟ್ಟಿತೋ. ಇದೆಲ್ಲಾ ಬುಡಮೇಲು ಆಯಿತು. ಚೈನಾದೇಶದ ತಂಡವೊಂದು ಇಲ್ಲಿಗೆ ಬಂದು ಕಬ್ಬಿಣದ ಅದಿರು ಕಲ್ಲು ಬದಲು ಇದುವರೆಗೆ ಅದಿರು ತೆಗೆದಿದ್ದ, ಅದಿರಿಗೆ ಹೊಂದಿಕೊಂಡಿದ್ದ ಮಣ್ಣನ್ನು ಕೊಳ್ಳಲು ಆಸಕ್ತಿ ತೋರಿಸಿತು. ಇಲ್ಲಿಯ ಮಣ್ಣಿಗೆ ಚಿನ್ನದ ಬೆಲೆ ಬಂದಿತು. ಅದಿರು ಮಣ್ಣು 63.5 ಗ್ರೇಡ್ ಕಬ್ಬಿಣದ ಅದಿರು ಇರಬೇಕೆಂದು ಹೇಳಿತು. ಶುರುವಾಯಿತು ಗಣಿ ಭರಾಟೆ. ರಾಶಿ ರಾಶಿಯಾಗಿ ಎಲ್ಲಂದರಲ್ಲಿ ಬಿದ್ದಿದ್ದ ಮಣ್ಣು ಕಾರವಾರ, ಗೋವಾ ಬಂದರಿನ ಮೂಲಕ ಚೀನಾದೇಶಕ್ಕೆ ಸಾಗಾಣಿಕೆ ಶುರುವಾಯಿತು. ಸಂಡೂರು, ಬಳ್ಳಾರಿ, ಹೊಸಪೇಟೆಯಲ್ಲಿ ಮಣ್ಣು ಪರೀಕ್ಷಾ ಮಾಡುವ ಕೇಂದ್ರಗಳು ರಕ್ತ-ಕಫ ಪರೀಕ್ಷೆ ಕೇಂದ್ರಗಳಂತೆ ಹುಟ್ಟಿಕೊಂಡವು. ಸಾವಿರಾರು ಲಾರಿಗಳು ಧೂಳೆಬ್ಬಿಸಿದವು. ಇಲ್ಲಿಯ ಮಣ್ಣು ಚಿನ್ನದ ಬೆಲೆಯಲ್ಲಿ ಹೋಗುತ್ತಿದೆ ಎಂದು ಗೊತ್ತಾದೊಡನೆ ಶುರುವಾಯಿತು ಮಾಫಿಯಾ. ಮಣ್ಣು ಕಳುವು ಮಾಡುವುದು. ಗಡಿ ವಿವಾದ, ಬೆಂಕಿ, ಬಾಂಬ್ ಬಳಕೆ ಎಲ್ಲವೂ ಕಾಲಿಟ್ಟವು. ಸರ್ವಂ ಮಣ್ಣುಮಯವಾಯಿತು. 'ಮಣ್ಣಿನ ಮಗ'ನೆಂದು ಕರೆದುಕೊಳ್ಳುವ ರಾಜಕಾರಣಿಗಳು ಸಹ ಈ ಮಣ್ಣಿಗೆ ಕಾಲಿಟ್ಟರು. ರಾಜಕಾರಣದ ಅಪವಿತ್ರ ಮೈತ್ರಿ ಈ ಮಣ್ಣು ಲೂಟಿಗೆ ಟೊಂಕಕಟ್ಟಿ ನಿಂತುಕೊಂಡಿತು.



ಬೆಟ್ಟಗಳ ಅಗೆದು ಖಜಾನೆ ತುಂಬಿಕೊಂಡರು

○ ವಸಂತ



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



ಇವರು ತಮಗರಿವಿಲ್ಲದೆ ಚರಿತ್ರೆ ಬರೆದವರು. ಒಮ್ಮೆ ದರ್ಗಾದಲ್ಲಿ ಎಲ್ಲರೂ ಅಲ್ಲಾಹುವಿನ 'ದುವಾ' ಬಯಸಿ ಪ್ರಾರ್ಥಿಸಿ ಬಂದರೆ ಮಗುದೊಮ್ಮೆ ಚರ್ಚಿನ ಶಿಲುಬೆ ಮುಂದೆ ನಿಂತು 'ಪ್ರಭುವೇ ಶಾಂತಿ ಕೊಡು ಎಲ್ಲರ ಬದುಕಿಗೆ' ಎಂದು ನಮಿಸುವರು. ಇನ್ನೊಮ್ಮೆ ಮರಗೆಮ್ಮನಿಗೂ ಕೈ ಮುಗಿವಾಗ ಯಾರಿಗೂ ಯಾವ ಧರ್ಮ ಅಡ್ಡಿ ಬಂದೇ ಇಲ್ಲ ಎಂದರೆ ನೀವು ನಂಬಲೇಬೇಕು.

'ಒಳ-ಹೊರಗನು ಅರಿತವರು ನೋಡಾ'

'ವಿಜಯ, ಜನಶಕ್ತಿ ಸಭೆಗೆ ಬರಬೇಕಲ್ಲಪ್ಪಾ'?

'ಆಯಿಗಿ ಎದಿಬ್ಯಾನಿ ಅಗ್ಯಾದ ದಾವಖಾನಿಗೆ ಹೋಗಿ ಬರ್ತೀನಿ.... ತಡಾನೂ ಆಗಬಹುದು' ಆ ಕಡೆಯಿಂದ ವಿಜಯನ ದನಿಯಲ್ಲಿ ನೋವಿತ್ತು. ಅರೇ ಹೋದ ತಿಂಗಳೇ ತೀರಿ ಹೋದ ಅಜ್ಜಿ ಯಾರು?

ಮರುದಿನ ಬೆಳಿಗ್ಗೆ ವಿಜು...ಮನೆಗೆ ಬಂದು 'ಸಾರಿ ಅಕ್ಕಾ..' ಅಂದು ಮುಖ ಸಪ್ಪಗೆ ಮಾಡಿದನು. ಅಜ್ಜಿಯ ಆರೋಗ್ಯ ವಿಚಾರಿಸಿದೆ. 'ಅಪ್ಪನ ಕಡೆ ಅಥವಾ ಅವ್ವನ ಕಡೆಯ ಅಜ್ಜಿ'..? ಕೇಳಿದೆ. "ಹೋದ ತಿಂಗಳು ತೀರಿ ಹೋದ ಶಿವಮ್ಮಳ ತಂಗಿ ಫಾತಿಮಾ ಬೀ ಇವಳು" ಅಂದನು. ಇನ್ನಷ್ಟು ವಿವರ ಕೆದಕಿದೆ. 'ಅದೇ ಅಕ್ಕ, ನಮ್ಮ ಇಬ್ರಾಹಿಂ ದೊಡ್ಡಪ್ಪನ ತಾಯಿ. ಅಂದ್ರ ನಮ್ಮ ಆಯಿ...' ನನಗೆ ಥಟ್ಟಂತ ಇಬ್ರಾಹಿಂ ನೆನಪಾದ. ಸೌದಿಯಲ್ಲಿ ಬ್ಯಾಂಕ್ ಮ್ಯಾನೇಜರ್‌ನಾಗಿದ್ದ ಇಬ್ರಾಹಿಂ ಗೆಳೆಯರ ಮೋಸಕ್ಕೆ ಒಳಗಾಗಿ ಇದ್ದ ಹಣವೆಲ್ಲ ಕಳಕೊಂಡು ಈಗ ಗುಲಬರ್ಗಾದಲ್ಲೇ ವಾಸ ಮಾಡುವ ಈತ ಒಮ್ಮೊಮ್ಮೆ ಥೇಟ್. ಮಗುವಿನಂಥ ಮನುಷ್ಯ. ಇಷ್ಟು ಬಿಟ್ಟರೆ ಹೆಚ್ಚೇನು ಮಾಹಿತಿ ನನಗಿರಲಿಲ್ಲ. ಸರ್ವ ಧರ್ಮ ಸಮನ್ವಯ ವಿಜಯ್‌ನೊಂದಿಗೆ ಜೀವಭಾವದ ಒಡನಾಟ ಹೊಂದಿರುವ ರೂಪೇಶ್ ನನ್ನಲ್ಲಿ ಹುಟ್ಟಿಕೊಂಡ ಪ್ರಶ್ನೆಗಳಿಗೆ ಅನುಮಾನಗಳಿಗೆ ಪರಿಹರಿಸುತ್ತಾ, 'ಅಕ್ಕ ವಿಜಿನ ಮನಿ ಅಂದ್ರ ಸರ್ವಧರ್ಮಗಳ ಸಮನ್ವಯ ಸಮಿತಿ ಇದ್ದಂಗ. ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಹಿಂಗ ಎಲ್ರೂ ಇವ್ರ ಮನ್ಯಾಗ ವಾಸ ಮಾಡ್ತಾರ. ಮತ್ತ ಎಲ್ಲ ಧರ್ಮಗಳ ಹಬ್ಬಾನೂ ಎಲ್ರೂ ಆಚರಿಸ್ತಾರ...' ಹೇಳಿದನು. ನನಗೆ ಬರ ಬಿದ್ದ ನೆಲದ ಬಿರುಕಲ್ಲಿ ಮಳೆ ಹನಿದಂಥ ಖುಷಿಯಾಗಿ ಹೊಲದ ಎರೆ ಮಣ್ಣು ಅರಳಿದಂತೆ ಉಲ್ಲಸಿತಳಾದೆ. ಜಾತಿ-ಧರ್ಮಗಳ ನಡುವೆ ಅಡ್ಡಗೋಡೆಗಳನ್ನು ಕಟ್ಟುವ ಮೂಲಕ ಮಾನವೀಯ ಮೌಲ್ಯಗಳಿಗೆ ಸೌಹಾರ್ದ ಪರಂಪರೆಗೆ ಧಕ್ಕೆ ತರುತ್ತಿರುವ ಕೋಮುವಾದಿ, ಮೂಲಭೂತವಾದಿಗಳು ಎಲ್ಲೆಂದರಲ್ಲಿ ಠಳಾಯಿಸುತ್ತಿರುವಾಗ ಇಂಥದೊಂದು ಕುಟುಂಬವಿದೆ ಎಂದರೇನೇ ಯಾರಿಗೆ ಮನ ತುಂಬಿ ಬರುವದಿಲ್ಲ ಹೇಳಿ? ಸಂಗಾತಿ ವಿಜಯ ಹೇಳುವ ಮನೆತನದ ಕತೆಗೆ ಮನದ ಕದ ತೆರೆದು ಕುಳಿತೆ. ಮೂರು ದಿನಗಳ ಹಿಂದೆ ಸುರಿದ ಮಳೆ



ತಂಪೆರೆದಿತ್ತು... ಸುಳಿದು ಬರುವ ತಂಗಾಳಿ ಅನಂತ ಕಾಂತತೆಯ ಸಂದೇಶ ಪಸರಿಸುತ್ತಿತ್ತು.

ಹೃದಯಕ್ಕಿಳಿದ ಸಿದ್ಧಾಂತ

ಗುಲ್ಬರ್ಗಾ ನಗರದ ಹೃದಯ ಭಾಗದಲ್ಲಿ ಬಟ್ಟೆ ಗಿರಣಿ. ಎಂ.ಎಸ್.ಕೆ. ಮಿಲ್ ಸಾವಿರಾರು ಜನರ ಹಸಿದೊಡಲಿಗೆ ಅನ್ನ ವಿಕ್ಕುವ ಗಾರುಡಿಗ. ಅಸಂಖ್ಯಾತ ಮಂದಿಯ ಮೈ ಮುಚ್ಚುವ ಬಟ್ಟೆ ಸಿದ್ಧಪಡಿಸುವ ಕಾರ್ಮಿಕರ ಪಟ್ಟಿಯಲ್ಲಿ ಚಂದಮ್ಮ ಸಹ ಮೈ ಮುರಿದು ದುಡಿಯುವ ಗಟ್ಟಿ ಹೆಂಗಸು. ಕೆಂಬಾವುಟದ ಯೂನಿಯನ್ನಿಗೆ ನಾಲ್ಕಾಣೆ ಕೊಟ್ಟು ಸದಸ್ಯಳಾದದ್ದು ಮಾತ್ರವಲ್ಲ ಸಿದ್ಧಾಂತವನ್ನು ಹೃದಯಕ್ಕಿಳಿಸಿಕೊಂಡವಳು. ಗಂಗಮ್ಮ ಶಿವಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳನ್ನು ಕಣ್ಣ ಪಾಪೆಯಂತೆ ಕಾಪಿಟ್ಟುಕೊಂಡು ಬೆಳೆಸಿದಳು. ಅದೊಂದು ನಡು ಮಧ್ಯಾಹ್ನ ಉರಿ ಬಿಸಿಲ ಸಮಯದಲ್ಲಿ ಅಬ್ದುಲ್ ಎಂಬ ಸುಂದರ ದೃಢಕಾಯದ ಹುಡುಗ ಚಂದಮ್ಮನ ಗುಡಿಸಲ ಮುಂದೆ ನಿಂತು ಬೆಳದಿಂಗಳಂಥ ವಿಶ್ವಾಸದ ಮುಗುಳ್ನಗೆಯಿಂದ "ಯವ್ವಾ, ಗಂಗಮ್ಮನ ಬಾಳ ಪ್ರೀತಿ ಮಾಡ್ತೀನಿ. ಬೊಂಬಾಯಿ ಮನುಶ್ಯಾ ನಾನು. ಬ್ಯಾರೆ ತಿಳಿಬ್ಯಾಡ. ಪ್ರೀತಿಲಿಂದ ಬಾಳಸ್ತೀನಿ." ಅಂತ ಪ್ರೇಮ ಭಿಕ್ಷೆ ಬೇಡಿದ. ಹಳೆಕಾಲದ ಸಂಪ್ರದಾಯದ ಹೆಂಗಸು ಹೂಂ ಅನ್ನದಿದ್ದರೆ..ದೂರ ಹೋಗಿ ಜೊತೆ ಬಾಳುವ ನಿರ್ಣಯ ಮಾಡಿದ್ದ ಅಬ್ದುಲ್ ಮತ್ತು ಗಂಗಮ್ಮರಿಗೆ ಚಂದಮ್ಮ" ...ಹುಂ... ನಿಮ್ಮ ಹಣ್ಯಾಗ ಶಟೆಗೆವ್ವ ಹಿಂಗೆ ಬರದರ

ನಾ ಹ್ಯಾಂಗ ಬ್ಯಾಡ ಅನ್ನಲಿ, ದುಡದು ಉಣ್ರಿ. ಮರ್ಯಾದಿಲಿಂದ ಜೀವನಾ ಮಾಡ್ರಿ. ಅದರಕಿನಾ ದೊಡ್ಡ ಧರ್ಮ ಯಾವುದದಾ...? 'ಅಂದ್ಯಾಗ ಖ[illegible]ನೇ ಮುಗಿಲ ಅಂಗಳ ತುಂಬಾ ರೆಕ್ಕೆ ಕಟ್ಕೊಂಡು ಬೆಳ್ಳಕ್ಕಿಯಂತೆ ಆದರು. ಮದಿ ಆದ ಮ್ಯಾಲ ಗಂಗಮ್ಮ ಅತ್ತಿ ಮಾವನ ಒತ್ತಾಸೆಲಿಂದ ಮಣೆದು ಫಾತಿಮಾ ಬೀ ಆಗಿದ್ದಕ್ಕನೂ ಚಂದಮ್ಮಗ ಅಸಹನಿ ಆಗಲಿಲ್ಲ. ವರ್ಷೊಪ್ಪೊತ್ತಿನೊಳಗೇ ಇಬ್ರಾಹಿಂ ಎಂಬ ಮಗು ಚಂದಮ್ಮನ ಪುಟ್ಟ ಮನೆಯ ತುಂಬಾ ಅಂಬೆಗಾಲಿಟ್ಟು ಖುಷಿಯ ಕಿಲಕಿ ಆಡಿಸಿದ. ಅಷ್ಟೊತ್ತಿಗೆ ಅನುಕೂಲದ ಜೀವನ ನಡೆಸುವ ಕನಸು ಹೊತ್ತು ಸೌದಿಗೆ ಹೋದ ಅಬ್ದುಲ್ ಕೆಲವು ವರ್ಷದಲ್ಲೇ ವಾಪಾಸಾಗಿ ತೀವ್ರ ಅನಾರೋಗ್ಯ ಕಾಡಿ ಇಲ್ಲವಾಗಿದ್ದು ಗಂಗಮ್ಮ ಉರುಫ್ ಫಾತಿಮಾಬೀ ಬದುಕಲ್ಲಿ ಆಘಾತದ ಅಲೆ ಅಪ್ಪಳಿಸಿದಂತಾಯ್ತು. ಆದರೆ ಭವಿಷ್ಯದ ಕುಡಿ ಇಬ್ರಾಹಿಂನನ್ನು ಬೆಳೆಸಿದಳು. ತಂಗಿ ಶಿವಮ್ಮನೊಂದಿಗೆ ಅದೇ ಮನೆಯಲ್ಲಿ ಜಂದಗಾಣಿ ರಥಕ್ಕೆ ಮತ್ತೆ ಹೆಗಲು ಕೊಟ್ಟಳು.

ಜಾತಿ-ಧರ್ಮ ಮುಖ್ಯವಾಗಲಿಲ್ಲ

ವಿಶ್ವಾಸ ಮತ್ತು ಪ್ರೀತಿಯ ಬಂಧದಲ್ಲಿ ಹೆಜ್ಜೆ ಹಾಕುವುದನ್ನು ಅರಗಿಸಿಕೊಂಡ ಕುಟುಂಬದ ಸದಸ್ಯರಿಗೆ ಜಾತಿ ಮತ್ತು ಧರ್ಮಗಳು ಮುಖ್ಯವಾಗಲೇ ಇಲ್ಲ. ಶಿವಮ್ಮನ ಮೊದಲ ಮಗಳು ಹಿಂದೂ ಮನೆಗೆ ಸೊಸೆಯಾದರೆ ಎರಡು ಮತ್ತು ಮೂರನೇ ಹೆಣ್ಣು ಮಕ್ಕಳು ಅನುಕ್ರಮವಾಗಿ ಜಾನ್ ಮತ್ತು ವೆಸ್ಲಿ ಪರೇರಾ ಎಂಬ ಕ್ರಿಶ್ಚನ್ ಕುಟುಂಬದಲ್ಲಿ ಮದುವೆಯಾಗಿ ಸೌಹಾರ್ದ ಸಂದೇಶದ ರೂವಾರಿಗಳಾದರು.

ಹರೆಯದ ಹಾದಿಯಲ್ಲಿ ಉರಿ ಬಿಸಿಲು ಬೆಳದಿಂಗಳಾಗಬಹುದು. ಕಲ್ಲರಳಿ ಹೂವಾಗಬಹುದು. ಆದರೆ ಕ್ರಮೇಣ ಈ ಪಾಳೇಗಾರಿ ಮತ್ತು ಜಾತಿವಾದಿ ವ್ಯವಸ್ಥೆ ಒಡ್ಡುವ ಸವಾಲುಗಳಿಗೆ ಆದರ್ಶದ ಪ್ರೇಮಿಗರ ಕನಸುಗಳನ್ನು ನುಚ್ಚುನೂರಾಗಿಸುವ ತಾಖತ್ತಿರುತ್ತದೆ. ಕ್ರೌರ್ಯದ ಮುಖ ಈ ಹೊತ್ತಿನವರೆಗೂ, ನಡೆದ ಎಷ್ಟೊಂದು ಕುಟುಂಬಗಳಲ್ಲಿನ ಕ್ರೌರ್ಯದ ಘಟನೆಗಳು ಎದೆಯೊಳಗೆ ತಲ್ಲಣದ ಅವಲಕ್ಕಿ ಕುಟ್ಟುತ್ತವೆ.

ಗಂಗಾವತಿಯ ಹಿಂದುಳಿದ ಹುಡುಗಿಯೊಬ್ಬಳು ದಲಿತ ಯುವಕನಲ್ಲಿ ಪ್ರೇಮಾಂಕುರವಾಗಿ, ಜೀವನದುದ್ದಕ್ಕೂ ಜೊತೆಯಿರಲು ರಿಜಿಸ್ಟಾರ್ ಮದುವೆ ಯಾಗಿದ್ದಕ್ಕೆ ಹೆತ್ತ ತಂದೆಯೇ ಹತ್ತು ಲೀಟರ್ ಸೀಮೆಎಣ್ಣೆ ಸುರುವಿ ಐದು ತಿಂಗಳು ಬಸುರಿ ಮಗಳನ್ನು ಜೀವಂತ ದಹಿಸಿದ್ದು ನಮಗೆಲ್ಲ ಕರುಳೊಳಗೆ ಕತ್ತರಿಯಾಡಿಸಿದಂತಾಗಿತ್ತು. ದಲಿತ ಯುವಕನೊಬ್ಬ ಮೇಲ್ಜಾತಿ ಹುಡುಗಿಯನ್ನು ಮದುವೆಯಾಗಿದ್ದಕ್ಕೆ ಕೈ ಕಾಲು ಕಟ್ಟಿ ಕಣ್ಣು ಕಿತ್ತಿದ ಪ್ರಸಂಗದಿಂದಾಗಿ ಈ ಕುರುಡು ಜಾತಿ ವ್ಯವಸ್ಥೆಯ ಮೇಲೆ ಕ್ಯಾಕರಿಸಿ ಉಗುಳುವಂತಾಗಿತ್ತು. ಮುಸ್ಲಿಂ ಯುವಕನನ್ನು ಮದುವೆಯಾಗಿದ್ದ ಹಿಂದೂ ಯುವತಿಯನ್ನು ಅಪಹರಿಸಿ 'ಧರ್ಮ ರಕ್ಷಿಸಿದ' ವಿರದಂತೆ ಪೋಜು ಕೊಟ್ಟು ರಾಕ್ಷಸಿ ಸಂಸ್ಕೃತಿ ಮೆರೆದ ಸಂಘ ಪರಿವಾರಿಗಳು ದೇಶದಗಲಕ್ಕೂ ಹರಡಿಕೊಂಡಿದ್ದಾರೆ.

ಭೂಮಂಡಲದ ಮೇಲಿನ ಒಡೆತನ ಹೊಂದಲು ಮತ್ತು ಪರಸ್ಪರ ಧರ್ಮ ಶ್ರೇಷ್ಠತೆಯ ಹಣಾಹಣಿಯಲ್ಲಿ ಭಯೋತ್ಪಾದನೆ-ಉಗ್ರವಾದಕ್ಕೆ ಮಣೆಹಾಕುತ್ತಿರುವಾಗ ನಮ್ಮೂರ ಚಂದಮ್ಮನ ಕುಟುಂಬ ನಂದಾದೀಪದಂತೆ ಬೆಳಕು ಹರಡುತ್ತಿರುವುದು ಯಾರೂ ಅಲ್ಲಗಳೆಯಲಾಗದು.

ಚರಿತ್ರೆ ಬರೆದವರು

ಪ್ರತಿ ಹಬ್ಬಗಳು ಆ ಮನೆಯಲ್ಲಿ ಆಚರಿಸಲ್ಪಡುತ್ತವೆ. ಇಬ್ರಾಹಿಂ, ಮುಪ್ಪಾಗಿ ಅನಾರೋಗ್ಯದಿಂದ ನರಳುತ್ತಿರುವ ಗಂಗಮ್ಮ ಉರುಫ್ ಫಾತಿಮಾಬಿ ಯನ್ನು ಉಪಚರಿಸಲು ಹಠ ಹೊತ್ತು ನಿಂತಂತೆಯೇ ಉಳಿದೆಲ್ಲರೂ ಇಬ್ರಾಹಿಂ ತಮ್ಮ ಮಾವನೆಂದೇ ಗೌರವಿಸಿ ಮುನ್ನಡೆಯುವುದು ಅವರೊಳಗಿನ ಮಾನವೀಯ ಕರುಳು-ಬಳ್ಳಿ ಸಂಬಂಧವನ್ನು ಮತ್ತೂ ಶ್ರೀಮಂತಗೊಳಿಸಿದೆ.

ಜಳ ಜಳ ಹರಿವ ತಿಳಿ ನೀರಾಗಿ ಸೌಹಾರ್ದ ಪರಂಪರೆಯ ಬೇರುಗಳನ್ನು ಗಟ್ಟಿಗೊಳಿಸಿ ಜನ ಬದುಕಿನ ಹಾದಿ ಹಸನುಗೊಳಿಸಿದ ಇವರು ತಮಗರಿವಿಲ್ಲದೆ ಚರಿತ್ರೆ ಬರೆದವರು. ಇಂಥ ಮಾನವೀಯ ಸಾಧನೆಗೆ ಅವರೂ ಯಾವ ಪ್ರಶಸ್ತಿ ಪಟ್ಟಬಯಸಲಿಲ್ಲ. ಒಮ್ಮೆ ದರ್ಗಾದಲ್ಲಿ ಎಲ್ಲರೂ ಅಲ್ಲಾಹುವಿನ 'ದುವಾ' ಬಯಸಿ ಪ್ರಾರ್ಥಿಸಿ ಬಂದರೆ ಮಗುದೊಮ್ಮೆ ಚರ್ಚಿನ ಶಿಲುಬೆ ಮುಂದೆ ನಿಂತು 'ಪ್ರಭುವೇ ಶಾಂತಿ ಕೊಡು ಎಲ್ಲರ ಬದುಕಿಗೆ' ಎಂದು ನಮಿಸುವರು. ಇನ್ನೊಮ್ಮೆ ಮರಗೆಮ್ಮನಿಗೂ ಕೈ ಮುಗಿವಾಗ ಯಾರಿಗೂ ಯಾವ ಧರ್ಮ ಅಡ್ಡಿ ಬಂದೇ ಇಲ್ಲ ಎಂದ್ರರೆ ನೀವು ನಂಬಲೇಬೇಕು.

ನಾವು ಜಾತಿ ಧಿಕ್ಕರಿಸಿ ಒಂದು ಸೂರಡಿ ಜೀವನ ಸುರು ಮಾಡಿದ ಏಳು ವರ್ಷದವರೆಗೂ ಹೆತ್ತವರ ಮನೆಯಿಂದ ಬಹಿಷ್ಕರಿಸಲ್ಪಟ್ಟ ದಿನಗಳ ನೆನಪಾದವು. ಯಾವುದು ಕರುಳು ಬಳ್ಳಿ? ಮಾನವೀಯ ಮೌಲ್ಯಗಳ ವಿಜುನ ಕುಟುಂಬವೇ ಕರುಳು ಬಳ್ಳಿಯ ಅಂತಸಾಕ್ಷಿಯಲ್ಲವೇ? ... ವಿಜಯನೊಂದಿಗೆ ಮಾತು ಮುಗಿಸುವಾಗ ಥಟ್ಟಂತ ಅಲ್ಲಮ ಪ್ರಭುವಿನ ವಚನದ ಕೊನೆ ಸಾಲು '... ಜಾತ್ಯಾಂಧರು ನಿಮ್ಮನೆತ್ತಬಲ್ಲರು ಗುಹೇಶ್ವರ...' ಮನದಲ್ಲಿ ಸುಳಿಯಿತು.

○

ಎಪಿಎಂಸಿ ಕಾಯ್ದೆ ತಿದ್ದುಪಡಿ...... ಯಾರ್‍ಯಾರು ಏನೇನಂತಾರೆ

"ಎಪಿಎಂಸಿ ಕಾಯ್ದೆ ತಿದ್ದುಪಡಿ ತಂದಿರುವುದು ಬೀಜ ಕಾಯ್ದೆ ತಿದ್ದುಪಡಿ, ಯತ್ನ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ, ಹಾಲು ಮತ್ತು ಹಾಲಿನ ಉತ್ಪನ್ನಗಳ ಅಧಿನಿಯಮ (ಎಂಎಂಪಿಓ) ತಿದ್ದುಪಡಿ ಇಂತಹ ಹಲವಾರು ಕಾನೂನು ತಿದ್ದುಪಡಿಗಳು ಬರುತ್ತಿವೆ.

ನಮ್ಮ ಭಾರತ ದೇಶದ ಕೃಷಿಯನ್ನು ಜಾಗತಿಕ ಬಂಡವಾಳ ಹೂಡಿಕೆ ಮಾರುಕಟ್ಟೆಯೊಂದಿಗೆ ಜೋಡಿಸುವುದು, ವಿದೇಶಿ ಶಕ್ತಿಗಳ ಮುಕ್ತ ಲೂಟಿಗೆ ಅವಕಾಶ ಮಾಡಿಕೊಡುವುದು ಇವೆಲ್ಲವುಗಳ ಉದ್ದೇಶ.

ಎಪಿಎಂಸಿ ಕಾಯ್ದೆ ತಿದ್ದುಪಡಿ ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ ನೀಡಿದೆ."

ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿ,
ಕರ್ನಾಟಕ ಪ್ರಾಂತ ರೈತ ಸಂಘ

★

ಭೂ ಸುಧಾರಣೆಯ ಉದ್ದೇಶ ಧ್ವಂಸ

"ಕಾಯ್ದೆ ತಿದ್ದುಪಡಿ ಮೂಲಕ ಗುತ್ತಿಗೆ ಕೃಷಿ ಅವಕಾಶ ನೀಡಲಾಗಿದೆ. ಕೃಷಿಯಲ್ಲಿ ಬಂಡವಾಳಗಾರರನ್ನು ಬೆಳೆಸುವ ಮೊದಲ ಹೆಜ್ಜೆ ಇದು. ಇದರಿಂದ ಭೂ ಸುಧಾರಣೆಯ ಉದ್ದೇಶ ಧ್ವಂಸವಾಗುತ್ತದೆ. ಭೂಮಿಯು ಕೆಲವೇ ಶ್ರೀಮಂತರಲ್ಲಿ ಕಂಪನಿಗಳಲ್ಲಿ ಕೇಂದ್ರೀಕರಣ ಗೊಳ್ಳುತ್ತದೆ. ಕೃಷಿಯ ಬಂಡವಾಳ ಶಾಹೀಕರಣಗೊಳ್ಳುತ್ತದೆ."

ಜಿ.ವಿ.ಶ್ರೀರಾಮರೆಡ್ಡಿ,
ಶಾಸಕರು, ಸಿಪಿಐ(ಎಂ)

★

ರೈತರ ಹಿತಕ್ಕೂ ತಿದ್ದುಪಡಿಗೂ ಸಂಬಂಧವಿಲ್ಲ

"ಈ ಎಪಿಎಂಸಿ ಕಾಯ್ದೆ ತಿದ್ದುಪಡಿಯನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಇದು ಕೇವಲ ರೈತರ ಪ್ರಶ್ನೆಯಲ್ಲ. ಅದಲ್ಲದೇ ರೈತರ ಅನುಕೂಲಕ್ಕೂ ಇದಕ್ಕೂ ಏನು ಸಂಬಂಧವಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಈ ತಿದ್ದುಪಡಿ ಮಾಡಿ ಕೊಡಲಾಗಿದೆ. ಖಾಸಗಿಯವರಿಗೆ ಅವಕಾಶ ಎಂದರೆ ಯಾರು? ಖಾಸಗಿ ಬಹುರಾಷ್ಟ್ರೀಯ ಕಂಪನಿಗಳು ಬಂದು ರೈತರನ್ನು ಶೋಷಿಸುವಾಗ ಅದನ್ನು ಯಾರು ಕೇಳುವವರು? ಸರ್ಕಾರ ಅಲ್ಲಿರುವುದಿಲ್ಲ. ಮಿಲ್ಲಿಂಗ್ ಗ್ರೈಂಡಿಂಗ್ ಹೀಗೆ ಸಂಸ್ಕರಣೆಯ ವಿವಿಧ ವಿಭಾಗಗಳಲ್ಲಿ ಲಕ್ಷಾಂತರ ಜನರು ಎಪಿಎಂಸಿಗಳನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ತಿದ್ದುಪಡಿಯಿಂದ ಉದ್ಯೋಗಗಳು ನಾಶವಾಗುತ್ತವೆ.

ಅಗತ್ಯ ಬಂದರೆ ಎಪಿಎಂಸಿ ಗಳ ಅನಿರ್ದಿಷ್ಟ ಮುಷ್ಕರಕ್ಕೂ ನಾವು ಕರೆ ನೀಡಲಿದ್ದೇವೆ".

ರಮೇಶ್‌ಚಂದ್ರ ಲಹೋಟಿ, ಅಧ್ಯಕ್ಷರು,
ಆಂತರಿಕ ವಾಣಿಜ್ಯ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ (ಎಫ್‌ಕೆಸಿಸಿಐ)

→

ಎಪಿಎಂಸಿ ಕಾಯ್ದೆ ತಿದ್ದುಪಡಿ....

ಪುಟ 5 ರಿಂದ

ಯಾರೆಂದೂ ನಿರ್ಧರಿಸುವ ವಿಧಾನ ಮತ್ತು ಅಧಿಕಾರ ಈ ಎಲ್ಲ ಪ್ರಶ್ನೆಗಳಲ್ಲಿ ದೊಡ್ಡ ಬದಲಾವಣೆಗಳನ್ನು ತರಲಾಗಿದೆ.

ಡಿ.ಸಿ. ತೀರ್ಮಾನ ಮಾಡಿದವನೇ ರೈತ

ಹಿಂದೆ ಎಪಿಎಂಸಿ ಗಳಿಗೆ ನಾಮಕರಣ ಮಾಡುವ ವ್ಯಕ್ತಿಗಳು ರೈತರಾಗಿರಬೇಕಿತ್ತು. ಈಗ ಅವರು ರೈತರೇ ಆಗಿರಬೇಕೆಂದೇನಿಲ್ಲ. ಯಾರಾದರೂ ಆಗಬಹುದು. ಅಸಲಿಗೆ ಈಗ ರೈತ ಎಂದರೆ ಯಾರು ಎಂಬುದನ್ನು ನಿರ್ಧರಿಸುವ ರೀತಿ ನೀತಿಯೂ ಬದಲಾಗಿದೆ. ಹಿಂದೆ ಒಬ್ಬ ವ್ಯಕ್ತಿ ರೈತನೋ ಅಲ್ಲವೋ ಎಂಬುದನ್ನು ತೀರ್ಮಾನಿಸಲು ಆತನ ಬಳಿ ಇರುವ ಜಮೀನಿನ ಪಹಣಿ, ದಾಖಲೆ ಪತ್ರ ಏನಾದರೂ ಇದ್ದರೆ ಸಾಕಿತ್ತು. ಈಗ ರೈತ ಎಂದರೆ ಯಾರೆಂದು ನಿರ್ಧರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ. ಅಂದರೆ ಡಿ.ಸಿ. ಯಾರನ್ನು ತೀರ್ಮಾನಿಸುವನೋ ಅವನೇ ರೈತ!

ಹಿಂದಿನ ಕಾಯ್ದೆಯಲ್ಲಿ ಒಟ್ಟಾರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯವಹಾರಗಳ ಸಂಬಂಧ ಯಾವುದೇ ರೈತರಿಗೆ ಅಥವಾ ಯಾರಿಗಾದರೂ ದೂರುಗಳಿದ್ದಲ್ಲಿ ಅವರು ದೂರು ಕೊಡಬಹುದಿತ್ತು. ಈಗ ಆಗಿರುವ ಬದಲಾವಣೆಯಂತೆ ಈಗ ತೊಂದರೆಯಾದವರು, ತಕರಾರು ಹೊಂದಿರುವವರು ದೂರು ನೀಡುವಂತಿಲ್ಲ. ಎಪಿಎಂಸಿ ನಿರ್ದೇಶಕರು ಮಾತ್ರವೇ ದೂರು ನೀಡಬಹುದು, ಅವರಿಗೆ ದೂರು ನೀಡುವ ಮನಸ್ಸು ಬಂದರೆ...'

ಏನೇ ಆಗಲಿ ಖಾಸಗಿ ಕಂಪನಿಗಳಿಗೆ ಏನು ಬೇಕೋ ಆ ಅನುಕೂಲ ಮಾಡಿಕೊಡಲು ನಮ್ಮ ಸರ್ಕಾರ ನಿರ್ಧಾರ ಮಾಡಲಿಟ್ಟಿದೆ. ಈ ಉದ್ದೇಶಕ್ಕೆ ಪೂರಕವಾಗಿ ಅವರು ಏನೆಲ್ಲಾ ಕೇಳುತ್ತಾರೋ ಅದನ್ನೆಲ್ಲಾ ಸರ್ಕಾರ ಮಾಡಿದೆ. ಡಿ.ಕೆ.ಶಿವಕುಮಾರ್ ಅಂಥವರು ತಿದ್ದುಪಡಿ ಅಂಗೀಕಾರ ಇಂದೇ ಆಗಲಿ ಎಂದು ತುದಿಗಾಲಲ್ಲಿ ನಿಲ್ಲುತ್ತಾರೆಂದರೆ ಇದೇನು ಕಡಿಮೆ ಲಾಭಿಯೇ ಯೋಚಿಸಿ.

ಹಲವಾರು ದಶಕಗಳಿಂದ ರಾಜ್ಯದಲ್ಲಿ ಜನರು ಕೊಟ್ಟ ತೆರಿಗೆ ಹಣದಲ್ಲಿ ಸಾವಿರಾರು ಕೋಟಿ ರೂಪಾಯಿ ಹಣವನ್ನು ತೊಡಗಿಸಿ ರಾಜ್ಯದಲ್ಲಿ ನೂರಾರು ಎಪಿಎಂಸಿ ಮಾರುಕಟ್ಟೆಗಳನ್ನು ಕಟ್ಟಿ ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಈಗ ಇದೇ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಎಪಿಎಂಸಿಗಳಿಗೆ ಸೆಡ್ಡು ಹೊಡೆಯಲು ಖಾಸಗಿ ಕಂಪನಿಗಳು ಇದರ ಪಕ್ಕದಲ್ಲಿ ಮಾರುಕಟ್ಟೆ ತೆರೆಯಲು ಅವಕಾಶ ಮಾಡಿಕೊಡಲಾಗಿದೆ. ಎಂತಹ ಅನೀತಿಯುತ ಪೈಪೋಟಿಗೂ ಹೇಸದ ಖಾಸಗಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಎಪಿಎಂಸಿಗಳು ಸ್ಪರ್ಧಿಸಿ ಉಳಿಯವವೇ?

ಯಾಕೆ ಈ ಬದಲಾವಣೆ? ನಮ್ಮ ಸರ್ಕಾರ ಕೊಡುತ್ತಿರುವ ಕಾರಣ ಏನೆಂದರೆ ಕೃಷಿ ಬೆಳವಣಿಗೆ ದರ ಕಡಿಮೆ ಇದೆ. ಅದು ಹೆಚ್ಚಾಗುತ್ತಿಲ್ಲ. ಕೃಷಿ ಬಿಕ್ಕಟ್ಟಿನಲ್ಲಿದೆ. ಅಲ್ಲದೆ ಬೆಳೆಗೆ ಬೆಲೆ ಸಿಗುತ್ತಿಲ್ಲ.

ಇದು ಯಾಕೆ ಹಾಗಿದೆಯೆಂದರೆ ನಮ್ಮ ಕೃಷಿ ಇನ್ನೂ ಸಾಂಪ್ರದಾಯಿಕ ರೀತಿಯಲ್ಲೇ ಇದೆ. ಈ ಪದ್ಧತಿಯಲ್ಲಿ ಬಂಡವಾಳ ಹೂಡಿಕೆಗೆ ಅವಕಾಶ ಇಲ್ಲ. ಅಲ್ಲಿ ಬಂಡವಾಳ ಹೂಡಿಕೆ ಬಂದರೆ ಮಾತ್ರ ಕೃಷಿ ಬೆಳವಣಿಗೆ ದರ ವೃದ್ಧಿಯಾಗುತ್ತದೆ. ಆ ಮೂಲಕ ಕೃಷಿ ಬಿಕ್ಕಟ್ಟು ನಿವಾರಣೆ ಮಾಡಲಾಗುವುದು. ಹೀಗಾಗಿ ತಿದ್ದುಪಡಿ ಅಗತ್ಯ ಎನ್ನುತ್ತದೆ ಸರ್ಕಾರ.

ಆದರೆ ಈಗ ಉಂಟಾಗಿರುವ ಕೃಷಿ ಬಿಕ್ಕಟ್ಟಿನ ಕಾರಣ ಬೇರೆಯೇ ಇದೆ. ಸರ್ಕಾರ ಆ ಬಗ್ಗೆ ಅಪ್ಪಿ ತಪ್ಪಿಯೂ ತುಟಿ ಬಿಚ್ಚುವುದಿಲ್ಲ.

ನಮ್ಮ ದೇಶದಲ್ಲಿ ಶೇ.64 ರಷ್ಟು ಜನರು ವ್ಯವಸಾಯ ರಂಗದ ಮೇಲೆ ಅವಲಂಬಿಸಿದ್ದಾರೆ. ಕೇಂದ್ರ ಸರ್ಕಾರಗಳು ಕೃಷಿ ರಂಗದಲ್ಲಿನ ಸಾರ್ವಜನಿಕ ಹೂಡಿಕೆಯನ್ನು ಅಂದರೆ ಸರ್ಕಾರಿ ಕೃಷಿ ಕ್ಷೇತ್ರದಲ್ಲಿ ಹಣ ತೊಡಗಿಸುವುದನ್ನು ನಿರಂತರವಾಗಿ ಕಡಿತ ಮಾಡುತ್ತಾ ಬರುತ್ತಿವೆ. ಉದಾರೀಕರಣ ನೀತಿಗಳಿಂದಾಗಿ ನಮ್ಮ ಕೃಷಿ ಹೊರಗಿನ ದಾಳಿಗೆ ಗುರಿಯಾಗಿದೆ. ಆದರೆ ಸರ್ಕಾರ ಇದಕ್ಕೆ ತದ್ವಿರುದ್ಧವಾದ ವಾದ ಮಾಡುತ್ತಿದೆ.

ಈ ಎಪಿಎಂಸಿ ಕಾಯ್ದೆ ತಿದ್ದುಪಡಿ ಬರುತ್ತಿರುವುದಕ್ಕೆ ಮೂಲ ಕಾರಣ, ಭಾರತದ ಕೃಷಿಯನ್ನು, ಕಾರ್ಪೋರೇಟ್ ಕೃಷಿಯಾಗಿ ಅಂದರೆ ಕಂಪನಿ ಕೃಷಿಯನ್ನಾಗಿ ಬೆಳೆಸಬೇಕೆಂಬ ಉದ್ದೇಶ. ಅದಕ್ಕಾಗಿ ದೇಶೀಯ ವಿದೇಶೀಯ ಕಂಪನಿಗಳು ಬಂಡವಾಳ ತೊಡಗಿಸಿ ಕೃಷಿ ಮಾಡಿ, ಕೃಷಿ ಮಾರುಕಟ್ಟೆಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಪೂರಕ ಅನುಕೂಲ ಕಲ್ಪಿಸಲು ಸರ್ಕಾರಗಳು ನಿರ್ಧರಿಸಿ ಬಿಟ್ಟಿವೆ.

ನಮ್ಮ ಕೃಷಿಯನ್ನು ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆಯೊಂದಿಗೆ ಜೋಡಿಸುವುದು. ಕೃಷಿಯಲ್ಲಿ ಬಂಡವಾಳಶಾಹಿಯನ್ನು ಈ ಎಲ್ಲ ಬದಲಾವಣೆಗಳ ಮೂಲ ಉದ್ದೇಶವಾಗಿದೆ.

ಎಪಿಎಂಸಿ ಕಾಯ್ದೆ ತಿದ್ದುಪಡಿ ಮಾತ್ರವಲ್ಲ ಬೀಜ ಕಾಯ್ದೆ ತಿದ್ದುಪಡಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ಕಾಯ್ದೆ ತಿದ್ದುಪಡಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ಕಾಯ್ದೆ ತಿದ್ದುಪಡಿಗಳು ಎಲ್ಲವನ್ನೂ ಸರ್ಕಾರ ತರಲು ಹೊರಟಿರುವುದರ ಹಿಂದೆ ನಮ್ಮ ಕೃಷಿ, ಕೈಗಾರಿಕಾ, ವ್ಯಾಪಾರ, ವಾಣಿಜ್ಯ, ಸೇವಾ ವಲಯ ಇಡೀ ಆರ್ಥಿಕತೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ವಿದೇಶಿ ಶಕ್ತಿಗಳ ಹುನ್ನಾರಗಳಿವೆ ಒತ್ತಡಗಳಿವೆ.

ಇಂತಹ ದೇಶ ವಿರೋಧಿ ನೀತಿಯನ್ನು ದೇಶದ ಮೇಲೆ ಹೇರಿ 'ಭಾರತ ಪ್ರಕಾಶಿಸುತ್ತಿದೆ' ಎಂದು ಕುಣಿದಾಡಿದ ಎನ್.ಡಿ.ಎ. ಕೂಟಕ್ಕೆ 2004ರ ಮಹಾ ಚುನಾವಣೆಯಲ್ಲಿ ಜನತೆ ಕೊಟ್ಟ ಗೂಸಾ ಪರಿಣಾಮ ಹೇಗಿದೆ ಎಂದರೆ ಎನ್.ಡಿ.ಎ. ಕೂಟ ಇನ್ನು ಚೇತರಿಸಿಕೊಂಡಿಲ್ಲ. ಆದರೆ ಯುಪಿಎ ಎಂಬ ಕೂಟ ಅದನ್ನು ನಡೆಸುವ ಕಾಂಗ್ರೆಸ್ ಯಾವ ಪಾಠವನ್ನು ಕಲಿತಿಲ್ಲ. ಅದೇ ತಿರಸ್ಕೃತ ನೀತಿಗಳನ್ನೇ ಹೇರಲು ನಿಂತು ಬಿಟ್ಟಿದೆ.

ಈ ಎಪಿಎಂಸಿ ಕಾಯ್ದೆ ಪ್ರಶ್ನೆಯು ರಾಜ್ಯ ಸರ್ಕಾರಗಳ ವ್ಯಾಪ್ತಿಯಲ್ಲಿ ಬರುತ್ತಿದ್ದರೂ ಕೇಂದ್ರ ಸರ್ಕಾರ ಇಂತಹದ್ದೊಂದು ತಿದ್ದುಪಡಿಯನ್ನು ತರಲೇಬೇಕು ಎಂದು ಇಲ್ಲವಾದಲ್ಲಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡಬೇಕಾದ ಅನುದಾನಗಳನ್ನು ನೀಡುವುದಿಲ್ಲ ಎಂದು ಭಂಡತನ ಮಾಡುತ್ತಿದೆ. ರಾಜ್ಯ ಸರ್ಕಾರಗಳ ಕೈ ತಿರುಚಲು ನಿಂತಿದೆ.

ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿ ಸಿಪಿಐ(ಎಂ) ಸಿಪಿಐಗಳ ನೇತೃತ್ವದ ಎಡ ಸರ್ಕಾರಗಳು ಇಂತಹ ಕೈ ತಿರುಚುವ ನೀತಿಯನ್ನು ಸ್ಪಷ್ಟವಾಗಿ ವಿರೋಧಿಸಿವೆ ಮತ್ತು ಇಂತಹ ತಿದ್ದುಪಡಿ ತರಲು ಸ್ಪಷ್ಟವಾಗಿ ನಿರಾಕರಿಸಿದೆ.

ನಮ್ಮ ರಾಜ್ಯ ಸರ್ಕಾರಕ್ಕೆ ಅಂತಹ ದಿಟ್ಟತನವೂ ಇಲ್ಲ ಅಂತಹ ಮನಸ್ಸು ಇಲ್ಲ. ಅಧಿಕಾರ ರೂಢ ಬಿಜೆಪಿ, ಜೆಡಿ(ಎಸ್) ಪಕ್ಷಗಳು, ಪ್ರಮುಖ ವಿರೋಧಿ ಪಕ್ಷವಾದ ಕಾಂಗ್ರೆಸ್ ವಿಧಾನ ಸಭೆಯಲ್ಲಿ ನಡೆದುಕೊಂಡ ರೀತಿಯಲ್ಲೇ ಅವುಗಳ ನಿಜವಾದ ಬಣ್ಣ ಏನೆಂದು ಬಯಲಾಗಿ ಹೋಗಿದೆ. ○

★

ಹಮಾಲಿಗಳು ಬೀದಿ ಪಾಲಾಗುತ್ತಾರೆ

"ಎಪಿಎಂಸಿ ಕಾಯ್ದೆ ತಿದ್ದುಪಡಿ ರೈತ ವಿರೋಧಿಯಾಗಿದೆ. ಇದರಿಂದ ಹಾಲಿ ಇರುವ ಎಪಿಎಂಸಿಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳಲಿವೆ. ಇದಲ್ಲದೇ ಈ ಎಪಿಎಂಪಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಸುಮಾರು 50,000 ಹಮಾಲಿಗಳ ಉದ್ಯೋಗಕ್ಕೆ ಸಂಚಕಾರ ಬರುತ್ತದೆ. ಖಾಸಗಿ ಸಂಸ್ಥೆಗಳು ತೀವ್ರ ಯಾಂತ್ರೀಕೃತ ವಿಧಾನದಲ್ಲಿ ಕೆಲಸ ಮಾಡುವುದರಿಂದ ಹಮಾಲಿಗಳು ಬೀದಿ ಪಾಲಾಗುತ್ತಾರೆ.

ಆಗಸ್ಟ್ 8 ರಂದು ಹಮಾಲಿಗಳ ಫೆಡರೇಷನ್‌ನಿಂದ ರಾಜ್ಯ ವ್ಯಾಪಿ ಪ್ರತಿಭಟನೆ ಮಾಡಲು ನಿರ್ಧರಿಸಿದ್ದೇವೆ"

ಎಸ್.ಪ್ರಸನ್ನಕುಮಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್

★

ರೈತರಿಗೆ ಮರಣ ಶಾಸನ

"ಈ ತಿದ್ದುಪಡಿ ರೈತರಿಗೆ ಮರಣ ಶಾಸನ. ರಾಜ್ಯದ ಸಣ್ಣಪುಟ್ಟ ವ್ಯಾಪಾರಸ್ಥರನ್ನು ದಿವಾಳಿ ಎಬ್ಬಿಸುವ ಕಾಯ್ದೆ ಇದು. ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮೃಷ್ಟಾನ್ನ ಬಡಿಸುವ ಕಾಯ್ದೆ ಇದು.

ಪ್ರಾಂತ ರೈತ ಸಂಘ ರಾಜ್ಯ ವ್ಯಾಪಿ ಪ್ರತಿಭಟನೆ ನಡೆಸುತ್ತಿದೆ. ಗುಲ್ಬರ್ಗಾದಲ್ಲಿ 23 ರಂದು ಪ್ರತಿಭಟನೆ ನಡೆಯಲಿದೆ".

ಮಾರುತಿ ಮಾನ್ಪಡೆ
ಅಧ್ಯಕ್ಷರು,
ಕರ್ನಾಟಕ ಪ್ರಾಂತ ರೈತ ಸಂಘ

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಹೊಂದಿಸಿ ಬರೆಯಿರಿ.....!

ಆರ್.ಕೆ.

ಆರೆಸ್ಸೆಸ್ ಎಂದರೆ ಸಾವಿರಾರು ವರ್ಷಗಳ ಭವ್ಯ ಇತಿಹಾಸವನ್ನು ಪರಂಪರೆಯನ್ನು ಹೊಂದಿರುವ ಭರತ ಖಂಡದ ಪುನರುತ್ಥಾನಕ್ಕಾಗಿ, ರಾಷ್ಟ್ರದ ಪ್ರವರ್ಧಮಾನಕ್ಕಾಗಿ, ಅಭ್ಯುದಯಕ್ಕಾಗಿ, ರಾಷ್ಟ್ರದ ಭವಿಷ್ಯವನ್ನು ಉಜ್ವಲಗೊಳಿಸುವುದಕ್ಕಾಗಿಯೇ ಹಗಲಿರುಳು ಶ್ರಮಿಸುತ್ತಿರುವ ಹಾಗೂ ಸರ್ವವನ್ನು ರಾಷ್ಟ್ರಕ್ಕಾಗಿ ಸಮರ್ಪಿಸುವ ಸಮರ್ಪಣಾ ಮನೋಭಾವದ ಸ್ವಯಂ ಸೇವಕರ ಪಡೆ ಎಂಬುದು ದೇಶಕ್ಕೆಲ್ಲಾ ಗೊತ್ತಿರುವ ಸಂಗತಿ.

ಹಿಂದೂ ರಾಷ್ಟ್ರ ನಿರ್ಮಾಣದ ತನ್ನ ಗುರಿಗೆ ಪೂರಕವಾಗಿ ಆರೆಸ್ಸೆಸ್ ಮತ್ತು ಸಂಘಪರಿವಾರ ರೂಪಿಸಿದ ಯೋಜನೆಗಳು, ಅವುಗಳನ್ನು ಜಾರಿಗೊಳಿಸಿದ ವಿಧಾನ ಈ ಮಾರ್ಗದಲ್ಲಿ ಮೂಡಿಸಿರುವ ಸಾಧನೆಗಳ ಹೆಜ್ಜೆಗುರುತುಗಳು ಎಲ್ಲವೂ ಭಾರತೀಯರ ಜನಮಾನಸದಲ್ಲಿ ಬಹುಕಾಲ ಉಳಿಯುವಂಥವು. ಅಂತಹ ಸಾಧನೆಗಳ ಕೆಲವು ತುಣುಕುಗಳನ್ನು ನಿಮಗೆ ಪರಿಚಯಿಸುವ-ನೆನಪಿಸುವ ಉದ್ದೇಶ ನಮ್ಮದು.

ಈ ಕಿರು ಪರೀಕ್ಷೆ ತೆಗೆದುಕೊಳ್ಳಿ. ಈ ಕೆಳಕಂಡ ಪ್ರಕರಣಗಳು ಸಂಘಪರಿವಾರದ - ಬಿಜೆಪಿಯ ಯಾವ ನಾಯಕರನ್ನು ನೆನಪಿಗೆ ತರುತ್ತವೆ. ಯೋಚಿಸಿ.

ಹೊಂದಿಸಿ ಬರೆಯಿರಿ

1. ಹವಾಲ ಹಗರಣ-	ಅನಂತಕುಮಾರ್
2. ತೆಹಲ್ಕಾ ಹಗರಣ-	ಬಿಜೆಪಿಯ 6 ಜನ ಸಂಸದರು
3. ಹುಡ್ಕೋ ಹಗರಣ-	ಬಂಗಾರು ಲಕ್ಷ್ಮಣ್
4. 'ಸಂಸತ್'ನಲ್ಲಿ ಪ್ರಶ್ನೆ ಕೇಳಲು ಲಂಚ, ಹಗರಣ	ಲಾಲ್ ಕೃಷ್ಣ ಅಡ್ವಾನಿ
5. ಸಂಸತ್ ಸದಸ್ಯರ ನಿಧಿ ಹಂಚಲು - ಲಂಚ ಕೇಳಿದ ಪ್ರಕರಣ	ಅರುಣ್ ಶೌರಿ
6. ಮುಂಬೈ ಸೆಂಟಾರ್ ಹೋಟೆಲ್ ಹಗರಣ-	ಬಿಜೆಪಿಯ 3 ಸಂಸದರು

ಈ ಮೇಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಪ್ರಸಿದ್ಧರ ಪ್ರಸಿದ್ಧ ಹೇಳಿಕೆಗಳನ್ನು ಇಲ್ಲಿ ನೀಡಲಾಗಿದೆ. ಅವುಗಳ ಸಂದರ್ಭ ವಿವರಿಸಿ.

ಘನ ಹೇಳಿಕೆ 1

"ಹೌದು, ಪಕ್ಷಕ್ಕಾಗಿ ಹಣ ತೆಗೆದುಕೊಂಡಿರುವುದು ನಿಜ"

ಇದು ಯಾವ ಪ್ರಕರಣಕ್ಕೆ ಸಂಬಂಧಿಸಿದ ಹೇಳಿಕೆ.

ಸುಳಿವು 1 : ಈ ಹೇಳಿಕೆ ಕೊಟ್ಟ ಪಕ್ಷದ ಅಂದಿನ ವಕ್ತಾರರು ಪ್ರತಿವರ್ಷ ನಮ್ಮ ರಾಜ್ಯಕ್ಕೆ ವರಮಹಾಲಕ್ಷ್ಮಿ ಹಬ್ಬಕ್ಕೆ ಅತಿಥಿಯಾಗಿ ಬರುತ್ತಾರೆ.

ಸುಳಿವು 2 : ಈ ಪ್ರಕರಣದ ಆರೋಪಿ ಕ್ಷಮಿಸಿ ಕೇಂದ್ರ ಪಾತ್ರಧಾರಿಯು ಉಕ್ಕಿನ ಮನುಷ್ಯ ಎಂದು ಹೆಸರು ಗಳಿಸಿದ್ದಾರೆ.

ಸುಳಿವು 3 : ಸೂಕ್ತ ಸಾಕ್ಷ್ಯಾಧಾರ ಇಲ್ಲವೆಂದು ಈ ಪ್ರಕರಣವನ್ನು ನ್ಯಾಯಾಲಯ ರದ್ದು ಮಾಡಿತು.

ಸುಳಿವು 4 : ಈ ಪ್ರಕರಣದಲ್ಲಿ ಹಣಕೊಟ್ಟ ದಾನಿಗಳನ್ನು ಅವರು ದೇಶಪ್ರೇಮಿಗಳ ಪಕ್ಷಕ್ಕೆ ಸಾಕಷ್ಟು ಹಣ ಕೊಟ್ಟಿದ್ದರೂ ಸಹ ಎಲ್ಲಾ ಮಾಧ್ಯಮಗಳಲ್ಲೂ ದೇಶದ್ರೋಹಿಗಳೆಂದು ಕರೆದಿದ್ದದ್ದು ಮಾತ್ರ ವಿಷಾದನೀಯ.

ಘನ ಹೇಳಿಕೆ 2

"ಡಾಲರ್ ಆಗಬಹುದು. ಡಾಲರ್‌ನಲ್ಲಿ ಕೊಡಿ"

ಇದನ್ನು ಹೇಳಿದ್ದು ಯಾರು? ಯಾವ ಪ್ರಕರಣಕ್ಕೆ ಸಂಬಂಧಿಸಿದ್ದು ಇದು

ಸುಳಿವು 1 : ಇತರ ನಾಯಕರಂತೆ ಜಾಣತನ ತೋರದೆ ಕ್ಯಾಮರಾಕ್ಕೆ ಸೆರೆಸಿಕ್ಕಿಬಿಟ್ಟ ಇವರನ್ನು ದೇಶಪ್ರೇಮಿ ಪಕ್ಷ ಸಂಪೂರ್ಣ ಮೂಲೆಗುಂಪು ಮಾಡಿದೆ ಎಂದು ಅಸಮಾಧಾನಗಳು ವ್ಯಕ್ತವಾಗಿವೆ.

ಸುಳಿವು 2 : ದೇಶದ ರಕ್ಷಣಾ ಇಲಾಖೆಯಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಬಯಲಿಗೆಳೆದ ಒಂದು ಸಂಸ್ಥೆಯ ಹೆಸರಿನಿಂದಲೇ ಈ ಭ್ರಷ್ಟಾಚಾರದ ಪ್ರಕರಣ ಹೆಸರಾಗಿದೆ.

ಸುಳಿವು 3 : ದೇಶದ ರಕ್ಷಣಾ ವ್ಯವಸ್ಥೆಯ ಹುಳುಕನ್ನು ಅನಾವಶ್ಯಕವಾಗಿ ಹೊರಗೆಳೆದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಘನತೆಗೆ ಮಸಿ ಬಳಿದ ಈ ಸಂಸ್ಥೆಯನ್ನು ಅಂದಿನ ದೇಶಪ್ರೇಮಿ ಸರ್ಕಾರವೇನೂ ಸುಮ್ಮನೆ ಬಿಡಲಿಲ್ಲ. ಆದಾಯ ತೆರಿಗೆ ದಾಳಿ ಸೇರಿದಂತೆ, ಎಲ್ಲಾ ತೆರನಾದ ಧಾಳಿ ನಡೆಸಿ ಮುಖ್ಯಸ್ಥರನ್ನು ಜೈಲಿಗಟ್ಟಿ ದೇಶಕ್ಕಾದ ಅಪಮಾನವನ್ನು ತೊಳೆಯಲು ಶಕ್ತಿಮೀರಿ ಶ್ರಮಿಸಿತು.

ಘನ ಹೇಳಿಕೆ 3

"ಈ ಬಗೆಯ ಶಿಸ್ತು ಕ್ರಮ ಅತಿರೇಕದ್ದಾಯಿತು. ನಮ್ಮ ಪಕ್ಷ ಇದನ್ನು ಪ್ರತಿಭಟಿಸುತ್ತದೆ"

ಸುಳಿವು 1 : ಕೆಲವು ಪಕ್ಷಗಳು ಈ ಪ್ರಕರಣದಲ್ಲಿ ಭಾಗಿಯಾದ ತಮ್ಮ ಸದಸ್ಯರನ್ನು ಉಚ್ಚಾಟಿಸಿ ಆತುರ, ಅಪ್ರಬುದ್ಧತೆ ಮೆರೆದರೆ ದೇಶಪ್ರೇಮಿ ಪಕ್ಷ ಮಾತ್ರ ಕೊನೆಯವರೆಗೆ ಪಕ್ಷದ ಕಟ್ಟಾಳುಗಳನ್ನು ರಕ್ಷಿಸಲು ಯತ್ನಿಸಿತು.

ಸುಳಿವು 2 : ಈ ಪ್ರಕರಣ ಹೊರಬಂದ ಮೇಲೆ, ಹಿಂದೂರಾಷ್ಟ್ರ ನಿರ್ಮಾಣ ಕಾರ್ಯವೆಷ್ಟು ಕಠಿಣ. ಅದಕ್ಕಾಗಿ ದುಡಿಯುವವರು ಅದಕ್ಕೆಲ್ಲಾ ಯಾವ ಯಾವುದೆಲ್ಲಾ ರೀತಿಯಲ್ಲಿ ನಿಧಿ ಸಂಗ್ರಹ ಮಾಡಿಕೊಳ್ಳಬೇಕಾಗಿ ಬಂದಿದೆ ಎಂದು ದೇಶಕ್ಕೆ ದೇಶವೇ ಅಚ್ಚರಿಪಟ್ಟಿತು. ○


ಬಿತ್ತನೆ ಬೀಜ ಮತ್ತು ಬೆಳೆ ಸಾಲಕ್ಕಾಗಿ ಪ್ರತಿಭಟನೆ

ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪೂರೈಕೆ ಮತ್ತು ಬೆಳೆಸಾಲ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ನೇತೃತ್ವದಲ್ಲಿ ಮಾಗಡಿ ತಾಲ್ಲೂಕು ಕಛೇರಿ ಮುಂದೆ ಪ್ರಥಮ ಪ್ರತಿಭಟನೆ ದಿನಾಂಕ 12.7.2007ರಂದು ನಡೆಯಿತು.

ರೈತರ ಸಮಸ್ಯೆಗಳ ವಿರುದ್ಧ ಹೋರಾಡುತ್ತಾ ಬೃಹತ್ತಾಗಿ ಬೆಳೆದಿರುವ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಸದಸ್ಯತ್ವ ನೋಂದಣಿ ಮತ್ತು ಮಾಗಡಿಯಲ್ಲಿ ನಡೆದ ಪ್ರತಿಭಟನೆ ಸ್ಫೂರ್ತಿದಾಯಕವಾಗಿತ್ತು.

ಸಂಯುಕ್ತವಾಗಿ ನಡೆಸಲಾದ ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ನ ವೆಂಕಟಾಚಲಯ್ಯ, ಚಂದ್ರತೇಜಸ್ವಿ, ಜನವಾದಿ ಮಹಿಳಾ ಸಂಘಟನೆಯ ಯಶೋಧ, ಜಿ.ವಿ.ಕ. ಸಂಘಟನೆಯ ಗಂಗಹನುಮಯ್ಯ, ವಿನುತ ಅರುಣೋದಯ ಸಂಘದ ಕೆಂಪಲಕ್ಷ್ಮಮ್ಮ ದಕ್ಷಿಣ ತಾಲ್ಲೂಕಿನ ರೈತ ಮುಖಂಡ ಮಹೇಂದ್ರ ಮಾತನಾಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆ ಮತ್ತು ಬೆಳೆಸಾಲಕ್ಕೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದರು. ಸವಲತ್ತು ಸಿಗದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಮಾಗಡಿಯ ತಹಶೀಲ್ದಾರ್



ಆರ್.ವಿ.ಶೈಲಜ ಅವರಿಗೆ ಮನವಿ ಅರ್ಪಿಸಲಾಯಿತು. ಧರಣಿಯಲ್ಲಿ ನೂರಾರು ರೈತ ಮಹಿಳೆಯರು ರೈತರು ಭಾಗವಹಿಸಿದ್ದರು.

○ವನಜಾ

ಉದ್ಯೋಗಖಾತ್ರಿ ಯೋಜನೆ ಕೂಲಿ ಕೊಡದ ಅಧಿಕಾರಿಗಳಿಗೆ ಛೀಮಾರಿ

ಉದ್ಯೋಗಖಾತ್ರಿ ಯೋಜನೆಯಲ್ಲಿ ಬೆವರು ಸುರಿಸಿ ದುಡಿದ ಕೂಲಿಕಾರರಿಗೆ ಕೂಲಿ ಕೊಡದೆ ವಿಳಂಬ ಮಾಡಿರುವ ಬಗ್ಗೆ ರೊಚ್ಚಿಗೆದ್ದ ಕೂಲಿಕಾರರು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ನೇತೃತ್ವದಲ್ಲಿ 2 ತಾಸು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ಅಂಬೇಡ್ಕರ್ ವೃತ್ತದ ಮುಖ್ಯ ರಸ್ತೆಯಲ್ಲಿ ರಸ್ತೆ ತಡೆ ಚಳುವಳಿ ನಡೆಸಿ ಗ್ರಾಮ ಪಂಚಾಯಿತಿ ಆಡಳಿತ ಮತ್ತು ತಾಲ್ಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ತಡೆ : ಸುಮಾರು ಎಂಟುನೂರಕ್ಕೂ ಹೆಚ್ಚು ಮಹಿಳೆಯರು 2 ನೂರಕ್ಕೂ ಹೆಚ್ಚು ಪುರುಷರು ಜಾಲಹಳ್ಳಿಯ ರಂಗನಾಥ ದೇವಸ್ಥಾನದಲ್ಲಿ ಸೇರಿದ ಮೆರವಣಿಗೆ ಮುಖಾಂತರ ಅಂಬೇಡ್ಕರ್ ವೃತ್ತದ ಮುಖ್ಯರಸ್ತೆಯಲ್ಲಿ ರಸ್ತೆ ತಡೆ ನಡೆಸಿದರು.

ಸುಮಾರು 2 ಸಾವಿರಕ್ಕೂ ಹೆಚ್ಚು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿ 2 ತಿಂಗಳು ಗತಿಸಿದರು ಕೂಲಿ ಹಣ ಕೊಟ್ಟಿಲ್ಲ. ಕೂಲಿಗಾಗಿ ಈ ಹಿಂದೆ ಗ್ರಾ.ಪಂಚಾಯತಿಗೆ ಮುತ್ತಿಗೆ ಹಾಗೂ ಧರಣಿ ಕುಳಿತು ಎರಡು ಬಾರಿ ಹೋರಾಟ ಮಾಡಿದ್ದರು ಮತ್ತು ತಾಲ್ಲೂಕು ಪಂಚಾಯತಿ ಅಧಿಕಾರಿಗಳು ಲಿಖಿತ ಪತ್ರ ಬರೆದುಕೊಟ್ಟರೂ ಪ್ರಯೋಜನ ಆಗಿದ್ದಿಲ್ಲ. ಇದರಿಂದ ಕೂಲಿಕಾರರು ರೊಚ್ಚಿಗೆದ್ದು ರಸ್ತೆಗಿಳಿದು ರಸ್ತೆ ತಡೆ ಮಾಡಬೇಕಾಗಿ ಬಂತು.

ಜಾಲಹಳ್ಳಿ ಗ್ರಾಮ ಪಂಚಾಯತಿ ಹಿಂದಿನ ವರ್ಷ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಕೆಲಸ ಮಾಡುವಲ್ಲಿ ಜಿಲ್ಲೆಯಲ್ಲಿಯೇ ಮೊದಲಿತ್ತು. ಆದರೆ ಈ ವರ್ಷ ಪ್ರಾರಂಭವಾಗಿ 5 ತಿಂಗಳಾದರು ಸರಿಯಾಗಿ ಕೆಲಸ ಪ್ರಾರಂಭಿಸಿಲ್ಲ. 12 ಗುಂಪುಗಳು ಕೆಲಸ ಮಾಡಿವೆ. 2 ತಿಂಗಳಿಂದ ಕೂಲಿ ಕೊಟ್ಟಿಲ್ಲ. ಇದಕ್ಕೆ ತಾಲ್ಲೂಕು ಆಡಳಿತವೇ ಕಾರಣವಾಗಿದೆ. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಬೇಜವಾಬ್ದಾರಿಯಿಂದ ಆಡಳಿತ ಯಂತ್ರ ಕುಸಿದಿದೆ, ಅಧಿಕಾರಿಗಳು, ಕಾರ್ಯದರ್ಶಿಗಳು ಜೆ.ಇ.ಗಳು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ ಕೂಲಿಕಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ.

ಚೆಕ್ ತಂದು ತೋರಿದರು

ರಸ್ತೆ ತಡೆ ಚಳುವಳಿಕಾರರಲ್ಲಿಗೆ ಪ.ಕಾರ್ಯದರ್ಶಿ ಬಂದು 6 ಲಕ್ಷ 37 ಸಾವಿರ ಚೆಕ್‌ಗಳ ತಂದು ಧರಣಿಕಾರರಿಗೆ ತೋರಿಸಿದರು. ನಿರುದ್ಯೋಗ ಭತ್ಯೆಯನ್ನು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಬರುವುದರಿಂದ ಅಧಿಕಾರಿಗಳಿಗೆ ಕೇಳಿ ಮುಂದೆ ಕೊಡುತ್ತೇವೆ ಮತ್ತು ಸೋಮವಾರದಿಂದ ಕೆಲಸ ಕೇಳಿದ ಅರ್ಜಿದಾರರಿಗೆ ಕೆಲಸ ಕೊಡುವುದಾಗಿ ಲಿಖಿತ ಪತ್ರ ಕೊಟ್ಟ ನಂತರ ರಸ್ತೆ ತಡೆ ಚಳುವಳಿ ವಾಪಸ್ ಪಡೆಯಲಾಯಿತು.

ರಸ್ತೆ ತಡೆ ನೇತೃತ್ವವನ್ನು ನರಸಣ್ಣ ನಾಯಕ, ಅಲಿಬಾಬು ಪಾಟೀಲ್, ತಿಪ್ಪಯ್ಯ ನಾಯಕ, ಸಿಂಗಪ್ಪ ಹಂಪದಗುಂದಿ, ಜಯಪ್ಪ.ಪಿ. ಬಸಪ್ಪ ತವಾಗೆ ವಹಿಸಿದ್ದರು. ಡಿವೈಎಫ್‌ಐ ಮುಖಂಡ ಚಂದ್ರಶೇಖರ, ನಾಡಗೌಡ, ಸಿಐಟಿಯು ಮುಖಂಡ ಗಿರಿಯಪ್ಪ ಪೂಜಾರಿ ಉಪಸ್ಥಿತರಿದ್ದರು.

ಗಿರಿಯಪ್ಪ ಜಾಲಹಳ್ಳಿ

ಸಿಐಟಿಯು ಯಶಸ್ವಿ ಶಿಬಿರ

ನಮ್ಮ ಸಮಾಜ ಬದಲಾವಣೆ ಹೋರಾಟ ಗಳಲ್ಲಿ ಕಾರ್ಮಿಕ ವರ್ಗದ್ದು ಮಹತ್ವದ ಪಾತ್ರ. ಜಗತ್ತಿನ ವಿವಿಧ ದೇಶಗಳ ಅನುಭವದಂತೆ ಅವರದ್ದು ಮುಂಚೂಣಿ ಪಾತ್ರ. ಈ ಐತಿಹಾಸಿಕ ಪಾತ್ರವನ್ನು ನಿರ್ವಹಿಸಲು ಕಾರ್ಮಿಕ ವರ್ಗವು ಸೈದ್ಧಾಂತಿಕವಾಗಿ ರಾಜಕೀಯವಾಗಿ ಸ್ಪಷ್ಟತೆ ಹೊಂದಿರುವುದು ಅಗತ್ಯ.

ಕಾರ್ಮಿಕ ಸಂಘಗಳು ಬರೀ ಕಾರ್ಮಿಕರ ವೇತನ, ಸಂಬಳದಂತಹ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಹೋರಾಡುತ್ತಾರೆ ಎಂದು ಸಿನಿಕರಾದ ಜನರು ಹಲವು ಬಾರಿ ಟೀಕಿಸುವುದನ್ನು ನೋಡುತ್ತೇವೆ. ಆದರೆ ಕಾರ್ಮಿಕ ವರ್ಗ ಎತ್ತುವ ಎಷ್ಟೋ ದೇಶದ ಒಟ್ಟಾರೆ ಹಿತಾಸಕ್ತಿ ಪ್ರಶ್ನೆಗಳನ್ನು ರಾಜಕೀಯ ಹೋರಾಟ ಗಳನ್ನು ಅವರು ಗಮನಿಸುವುದೇ ಇಲ್ಲ.

ಇರಲಿ. ಇಂದಿನ ಜಾಗತೀಕರಣ ಯುಗದಲ್ಲಿ ದೇಶದ ಮೇಲೆ ನಡೆಯುತ್ತಿರುವ ದಾಳಿಗಳು, ಕೋಮುವಾದ, ಜಾತಿವಾದದಂತಹ ಸಂಕೀರ್ಣ ಸಮಸ್ಯೆಗಳನ್ನು ಸಮರ್ಥವಾಗಿ ಅರ್ಥ ಮಾಡಿಕೊಳ್ಳುವುದು ಹಾಗೂ ಆ ಸವಾಲನ್ನು ಎದುರಿಸಲು ಸಜ್ಜಾಗುವುದು ಈ ದೃಷ್ಟಿಯಿಂದ ರಾಜ್ಯದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಇತ್ತೀಚೆಗೆ ರಾಯಚೂರು ಜಿಲ್ಲೆಯಲ್ಲಿ ಕಾರ್ಮಿಕರಿಗೆ ರಾಜ್ಯ ಮಟ್ಟದ ಸೈದ್ಧಾಂತಿಕ ಸಂಘಟನಾ ಶಿಬಿರವನ್ನು ನಡೆಸಿತು.

ಶಿಬಿರದ ಉದ್ಘಾಟನೆ

ಜೂನ್ 3ರ ಮಧ್ಯಾಹ್ನ ಐದು ದಿನಗಳ ರಾಜ್ಯ ಮಟ್ಟದ ಶಿಬಿರವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರಾಯಚೂರಿನ ಹಿರಿಯ ವಕೀಲರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಎಂ.ನಾಗಪ್ಪ, ಪತ್ರಕರ್ತ ಸತ್ಯನಾರಾಯಣ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿ ಪಾಲ್ಗೊಂಡಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಬಿ.ಮಾಧವ ವಹಿಸಿದ್ದರು.

ಐದು ದಿನಗಳ ಈ ಶಿಬಿರದಲ್ಲಿ 'ಕಾರ್ಮಿಕ ಚಳುವಳಿಯ ಇತಿಹಾಸ ಕುರಿತು ಕಾಂ.ಬಿ.ಮಾಧವ, ಕಾರ್ಮಿಕ ವರ್ಗದ ತತ್ವ ಕುರಿತು ಕಾಂ.ವಿ.ಜೆ.ಕೆ. ನಾಯರ್, ಸಾಮಾಜಿಕ ಭದ್ರತೆ ಮೇಲೆ ಜಾಗತೀಕರಣದ ದಾಳಿ ಕುರಿತು ಕಾಂ.ಡಬ್ಲ್ಯು.ಆರ್. ವರದರಾಜನ್, ವರ್ಗಸಮಾಜ ಮತ್ತು ಕೋಮುವಾದ ಮತ್ತು ಜಾತಿ ಪ್ರಶ್ನೆಗಳು ಹಾಗೂ ಕಾರ್ಮಿಕ ಐಕ್ಯತೆ ಕುರಿತು ಕಾಂ.ನಿತ್ಯಾನಂದಸ್ವಾಮಿ, ಸಂಘದ ನೋಂದಣಿ, ದಾಖಲೆ ನಿರ್ವಹಣೆ ವಾರ್ಷಿಕ ರಿಟರ್ನ್ಸ್ ಮತ್ತು ಅಫಿಲಿಯೇಷನ್ ಬಗ್ಗೆ ಕಾಂ.ಮೀನಾಕ್ಷಿ ಸುಂದರಂ ಕೂಲಿ ಪದ್ಧತಿ ಬೆಳವಣಿಗೆ, ಇನ್ಸೆಂಟಿವ್ ಕುರಿತು ಕಾಂ.ವಿ.ಜೆ.ಕೆ, ಕೈಗಾರಿಕಾ ವಿವಾದ ಕಾಯ್ದೆ ರಾಜಿ ಸಂಧಾನ ನ್ಯಾಯಾಲಯಗಳನ್ನು ಮೀನಾಕ್ಷಿ ಸುಂದರಂ, ಸಂಘಟನಾ ತತ್ವ ಮತ್ತು ಪ್ರಾಯೋಗಿಕ ಕಾರ್ಯನಿರ್ವಹಣೆ ಬಗ್ಗೆ ಕಾಂ.ಎಸ್.ವರಲಕ್ಷ್ಮಿ ಶಿಸ್ತಿನ ಕ್ರಮಗಳು ಆಂತರಿಕ ವಿಚಾರಣೆ ಕುರಿತು ಪ್ರತಾಪಸಿಂಹ, ಪ್ರಚಾರ, ಪತ್ರಿಕಾ ಹೇಳಿಕೆ, ಕರಪತ್ರ ಇತ್ಯಾದಿ ಕುರಿತು ಸೈಯದ್ ಮುಜೀಬ್ ಹಾಗೂ ಪ್ರಸಕ್ತ ರಾಜಕೀಯ ಪರಿಸ್ಥಿತಿ ಕುರಿತು ಕಾಂ.ಪ್ರಸನ್ನಕುಮಾರ ತರಗತಿಗಳನ್ನು ನಡೆಸಿದರು.

ವಿಶಿಷ್ಟ ಅನುಭವ

ಐದು ದಿನಗಳ ಈ ಶಿಬಿರದಲ್ಲಿ ರಾಜ್ಯದ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯವಾಗಿರುವ 125 ಜನ ಸಂಗಾತಿಗಳು ಭಾಗವಹಿಸಿದ್ದರು. ಶಿಬಿರಕ್ಕೆ ಆಯ್ಕೆ ಮಾಡಿದ ಸ್ಥಳ ಅತ್ಯಂತ ಉಲ್ಲಾಸ ನೀಡುವಂತದ್ದಾಗಿತ್ತು. ಇದರಿಂದಾಗಿ ಭಾಗವಹಿಸಿದ್ದ ಶಿಬಿರಾರ್ಥಿ ಗಳಿಗೆಲ್ಲರಿಗೂ ತರಗತಿಗಳಲ್ಲಿ ಸ್ಫೂರ್ತಿಯಿಂದ ಭಾಗವಹಿಸಲು ಪ್ರೇರಣೆ ನೀಡುತ್ತಿತ್ತು. ಅದರೊಂದಿಗೆ ಶಿಬಿರದಲ್ಲಿ ಪ್ರಚಾರ, ಕುರಿತು ನಡೆಸಿದ ಪ್ರಾಯೋಗಿಕ ತರಬೇತಿಯೂ ಶಿಬಿರಾರ್ಥಿಗಳಿಗೆ ಸಾಕಷ್ಟು ಅನುಭವ ನೀಡಿತು. ಮಾತ್ರವಲ್ಲ ಸಂಗಾತಿಗಳನ್ನು ಕರಪತ್ರ, ಪತ್ರಿಕಾ ಹೇಳಿಕೆ ಹಾಗೂ ಪೋಸ್ಟರ್ಸ್ ತಯಾರಿಸುವ ಬಗ್ಗೆ ತರಬೇತಿ ನೀಡಲಾಯಿತು. ಅಲ್ಲದೆ ಕಾರ್ಮಿಕ ಸಂಘಗಳಿಗೆ ಪ್ರಮುಖವಾದ ಅಂಶಗಳಾದ ಸಂಘದ ನೋಂದಣಿ, ಲೆಕ್ಕಪತ್ರ, ಆಂತರಿಕ ವಿಚಾರಣೆ ಎದುರಿಸುವುದು ಮುಂತಾದ ಅಂಶಗಳ ಬಗ್ಗೆ ಸ್ಪಷ್ಟತೆಯನ್ನು ನೀಡಿತು. ಇದು ಹೊಸದಾಗಿ ಕಾರ್ಮಿಕ ಚಳುವಳಿಗೆ ಬಂದ ಕಾರ್ಯಕರ್ತರಿಗೆ ಮಾರ್ಗದರ್ಶಿಯಾಗಿತ್ತು.

ಇದರೊಂದಿಗೆ ಸದಾ ಕಾರ್ಮಿಕರ ಬೇಕು ಬೇಡಗಳ ಬಗ್ಗೆಯೇ ತಲೆ ಕೆಡಿಸಿಕೊಳ್ಳುತ್ತಿದ್ದ ಕಾರ್ಮಿಕ ಮುಖಂಡರು ಮತ್ತು ಕಾರ್ಯಕರ್ತರಿಗೆ ಮುದ ನೀಡಿದ್ದು ಶಿಬಿರದಲ್ಲಿ ನಿತ್ಯ ಪ್ರಕಟಿಸುತ್ತಿದ್ದ 'ಗೋಡೆ ಪತ್ರಿಕೆ' ಯರಮರಸ್ ಎಕ್ಸ್‌ಪ್ರೆಸ್. ಶಿಬಿರ ನಡೆದ ಸ್ಥಳದ ಹೆಸರು 'ಯರಮರಸ್' ಎಂಬುದು. ಅದಕ್ಕಾಗಿ ಕೆಲ ಉತ್ಸಾಹಿ ಸಂಗಾತಿಗಳು ಸೇರಿ ನಿತ್ಯ ಮಧ್ಯರಾತ್ರಿವರೆಗೆ ಶ್ರಮಿಸುತ್ತಾ ಈ ಕಚಗುಳಿ ನೀಡುವ, ಶಿಬಿರದ ಬಗ್ಗೆ ಮಾಹಿತಿ, ನೀಡುವ ಪತ್ರಿಕೆ ಸಿದ್ಧಪಡಿಸುತ್ತಿದ್ದರು. ಈ ಗೋಡೆ ಪತ್ರಿಕೆಯ ಪ್ರಭಾವ ಎಷ್ಟಿತ್ತೆಂದರೆ ಪ್ರತಿಯೊಬ್ಬ ಶಿಬಿರಾರ್ಥಿ ದಿನದಲ್ಲಿ ಕನಿಷ್ಠ 4ರಿಂದ 5 ಬಾರಿ ಇದನ್ನು ತಪ್ಪದೇ ಓದುವಂತೆ ಪ್ರೇರೇಪಿಸಿತ್ತು. ಮಾತ್ರವಲ್ಲ, ತಮ್ಮ ತಮ್ಮ ಸಂಘದ ಕಛೇರಿಗಳಲ್ಲಿ ಇಂತಹದೊಂದು ಪತ್ರಿಕೆ ಹೊರಡಿಸಲು ಸ್ಫೂರ್ತಿ ನೀಡು ವಂತಿತ್ತು.

ಈ ಯರಮರಸ್ ಎಕ್ಸ್‌ಪ್ರೆಸ್‌ನ್ನು ಓದಿ ಮನಸಾರೆ ನಕ್ಕವರು ಅಖಿಲ ಭಾರತ ಮುಖಂಡರಿಂದ ಹಿಡಿದು ಸ್ವಯಂ ಸೇವಕರವರೆಗೂ ಸೇರಿದ್ದರು.

ಈ ಶಿಬಿರಕ್ಕೆ ಅತ್ಯುತ್ತಮ ಆತಿಥ್ಯ ನೀಡಿದವರು ರಾಯಚೂರಿನ ಸಂಗಾತಿಗಳು. ಒಟ್ಟಾರೆ ಐದು ದಿನಗಳ ಈ ಶಿಬಿರ ಸಂಗಾತಿಗಳಿಗೆ ಸೈದ್ಧಾಂತಿಕ, ಸಂಘಟನಾತ್ಮಕ ತಿಳುವಳಿಕೆ ನೀಡುವಲ್ಲಿ, ಸಂಗಾತಿಗಳಿಗೆ ಸ್ಫೂರ್ತಿ ನೀಡುವಲ್ಲಿ ಆ ಮೂಲಕ ಚಳುವಳಿಗೆ ಪ್ರೇರೇಪಿಸುವಲ್ಲಿ ಮಹತ್ವದ ಅಂಶ ಎನ್ನಬಹುದು.

■ ಕೆ.ಮಹಾಂತೇಶ್

ಹೋರಾಟದ ನಿರ್ಧಾರ

2008ರ ಮೇ ದಿನಾಚರಣೆಯನ್ನು ಬೃಹತ್ ಹೋರಾಟಗಳ ದಿನವನ್ನಾಗಿಸಲು ಶಿಬಿರದ ಸಂದರ್ಭದಲ್ಲಿ ನಡೆದ ಸಿಐಟಿಯು ರಾಜ್ಯಸಮಿತಿ ನಿರ್ಧರಿಸಿದೆ. ರಾಜ್ಯದಲ್ಲಿರುವ ಲಕ್ಷಾಂತರ ಅಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ಇಡೀ ವರ್ಷ ಪೂರ್ತಿ ತೀವ್ರ ಸ್ವರೂಪದ ಪ್ರಚಾರ ನಡೆಸಲು ತೀರ್ಮಾನಿಸಿದ್ದು. ಆ ಮೂಲಕ ಲಕ್ಷಾಂತರ ಅಸಂಘಟಿತ ಕಾರ್ಮಿಕರನ್ನು ಅಣಿ ನೆರೆಸಲು ಅದು ಮುಂದಾಗಿದೆ.

ಸಿಐಟಿಯು ಕೋಲ್ಕತ್ತಾ ಜನರಲ್ ಕೌನ್ಸಿಲ್ ತೆಗೆದುಕೊಂಡ ಅಸಂಘಟಿತ ಕಾರ್ಮಿಕರ ಕುರಿತು ಹೋರಾಟದ ನಿರ್ಣಯವನ್ನು ಸಿಐಟಿಯು ರಾಜ್ಯಸಮಿತಿ ಸಂಪೂರ್ಣ ಜಾರಿಗೊಳಿಸಲು ನಿರ್ಧರಿಸಿದೆ.

ಜೂನ್ 30ರಿಂದ ಜುಲೈ 4ರವರೆಗೆ ರಾಯಚೂರಿನಲ್ಲಿ ನಡೆದ ಸಿಐಟಿಯು ರಾಜ್ಯ ಮಟ್ಟದ ಅಧ್ಯಯನ ಶಿಬಿರದಲ್ಲಿ ರಾಜ್ಯಸಮಿತಿ ನಿರ್ಧರಿಸಿದ ಅಸಂಘಟಿತ ಕಾರ್ಮಿಕರ ಹೋರಾಟವನ್ನು ಯಶಸ್ವಿಗೊಳಿಸಲು ನಿರ್ಧರಿಸಿದೆ. ಅದರ ಭಾಗವಾಗಿ ಅಗಸ್ಟ್ 8ರಂದು ದೇಶವ್ಯಾಪಿಯಾಗಿ ನಡೆಯುವ ಮುಷ್ಕರವನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಲು ನಿರ್ಧರಿಸಿದೆ.

ಹ್ಹ...ಹ್ಹಾ...ಹ್ಹಾ...

ಕೆಮ್ಮು ಹೋಗುತ್ತಾ?

ಪ್ರಶ್ನೆ : ವಿಸ್ಕಿ ಕುಡಿದರೆ ಕೆಮ್ಮು ಹೋಗುತ್ತಾ?

ಉತ್ತರ : ಓಹೋ, ಮನೆ, ತೋಟ, ಹೊಲ, ಗದ್ದೆ, ಎಲ್ಲಾ ಕಿತ್ತುಕೊಂಡು ಹೋಗುವಾಗ, ಇನ್ನೂ ಕೆಮ್ಮು ಯಾವ ಲೆಕ್ಕ! ಅದೂ ಹೋಗುತ್ತೆ.

- ಸಂಗ್ರಹ

ಜಗದಗಲ

ನೆಲ - ನೆಲೆ ಕಳೆದುಕೊಳ್ಳುತಾ ನಡೆದಿರುವ ಪ್ಯಾಲೆಸ್ಟ್ಯನ್ ವ್ಯಥೆಯೂ ಸಾಮ್ರಾಜ್ಯ ವಿಸ್ತರಿಸುತ್ತಾ ನಡೆದಿರುವ ಇಸ್ರೇಲ್‌ನ ಕಥೆಯೂ

ತಮ್ಮ ತಾಯ್ನಾಡಿನಲ್ಲೇ ತಬ್ಬಲಿಗಳಾಗಿ ಇಸ್ರೇಲಿಗಳ ಆಕ್ರಮಣದ ವಿರುದ್ಧ ನಿರಂತರವಾಗಿ ಸೆಣಸಬೇಕಾಗಿ ಬಂದಿರುವ ಪಾಲಿಸ್ಟೈನಿಯರ ವ್ಯಥೆಯ ಇತಿಹಾಸದ ಕಥೆ ಇದು

ಅಮಾನುಲ್ಲಾ ಖಾನ್

ಪ್ಯಾಲಸ್ಟೈನ್‌ನಲ್ಲಿನ ಘರ್ಷಣೆ ಧಾರ್ಮಿಕ ಘರ್ಷಣೆಯಲ್ಲ. ಮುಸ್ಲಿಂ ಉಗ್ರರು ಮತ್ತು ಇಸ್ರೇಲಿಗಳ ನಡುವಿನ ತಮ್ಮ ಅಸ್ತಿತ್ವದ ಘರ್ಷಣೆ ಇದಾಗಿದೆಯೆಂದು ಉದ್ದೇಶ ಪೂರ್ವಕವಾಗಿ ಪ್ರಚಾರ ನಡೆಸಲಾಗಿದೆ. ಆದರೆ ವಾಸ್ತವವಾಗಿ ಇದು ಭೂಮಿ ಅಥವಾ ನೆಲಕ್ಕಾಗಿ ನಡೆಯುತ್ತಿರುವ ಹೋರಾಟವಾಗಿದೆ. ಬೈಬಲ್ಲಿನಲ್ಲಿ ಉಲ್ಲೇಖಿತವಾಗಿರುವಂತೆ ಅಬ್ರಾಹಂ ಮತ್ತು ಅವನ ವಂಶಜರಿಗೆ ನೀಡಿರುವ ವಚನವೇ ಯಹೂದಿಗಳು ಈ ಭೂಮಿಯ ಮೇಲೆ ಹಕ್ಕು ಚಲಾಯಿಸಲು ಆಧಾರವಾಗಿದೆ. ಮುಸಲ್ಮಾನ, ಕ್ರೈಸ್ತ ಮತ್ತು ಡ್ರ್ಯೂಜರನ್ನೊಳಗೊಂಡಿರುವ ಪ್ಯಾಲಸ್ಟೈನ್ ಅರಬ್ ಸಮೂಹ ಬೈಬಲ್‌ನ ಉಲ್ಲೇಖದ ಆಧಾರಿತವಾದ ಈ ವಾದವನ್ನು ಒಪ್ಪಿಕೊಳ್ಳುವುದಿಲ್ಲ. ಆ ನೆಲದಲ್ಲಿ ನೂರಾರು ವರ್ಷಗಳಿಂದ ಬದುಕಿದ್ದ ಆಧಾರದಿಂದ ಆ ನೆಲದ ಮೇಲಿನ ಹಕ್ಕು ನಿರ್ಧರಿತವಾಗುತ್ತದೆ ಎಂಬ ವಾದ ಅವರದು. ಈ ಪ್ಯಾಲಸ್ಟೈನ್ ಅರಬ್ ಸಮೂಹವೇ ಬಹು ಸಂಖ್ಯಾತರನ್ನು ಪ್ರತಿನಿಧಿಸುತ್ತದೆ ಎಂಬ ನಿಲುವು ಅವರದ್ದು.

ಯಹೂದಿಗಳ ವಲಸೆ

19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆದಿಯಲ್ಲಿ ಯೂರೋಪಿ ನಾದ್ಯಂತ ಯಹೂದಿಗಳ ಮೇಲೆ ದಾಳಿಗಳಾಗುತ್ತಿತ್ತು. ಹಾಗಾಗಿ ಹೆಚ್ಚಿನ ಸಂಖ್ಯೆಯ ಈ ಯಹೂದಿಗಳು ಪ್ಯಾಲಸ್ಟೈನ್‌ಗೆ ವಲಸೆ ಬಂದರು. ಸುಮಾರು 1882ರಲ್ಲಿ ಇಂತಹ ಮೊದಲ ವಲಸೆಗಾರರು ಪ್ಯಾಲಸ್ಟೈನ್‌ಗೆ ಬಂದರು. 1897 ರಲ್ಲಿ ಥಿಯೋಡರ್ ಹರ್ಜ್‌ಲ್ ವಿಶ್ವ ಯಹೂದಿ ಸಂಘ ಸ್ಥಾಪಿಸುವುದರೊಂದಿಗೆ ಈ ವಿಚಾರಕ್ಕೆ ಇನ್ನಷ್ಟು ಮಹತ್ವ ಬಂದಿತು. ಪ್ಯಾಲಸ್ಟೈನ್‌ನಲ್ಲಿ ಭರವಸೆ ಕೊಟ್ಟ ಪ್ರದೇಶಗಳಲ್ಲಿ ಯಹೂದಿಗಳಿಗೆ ನೆಲ ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿತ್ತು. ಜಗತ್ತಿನ ಬೇರೆ ಬೇರೆ ಜಾಗಗಳಲ್ಲಿ ಸ್ಥಳವನ್ನಾಕ್ರಮಿಸಿಕೊಳ್ಳುವ ಯುರೋಪಿನ ವಸಾಹತು ಶಾಹಿ ಪ್ರಭಾವವು ಈ ಉದ್ದೇಶವನ್ನು ಇನ್ನಷ್ಟು ಗಟ್ಟಿಗೊಳಿಸಿತು. ಆಗ ಪ್ಯಾಲಸ್ಟೈನ್ ಒಟ್ಟೊಮನ್ ಸಾಮ್ರಾಜ್ಯದ ಅಂಗವಾಗಿತ್ತು. 1878ರಲ್ಲಿ ಪ್ಯಾಲೆಸ್ಟೈನ್‌ನ ಮುಸ್ಲಿಮರ ಸಂಖ್ಯೆ 4,03,795 ಇದ್ದರೆ ಕ್ರೈಸ್ತ ಮತ್ತು ಯಹೂದಿಗಳ ಸಂಖ್ಯೆ ಕ್ರಮವಾಗಿ 48,659 ಮತ್ತು 15,011 ಆಗಿತ್ತು. ಇದರೊಂದಿಗೆ ಸುಮಾರು 10,000 ಯಹೂದಿ ವಲಸೆಗಾರರು ಮತ್ತು ಅಸಂಖ್ಯಾತ ಅರಬ್ ಮುಸ್ಲಿಂ ಅಲೆಮಾರಿ ಜನರಿದ್ದರು. ಅವರನ್ನು ಒಟ್ಟೊಮನ್ ಆಡಳಿತ ತನ್ನ ಪ್ರಜೆಗಳೆಂದು ಗುರುತಿಸಿರಲಿಲ್ಲ. 1914 ರಲ್ಲಿ ಮೊದಲನೇ ಮಹಾ ಯುದ್ಧದ ವೇಳೆಗೆ ಪ್ಯಾಲಸ್ಟೈನ್‌ನಲ್ಲಿ ಯಹೂದಿಗಳ ಸಂಖ್ಯೆ 60,000 ಕ್ಕೆ ಮತ್ತು ಅಬ್ಬರದ ಸಂಖ್ಯೆ ಅಡಿ 30,000ಕ್ಕೇರಿತ್ತು.

20ನೇ ಶತಮಾನದ ಆದಿಯಲ್ಲಿ ಒಟ್ಟೊಮನ್ ಸಾಮ್ರಾಜ್ಯ ದುರ್ಬಲ ವಾಗಲು, ಆರಂಭಿಸಿತು. ತನ್ನ ವ್ಯಾಪ್ತಿಯಲ್ಲಿದ್ದ ಹಲವಾರು ಪ್ರಾಂತ್ಯಗಳ ಮೇಲಿನ ಅದರ ಹಿಡಿತ ಸಡಿಲವಾಗ ಲಾರಂಭಿಸಿತು. ಈ ಪರಿಸ್ಥಿತಿಯ ಲಾಭ ಪಡೆದು ಬ್ರಿಟನ್ ಮತ್ತು ಫ್ರಾನ್ಸ್ ಪ್ಯಾಲಸ್ಟೈನ್ ಸೇರಿದಂತೆ ಪೂರ್ವ ಮೆಡಿಟರೇನಿಯನ್ ಪ್ರಾಂತ್ಯವನ್ನು ತನ್ನ ಹಿಡಿತಕ್ಕೆ ಸಾಧಿಸಿತು. ಪ್ರಥಮ ಮಹಾಯುದ್ಧ ವೇಳೆ ಒಟ್ಟಾಮನ್ ಸಾಮ್ರಾಜ್ಯ ಜರ್ಮನಿಯನ್ನು ಬೆಂಬಲಿಸಿತು. ಇದೇ ವೇಳೆಗೆ ಈಜಿಪ್ಟ್‌ನಲ್ಲಿದ್ದ ಬ್ರಿಟಿಷ್ ರಾಯಭಾರಿ ಹೆನ್ರಿ ಮೆಕಮಹನ್ ಹಾರ್ಶೈಟ್ ಕುಟುಂಬದೊಂದಿಗೆ ಗುಪ್ತ ಮಾತುಕತೆ ನಡೆಸಿ ಒಟ್ಟೊಮನ್ ಸಾಮ್ರಾಜ್ಯದ ವಿರುದ್ಧ ಅರಬ್‌ರನ್ನು ದಂಗೆಯೇಳುವಂತೆ ಪ್ರೇರೇಪಿಸಿದನು.ಇದಕ್ಕೆ ಪ್ರತಿಯಾಗಿ ಪ್ಯಾಲಸ್ಟೈನ್ ಒಳಗೊಂಡಂತೆ ಅರಬ್ ಪ್ರದೇಶದಲ್ಲಿ ಸ್ವತಂತ್ರ ಅರಬ್ ರಾಷ್ಟ್ರ ರಚನೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಲಾಗಿತ್ತು. ಈ ದಂಗೆಯಲ್ಲಿ ಒಟ್ಟಾಮನ್ ಸೇನೆಯನ್ನು ಅರಬ್ ದಂಗೆಕೋರರನು ಸಮರ್ಥವಾಗಿ ಎದುರಿಸಿದರು. ತನ್ಮೂಲಕ ಬಹುತೇಕ ಪ್ರದೇಶಗಳ ಮೇಲೆ ಬ್ರಿಟನ್ ತನ್ನ ನಿಯಂತ್ರಣಗೊಳಿಸಿತು. ಜೊತೆ ಜೊತೆಗೆ ಬ್ರಿಟಿಷರು ಯಹೂದಿಗಳೊಂದಿಗೂ ಸಂಧಾನ ನಡೆಸಿದ ಫಲವಾಗಿ 1917ರಲ್ಲಿ ಬ್ರಿಟಿಷ್ ವಿದೇಶಾಂಗ ಸಚಿವ ಲಾರ್ಡ್ ಆರ್ಥಿಕ ಬಾಲ್‌ಫೋರ್ ಪ್ಯಾಲಸ್ಟೈನ್‌ನಲ್ಲಿ ಯಹೂದಿಗಳ ನೆಲೆಯ ರಚನೆಯನ್ನು ಬೆಂಬಲಿಸಿ ಸಾರ್ವಜನಿಕ ಹೇಳಿಕೆ ನೀಡಿದರು. ಒಟ್ಟೋಮನ್ ಆಡಳಿತದಲ್ಲಿದ್ದ ಅರಬ್ ಪ್ರಾಂತ್ಯಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಅಧಿಕಾರ ಹಂಚಿಕೊಳ್ಳಲು ಬ್ರಿಟನ್ ಮತ್ತು ಫ್ರಾನ್ಸ್ ಮೌನವಾಗಿ ಸಮ್ಮತಿಸಿದವು.


ಮೊದಲ ಮಹಾಯುದ್ಧದಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ಒಟ್ಟೊಮನ್ ಚಕ್ರಾಧಿಪತ್ಯ ಮತ್ತು ಜರ್ಮನಿಯನ್ನು ಹೀನಾಯವಾಗಿ ಸೋಲಿಸಿದವು. ಲೀಗ್ ಆಫ್ ನೇಷನ್ಸ್‌ನ ಮೂಲಕ ಅವು ಅರಬ್ ಪ್ರಾಂತ್ಯಗಳು ವಸಾಹತುಗಳಾಗಿ ಆಳಲು ಅಧಿಕಾರ ಪಡೆದುಕೊಂಡವು. ಕ್ರೈಸ್ತ ಬಹುಸಂಖ್ಯಾತರಿದ್ದ ಸಿರಿಯವನ್ನು ಲೆಬನಾನ್‌ನಿಂದ ಬೇರ್ಪಡಿಸಿ ಫ್ರಾನ್ಸ್ ತನ್ನ ಅಧಿಪತ್ಯ ಸಾಧಿಸಿದರೆ ಇಸ್ರೇಲ್, ಪಶ್ಚಿಮ ದಂಡೆ (West Bank) ಮತ್ತು ಗಾಜಾಪಟ್ಟಿ ಮತ್ತು ಜೋರ್ಡಾನ್‌ಗಳ ಮೇಲೆ ಬ್ರಿಟನ್ ಹಿಡಿತ ಸಾಧಿಸಿತು. 1921ರಲ್ಲಿ ಬ್ರಿಟಿಷರು ಈ ಪ್ರದೇಶಗಳನ್ನು ಎರಡು ವಿಭಾಗಗಳಾಗಿ ವಿಭಜಿಸಿದರು. ಜೋರ್ಡನ್ ನದಿಯ ಪೂರ್ವದ ಪ್ರದೇಶವನ್ನು ಜೋರ್ಡನ್ ಎಂದು ಗುರುತಿಸಿ ಅಬ್ಬುಲ್ಲರ ಆಡಳಿತಕ್ಕೆ ಒಪ್ಪಿಸಲಾಯ್ತು. ಜೋರ್ಡನ್‌ನ ಪಶ್ಚಿಮದ ಪ್ರದೇಶವನ್ನು ಪ್ಯಾಲಸ್ಟೈನ್ ಎಂದು ಗುರುತಿಸಲಾಯ್ತು. ಜಾಗತಿಕ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಪ್ಯಾಲಸ್ಟೈನ್ ಒಂದು ಸಮಗ್ರ ರಾಜಕೀಯ ಅಸ್ತಿತ್ವ ಗಳಿಸಿತು.

ಬ್ರಿಟಿಷರ ಈ ನೀತಿಯಿಂದ ಅರಬ್‌ರಿಗೆ ವಿಶ್ವಾಸಘಾತವಾಯ್ತು. ಸ್ವತಂತ್ರ ಅರಬ್ ರಾಷ್ಟ್ರದ ರಚನೆಯನ್ನು ಕೈ ಬಿಟ್ಟದ್ದಷ್ಟೇ ಅಲ್ಲ ಬ್ರಿಟಿಷರು ಯಹೂದಿಗಳ ರಾಷ್ಟ್ರ ರಚನೆಗೂ ಉತ್ತೇಜನ ನೀಡಿದರು. ಹಾಗಾಗಿ 1920 ರಿಂದೀಚೆಗೆ ಅರಬ್‌ರು ಮತ್ತು ಬ್ರಿಟಿಷ್ ಜೊತೆಗೂಡಿದ ಯಹೂದಿಗಳ ನಡುವೆ ಘರ್ಷಣೆಗಳಾಗುತ್ತಲೇ ಇವೆ. ಜರ್ಮನಿಯಲ್ಲಿ ಭುಗಿಲೆದ್ದ ಹಿಟ್ಲರ್‌ನ ನಾಜಿವಾದದಿಂದ ಇನ್ನಷ್ಟು ಯಹೂದಿಗಳು ಪ್ಯಾಲಸ್ಟೈನ್‌ಗೆ ವಲಸೆ ಬರುವಂತಾಯ್ತು. ಹೆಚ್ಚುತ್ತಿದ್ದ ಯಹೋದಿಗಳ ನೆಲೆಗಳು ಅರಬ್‌ರನ್ನು ಕೆರಳಿಸಿದ ಫಲವಾಗಿ 1936-39 ರ ಅವಧಿಯಲ್ಲಿ ದಂಗೆಗಳಾದವು. ಯಹೂದಿ ಉಗ್ರರೊಂದಿಗೆ ಕೈ ಜೋಡಿಸಿದ ಬ್ರಿಟಿಷರು ಈ ದಂಗೆಕೋರರನ್ನು ಸದೆಬಡಿದರು. ಪ್ಯಾಲಸ್ಟೈನ್‌ನ ರಾಜಕೀಯ ನಾಯಕರುಗಳನ್ನು ಪದಚ್ಯುತಗೊಳಿಸಲಾಯ್ತು.

ಬ್ರಿಟನ್ ಹಿಡಿತದಿಂದ ಬಿಡುಗಡೆ

ದ್ವಿತೀಯ ಮಹಾಯುದ್ಧವು ಬ್ರಿಟಿಷ್ ಸಾಮ್ರಾಜ್ಯವನ್ನು ಬಹಳಷ್ಟು ದುರ್ಬಲಗೊಳಿಸಿತ್ತು. ತನ್ನ ವಸಾಹತುಗಳ ಮೇಲಿನ ಹತೋಟಿಯನ್ನುಳಿಸಿಕೊಳ್ಳುವುದು ಅದಕ್ಕೆ ಕಷ್ಟವಾಗ ತೊಡಗಿಸಿತ್ತು. ಇದೇ ಸಂದರ್ಭದಲ್ಲಿ ಯಹೂದಿ ಮತ್ತು ಅರಬ್‌ರ ನಡುವಿನ ಘರ್ಷಣೆ ಇನ್ನಷ್ಟು ತೀವ್ರವಾಯ್ತು. ಪ್ಯಾಲಸ್ಟೈನ್‌ನ ಮೇಲಿನ ತನ್ನ ಅಧಿಕಾರ ವಿಸರ್ಜಿಸಿದ ಬ್ರಿಟನ್ ಪ್ಯಾಲಸ್ಟೈನ್‌ನ ಭವಿಷ್ಯವನ್ನು ನಿರ್ಧರಿಸುವಂತೆ ವಿಶ್ವ ಸಂಸ್ಥೆಯನ್ನು ಕೋರಿಕೊಂಡಿತು. 1946ರ ವೇಳೆಗೆ 12,69,000 ಅರಬ್‌ರು ಮತ್ತು 6,08,000 ಯಹೂದಿಗಳು ಪ್ಯಾಲಸ್ಟೈನ್‌ನಲ್ಲಿ ನೆಲಸಿದ್ದರು. 1947ರ ನವೆಂಬರ್ 29ರಂದು ವಿಶ್ವ ಸಂಸ್ಥೆಯು ಪ್ಯಾಲಸ್ಟೈನ್‌ನ್ನು ಅರಬ್ ಮತ್ತು ಯಹೂದಿ ರಾಜ್ಯಗಳಾಗಿ ವಿಭಜಿಸುವ ಆದೇಶಕ್ಕೆ ಮತ ಹಾಕಿತು. ಶೇ.56 ಭೂಮಿಯನ್ನು ಅರಬ್‌ರಿಗೆ ನೀಡಲಾಯ್ತು. ಜೆರುಸಲೇಂ ಮತ್ತು ಬೆತ್ಲಹೇಮ್‌ಗಳಿಗಿದ್ದ ಧಾರ್ಮಿಕ ಪ್ರಾಮುಖ್ಯತೆಯ ಕಾರಣದಿಂದ ಅವುಗಳನ್ನು ಅಂತರಾಷ್ಟ್ರೀಯ ವಲಯವೆಂದು ಗುರುತಿಸಲಾಯ್ತು.

ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿರುವ ಇಸ್ರೇಲಿ ಅತಿಕ್ರಮಣ. ಕಪ್ಪು ಬಣ್ಣದಲ್ಲಿರುವ ಪ್ಯಾಲಿಸ್ಟೇನ್ ದೇಶದ ನಕ್ಷೆ ನೋಡಿ ಹೇಗೆ ಕರಗುತ್ತಾ ಹೋಗಿದೆ. ನಕ್ಷೆ ಕ್ರಮವಾಗಿ 1945, 1947, 1967 ಮತ್ತು 2000 ಇಸವಿಯವು.



ನಿರಾಶ್ರಿತರ ಶಿಬಿರಕ್ಕೆ ಪಾಲಿಸ್ಟೈನಿಯರು

ಮೇ 14, 1948ರಂದು ಯಹೂದಿಗಳು ಇಸ್ರೇಲ್‌ನ್ನು ತಮ್ಮ ರಾಷ್ಟ್ರವೆಂದು ಗುರುತಿಸಿ ಅಲ್ಲಿ ನೆಲೆಸಿದ್ದ ಸುಮಾರು 7.5 ಲಕ್ಷ ಪ್ಯಾಲಸ್ಟೈನಿ ಅರಬ್‌ರನ್ನು ನಿರಾಶ್ರಿತ ಶಿಬಿರಗಳಿಗೆ ಹೊರ ತಳ್ಳಿದರು. ಅರಬ್ ಪ್ರಾಂತ್ಯಗಳ ವಿಭಜನೆ ಮತ್ತು ಇಸ್ರೇಲ್‌ನ ರಚನೆಯನ್ನು ಅರಬ್ ರಾಜ್ಯಗಳು ಧಿಕ್ಕರಿಸಿದವು. ಅರಬ್ ಸೇನೆ ಇಸ್ರೇಲ್‌ನ ಮೇಲೆ ಧಾಳಿ ನಡೆಸಿದಾಗ ಬ್ರಿಟನ್‌ನ ನೆರವಿನಿಂದ ಇಸ್ರೇಲ್ ಅದನ್ನು ಸೋಲಿಸಿತು. 1949ರಲ್ಲಿ ಯುದ್ಧ ವಿರಾಮಕ್ಕೆ ಸಹಿ ಹಾಕುವ ಮೂಲಕ ಯುದ್ಧಾಂತ್ಯವಾಯ್ತು. ಪ್ಯಾಲಸ್ಟೈನ್‌ನ್ನು ಮೂರು ವಿಭಾಗ ಮಾಡಲಾಯ್ತು. ಪಶ್ಚಿಮ ಜೆರುಸಲೇಂ ಸೇರಿದಂತೆ ಇಸ್ರೇಲ್ ಶೇ.77 ಪ್ರದೇಶವನ್ನು ತನ್ನ ಹತೋಟಿಗೆ ತೆಗೆದುಕೊಂಡಿತು. ಪಶ್ಚಿಮ ದಂಡೆ ಮತ್ತು ಪೂರ್ವ ಜರುಸಲೇಂ ಜೋರ್ಡಾನ್‌ನ ಪಾಲಾಯಿತು. ಗಾಜಾಪಟ್ಟಿ ಈಜಿಪ್ಟ್‌ನ ಪಾಲಾಯ್ತು. ವಿಶ್ವ ಸಂಸ್ಥೆ ಯೋಜಿಸಿದ ಪ್ಯಾಲಸ್ಟೈನ್ ಅರಬ್ ರಾಜ್ಯ ರಚನೆಯಾಗಲೇ ಇಲ್ಲ. ಇಸ್ರೇಲ್‌ನ ರಚನೆ ನ್ಯಾಯಬಾಹಿರವಾದದ್ದು. ಮೂಲ ನಿವಾಸಿಗಳು ಮತ್ತು ಪ್ಯಾಲಸ್ಟೈನ್ ಅರಬ್‌ರನ್ನು ಹೊರದಬ್ಬಿ ಅದನ್ನು ರಚಿಸಲಾಯ್ತು. ಇದು ಇಡೀ ಜಗತ್ತನ್ನೇ ದಿಗ್ಭ್ರಮೆಗೊಳಿಸಿದ್ದು, ಮಹಾತ್ಮಗಾಂಧಿ ಇದನ್ನು ಅನೈತಿಕವೆಂದು ಕರೆದರು. ಸಾವಿರಾರು ಮುಗ್ಧರನ್ನು ಬಲಿ ತೆಗೆದುಕೊಂಡು ಹಲವರ ರಕ್ತಪಾತಕ್ಕೆ ಕಾರಣವಾದ ಸಾಮ್ರಾಜ್ಯಶಾಹಿಗಳನ್ನು ಕ್ಷಮಾರ್ಹರಲ್ಲ. ಸಾಮ್ರಾಜ್ಯಶಾಹಿ ಬೆಂಬಲಿತ ಯಹೂದಿಗಳು ನಿರಂತರವಾಗಿ ತಮ್ಮ ವ್ಯಾಪ್ತಿ ವಿಸ್ತರಿಸುತ್ತ 1967ರಲ್ಲಿ ಅದು ಪೂರ್ವ ಜರುಸಲೇಂ, ಪಶ್ಚಿಮ ದಂಡೆ ಮತ್ತು ಗಾಜಾ ಪಟ್ಟಿಯನ್ನು ಅರಬ್‌ರಿಂದ ಕಸಿದುಕೊಳ್ಳುವುದ ರೊಂದಿಗೆ ಪ್ಯಾಲಸ್ಟೈನ್ ಆಕ್ರಮಣ ಸಂಪೂರ್ಣಗೊಂಡಿತು.

ತದನಂತರ ಆಕ್ರಮಣವನ್ನು ಪ್ಯಾಲಸ್ಟೈನ್ ನಿರಂತರವಾಗಿ ವಿರೋಧಿಸುತ್ತಿದ್ದರೂ ಆ ವಿರೋಧ ಸಂಘಟಿತವಾಗಿರಲಿಲ್ಲ. ತಮ್ಮ ನೆಲೆಯ ಬೇಡಿಕೆಯ ಈಡೇರಿಕೆಗಾಗಿ ಅವರು ಇತರ ಅರಬ್ ರಾಜ್ಯಗಳಷ್ಟು ಬೆಂಬಲ ನಿರೀಕ್ಷಿಸಿದರು. ಇಲ್ಲಿನ ಭ್ರಷ್ಟ ಅರಬ್ ಆಡಳಿತ ತಮ್ಮ ಅಸ್ತಿತ್ವಕ್ಕಾಗಿ ಸಾಮ್ರಾಜ್ಯ ಶಾಹಿಗಳನ್ನೇ ಅವಲಂಬಿಸಿದ್ದರು. ಹಾಗಾಗಿ ಯಾವುದೇ ಸಹಾಯ ದೊರೆಯದೆಂಬುದು ಅವರಿಗೆ ಅರಿವಾಯ್ತು. ಗಡಿ ಪಾರಾಗಿದ್ದ ಪ್ಯಾಲಸ್ಟೈನಿಯರು ಸಂಘಟಿತರಾಗ ತೊಡಗಿದರು. 1957ರಲ್ಲಿ ಅರಾಫತ್ ಫತಾ ಸ್ಥಾಪಿಸಿದರು. ಸಶಸ್ತ್ರ ಹೋರಾಟವೊಂದೇ ತಮಗೆ ನ್ಯಾಯ ದೊರಕಿಸಬಲ್ಲದೆಂಬುದು ಅವರ ವಿಶ್ವಾಸವಾಗಿತ್ತು. 1964 ರಲ್ಲಿ ಪ್ಯಾಲಸ್ಟೈನಿಯನ್ ಲಿಬರೇಷನ್ ಆರ್ಗನೈಷರ್ನ (PLO) ವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು. ಫತಾ ಪಾಪ್ಯೂಲರ್ ಫ್ರಂಟ್ ಫಾರ್ ಲಿಬರೇಷನ್ ಆಫ್ ಪ್ಯಾಲಸ್ಟೈನ್, ಡೆಮಕ್ರಟಿಕ್ ಫ್ರಂಟ್ ಫಾರ್ ಲಿಬರೇಷನ್ ಆಫ್ ಪ್ಯಾಲಸ್ಟೈನ್, ಪ್ಯಾಲಸ್ಟೈನ್ ಪೀಪಲ್ ಪಾರ್ಟಿ(ಈ ಹಿಂದೆ ಪ್ಯಾಲಸ್ಟೈನ್ ಕಮ್ಯುನಿಸ್ಟ್ ಪಾರ್ಟಿ) ಈ ಎಲ್ಲವೂ (PLO) ವನ್ನು ಸೇರಿಕೊಂಡವು. 1969ರಲ್ಲಿ ಯಾಸೆರ್ ಅರಾಫತ್ (PLO)ದ ಅಧ್ಯಕ್ಷರಾಗಿ ಚುನಾಯಿತರಾದರು. ತಮ್ಮ ಆಶೋತ್ತರಗಳ ಪ್ರತಿನಿಧಿ (PLO) ಎಂದು ಪ್ಯಾಲಸ್ಟೈನ್ ಜನತೆ ಗುರುತಿಸಿತು. (PLO) ಅಂದಿನಿಂದಲೇ ಇಸ್ರೇಲ್‌ನ ಆಕ್ರಮಣದ ವಿರುದ್ಧ ತೀವ್ರ ಹೋರಾಟ ನಡೆಸಿದ ಫಲವಾಗಿ 1982ರಲ್ಲಿ ಟುನೀಸಿಯಾದ ರಚನೆ ನಡೆಯಿತು.

ಮೊದಲಿಗೆ ಆಕ್ರಮಿತ ಪ್ರದೇಶಗಳಲ್ಲಿ ಜನತೆಯ ಹೋರಾಟ ಹೆಚ್ಚಾಯಿತು. ಇದು ಟುನಿಯರ ಪ್ರಯತ್ನವಾಗಿರಲಿಲ್ಲ. ಬದಲಿಗೆ ಆಕ್ರಮಿತ ಪ್ರದೇಶದ ಜನತೆ ಮತ್ತು ಸಂಘಟನೆಗಳ ಪ್ರಯತ್ನವಾಗಿತ್ತು. ನಾಗರೀಕ ಅವಿಧೇಯತೆ, ಮತ ಪ್ರದರ್ಶನ, ಕರನಿರಾಕರಣೆ ಮುಷ್ಕರ ಇವು ಅವರ ಕಾರ್ಯಚರಣೆಯಾಗಿತ್ತು. ಈ ಎಲ್ಲವೂಗಳನ್ನೂ ಇಸ್ರೇಲ್ ತನ್ನ ಸೈನಿಕ ಶಕ್ತಿಯಿಂದ ಹೊಸಕಿ ಹಾಕಿದ ಫಲವಾಗಿ ಹಮಾಸ್ ಮತ್ತು ಇಸ್ಲಾಂಹಾದ್‌ನಂತಹ ಉಗ್ರ ಬಣಗಳು ಹುಟ್ಟಿಕೊಂಡವು. ತಮ್ಮ ಸ್ವಾತಂತ್ರ್ಯಕ್ಕಾಗಿ ನಿಖರ ರಾಜಕೀಯ ಯೋಜನೆಗಳಿರಬೇಕೆಂದು ಅವು (PLO) ದ ಮುಂದೆ

ಪುಟ 14 ಕ್ಕೆ

ದಲಿತನ ಕೊಲೆಗಾರರಿಗೆ.....

ಪುಟ 6 ರಿಂದ

ಅನುಮಾನ, ಆಕ್ರೋಶ ಬರುವುದಿಲ್ಲ ಹೇಳಿ? ದುಡಿವ ತಂದೆಯನ್ನು ಹೀಗೆ ಏಕಾಏಕಿ ಕಳೆಕೊಂಡ ತಬ್ಬಲಿ ಮಕ್ಕಳು ಸಹಜವಾಗಿಯೇ ಗುರಣ್ಣನ ಮನೆಗೆ ಹೋಗಿ ತಮ್ಮ ಸಿಟ್ಟು ಆಕ್ರೋಶ ವ್ಯಕ್ತ ಮಾಡಿದ್ದಾರೆ. ಗುರಣ್ಣ ಪೋಲೀಸರಿಗೆ ಫೋನ್ ಮಾಡಿ ಬರಲು ಕೇಳಿದ್ದಾನೆ. ತಾವು ಕರೆ ಕಳಿಸಿದರೂ ಬರದ ಪರಮಣ್ಣನ ಶವದೊಂದಿಗೂ ಸೇಡು ಮಸೆದರೇನೋ ಪೋಲಿಸರು. ಅಲ್ಲಾಳಕ್ಕೆ ಬರುವಾಗ ಅಕ್ಷರಶಃ ರಾಕ್ಷಸರಾಗಿಯೇ ಬಂದರು ಅಥವಾ ತಮ್ಮ ಕೈವಾಡದ ಸತ್ಯ ಬಯಲಾಗದಂತೆ ತಡೆಯಲು ಬಂದರೇನೋ. ಬಂದವರೆ ದಲಿತ ಗಂಡಸರನ್ನೆಲ್ಲ ನಡು ರಸ್ತೆಯಲ್ಲಿ ರಾಶೀ ಕಟ್ಟಿಗೆ ಒಟ್ಟುವಂತೆ ಒಂದೆಡೆ ಪೇರಿಸಿ ಅಮಾನುಷವಾಗಿ ಥಳಿಸಿ ಥಳಿಸಿ ಹಾಕಿದ್ದಾರೆ. ಸತತ ಎಂಟು ಗಂಟೆಗಳ ಕಾಲ ಹೀಗೆ ಕೂಡಿ ಹಾಕಿದ್ದಾರೆ. ಅತ್ತ ಪರಮಣ್ಣನ ಹೆಣ ಮರಕ್ಕೆ ನೇತಾಡುತ್ತಿದೆ. ಇತ್ತ ಪರಮಣ್ಣನ ಮಕ್ಕಳು ಅಪ್ಪನ ಸಾವಿನ ನೋವು ನುಂಗುತ್ತಲೇ ಪೋಲಿಸರ ಬೆತ್ತಕ್ಕೆ ಬಲಿಯಾಗುತ್ತಿದ್ದಾರೆ. ಇದೆಂಥ ಕ್ರೌರ್ಯ! ಕಲ್ಲೆದೆಯೂ ಕರಗುವ ಹೊತ್ತಲ್ಲಿ ಖಾಕಿಗಳ ಹೃದಯ ಕಲ್ಲಾಗಿ, ದಬ್ಬಾಳಿಕೆಗಾರರನ್ನೇ ಸಮರ್ಥಿಸಿದ್ದಾರೆ. ಹೌದು ಆದ್ದರಿಂದಲೇ 18 ಜನ ದಲಿತರ ಮೇಲೆ 7 ಎಫ್‌ಐಆರ್ ದಾಖಲಿಸಿದ್ದಾರೆ. ಎಲ್ಲವೂ ಕೊಲೆ ಪ್ರಯತ್ನದ ಕೇಸುಗಳೇ. 307 ದೂರು ಕೊಟ್ಟವರು ಎಸ್.ಐ., ದಾರಿ ಹೋಕನೊಬ್ಬ, ಟ್ರ್ಯಾಕ್ಟರ್ ಚಾಲಕನೊಬ್ಬ, ಗುರಣ್ಣನ ಮನೆಯ ಹೆಂಗಸೊಬ್ಬಳು. ಆದರೆ ಯಾರಿಗೂ ಗಾಯಗಳಾಗಿಲ್ಲ. ಮತ್ತೆ ಕಲಂ 307 ಹೇಗೆ? ಪೋಲೀಸ್ ರಾಜ್ಯವು ಪಾಳೇಗಾರರೊಂದಿಗೆ ಕೂಡಿದರೆ ಏನಾಗಬೇಡ? ಇಷ್ಟಾದರೂ ದಲಿತರು ಹೆಣ ತೆಗೆಯಲು ಬಿಟ್ಟಿಲ್ಲ, ಎಸ್.ಪಿ. ಬಂದರೂ ಪ್ರತಿಭಟನೆ ನಿಂತಿಲ್ಲ.

ವಿರಮಿಸದ ಲಾರಿ

ಮಧ್ಯಾಹ್ನದಲ್ಲಿ ಮುಧೋಳದಿಂದ ಇಬ್ಬರು ದಲಿತ ನಾಯಕರು ಸುದ್ದಿ ತಿಳಿದು ಬಂದಿದ್ದಾರೆ. ಸರಿ ಇಷ್ಟು ಸಾಕಾಯ್ತು ಪೋಲೀಸರಿಗೆ, ಮತ್ತೆ ದಾಳಿಗೆ ಸುರುವಿಟ್ಟುಕೊಂಡರು. ದಲಿತ ಯುವಕರ ಸ್ವಾಭಿಮಾನದ ಕೂಗಿನ ನಡುವೆಯೂ ಪೋಲೀಸ್ ಲಾರಿ ದಲಿತರ ಬೆನ್ನ ಬಾರನೆತ್ತುತ್ತಲೇ ಹರಿದಾಡಿದೆ. ಸುದ್ದಿ ತಿಳಿದು ಮಧ್ಯಾಹ್ನದ ಮೇಲೆ ಎಂಎಲ್‌ಎ, ಡಿ.ಸಿ., ತಹಶೀಲ್ದಾರ್ ಗ್ರಾಮಕ್ಕೆ ತೆರಳಿ ಶವವನ್ನು ದಫನ್ ಮಾಡಿದ್ದಾರೆ. ಎರಡನೇ ಬಾರಿ ಅಟಾಕ್ ಮಾಡಿದ್ದ ಎಸ್.ಐ. ಸುರಪುರದಿಂದ ಹೆಚ್ಚಿನ ಪೋಲೀಸ್ ಫೋರ್ಸ್ ತರಿಸಿದ್ದಾನೆ. ಅನಂತರ ದಲಿತ ಯುವಕರು, ಪರಮಣ್ಣನ ಸಾವು ಆತ್ಮಹತ್ಯೆ ಅಲ್ಲ, ಅದೊಂದು ಕೊಲೆ ಎಂದು ಅನುಮಾನ ಬಂದವರ ಹೆಸರುಗಳನ್ನು ಗುರಣ್ಣನ ಹೆಸರಿನೊಂದಿಗೆ (18 ಜನರ) ಸೇರಿಸಿ ದೂರು ಕೊಟ್ಟಿದ್ದಾರೆ. ಎಫ್‌ಐಆರ್ ಆಗಿದೆ.

ಇಡೀ ಪ್ರಕರಣವು ರಾಜ್ಯದಲ್ಲಿ ಸುದ್ದಿಯಾಗಿದೆ. ಪ್ರಜಾಪ್ರಭುತ್ವದ ಈ ಸ್ವತಂತ್ರ ದೇಶದಲ್ಲಿ ಇಂಥ ಅಮಾನವೀಯ ಘಟನೆಗಳು ಯಾರಲ್ಲಿ ಕೆಚ್ಚು ಕೆರಳಿಸುವುದಿಲ್ಲ ಹೇಳಿ? ಗ್ರಾಮಕ್ಕೆ ಭೇಟಿಯಿತ್ತು ಪರಮಣ್ಣನ ಮನೆಗೆ ರೂ.25000 ಹಣ ಕೊಟ್ಟು ಕೊಲೆಯೆಂದು ಆಪಾದಿಸಿರುವುದರಿಂದ ಪರಿಹಾರ ಕೊಡಲಾಗದು, ಪ್ರಕರಣ ಸಿಓಡಿ ಗೆ ಒಪ್ಪಿಸುವೆ ಎಂದು ನಾಟಕವಾಡಿ ಸಚಿವ ದರ್ಶನಾಪುರ ಕಪಟಿ ರಾಜಕಾರಣಿ ಎಂಬುದನ್ನು ಜಾಹಿರುಗೊಳಿಸಿದ್ದಾರೆ. ಅಷ್ಟು ಮಾತ್ರವಲ್ಲ. ಗ್ರಾಮಕ್ಕೆ ಭೇಟಿಯಿತ್ತ ದಲಿತ ಮುಖಂಡರಾದ ಮಾನಪ್ಪ ಕಟ್ಟಿಮನಿ ಮತ್ತು ಲಕ್ಷ್ಮಣರನ್ನು ಎಸ್.ಐ. ಪ್ರಭುಗೌಡ ಪಾಟೀಲ್ ತನ್ನ ಹೆಂಡತಿಯ ತವರಿನಿಂದ (ಪಕ್ಕದ ಗ್ರಾಮ ಚಿಂಚೋಳಿ) ಗೂಂಡಾಗಳನ್ನು ಕರೆಸಿ ಮರಣಾಂತಿಕ ಹಲ್ಲೆ ಮಾಡಿದ್ದಕ್ಕೆ ಬೆನ್ನು ತಟ್ಟಿದ್ದಾರೆ ಎಂಬುದು ಸುಳ್ಳಲ್ಲ. ಇಲ್ಲದಿದ್ದರೆ ಎಸ್.ಐ. ಮತ್ತು ಪೋಲಿಸರು ನಡೆಸಿದ ದೌರ್ಜನ್ಯಕ್ಕೆ ಈ ಹೊತ್ತಿನವರೆಗೆ ಮನೆಯ ಮೂಲೆ ಸೇರಬೇಕಿತ್ತು. ಹಾಗಾಗಲಿಲ್ಲ. ಬದಲಿಗೆ ಶ್ರೀರಕ್ಷೆ ಸಿಕ್ಕಿದೆ. ಈ ಶ್ರೀರಕ್ಷೆಯೇ ತಾಲ್ಲೂಕಿನಾದ್ಯಂತ ವ್ಯಾಪಿಸಿ ವ್ಯವಸ್ಥಿತವಾಗಿ 'ದಲಿತ ವಿರೋಧಿ' ಭಾವನೆ ಹರಡಲಾಗಿದೆ. ಇಡೀ ಪ್ರಕರಣ ಮುಚ್ಚಿ ಹಾಕಲು ಬೇಕಾದ ಹುನ್ನಾರ ಹೆಣೆಯಲಾಗಿದೆ.

ಹೋರಾಟದ ಕಹಳೆ

ಹೌದು ಸಿಪಿಐ(ಎಂ) ಪಕ್ಷದ ನಿಯೋಗವು ಹಳ್ಳಿಗೆ ಭೇಟಿಯಿತ್ತಿದೆ. ಪರಮಣ್ಣನು ಭೂಮಿಯ ಮೇಲಿನ ತನ್ನ ಹಕ್ಕನ್ನು ಪ್ರತಿಪಾದಿಸಿದ್ದಕ್ಕಾಗಿ ನೇಣಿಗೆ ನೇತಾಡಬೇಕಾಯ್ತು ಎಂಬುದನ್ನು ಗುರುತಿಸಿದೆ. ಹಾಗೆ ನೋಡಿದರೆ ದಲಿತರು ಉಂಡುಟ್ಟು ನೆಮ್ಮದಿಯಾಗಿರುವುದೇ ಅನೇಕರಿಗೆ ಕಣ್ಣಕಿಸರಾಗಿತ್ತು. ದಲಿತರನ್ನು ಭೂ ಹೀನರಾಗಿಸಿ, ಗುಲಾಮರನ್ನಾಗಿಸಿ ಜಮೀನ್ದಾರಿಕೆ ಮೆರೆಯುವುದು ಸ್ವಲ್ಪ ಅಲ್ಲಾಡಿದರೂ ಮೇಲ್ಜಾತಿ ಸವರ್ಣಿಯರು, ಪಾಳೇಗಾರರು ಸಹಿಸದೇ ದಲಿತ ವಿರೋಧಿಗಳಾಗಿದ್ದಾರೆ. ಸುಳ್ಳು ಆಪಾದನೆಗಳ ಪಟ್ಟಿ ಮಾಡಿದ್ದಾರೆ. ಈ ಪ್ರಕರಣದಲ್ಲಿ ಕುಡಿವ ನೀರಿನ ಬಾವಿಯಲ್ಲಿ ಬೇಕೆಂದೇ ಕೊಡ ಕೆಡವಿ, ಬಾವಿಗಿಳಿದು ನೀರು ಹೊಲಸು ಮಾಡಿದ ಕ್ಷುಲ್ಲಕ ಆಪಾದನೆ ಮಾಡಿದ್ದಾರೆ. ಹೆಣ್ಣು ಮಕ್ಕಳನ್ನು ಚುಡಾಯಿಸಿ ಸತಾಯಿಸುತ್ತಾರೆ ಎಂಬ ಸುಳ್ಳು ವದಂತಿ ಹರಡಿದ್ದಾರೆ. ಅಟ್ರಾಸಿಟಿ ಕಾಯ್ದೆ ಕಿತ್ತು ಹಾಕಿ ಎಂದಿದ್ದಾರೆ. ಅಲ್ಲಿಗೆ ಹೋಗಿದ್ದ ನಿಯೋಗ ಎಲ್ಲ ಆಪಾದನೆ ಎಂಥ ಅಪ್ಪಟ ಸುಳ್ಳು ಎಂಬುದನ್ನು ಸಾಬೀತುಗೊಳಿಸಿದೆ. ಅಲ್ಲಿಗೆ ಭೇಟಿ ನೀಡಿದ ದಲಿತ ಸಂಘಟನೆಗಳ ನಾಯಕರ ಮೇಲೆ ಗೂಂಡಾ ಧಾಳಿ ನಡೆದದ್ದು ಹಾಗೂ ಸಚಿವ ದರ್ಶನಾಪೂರ ಬಲವಾಗಿ ಕೊಲೆಗಾರರನ್ನು ಸಮರ್ಥಿಸುವುದನ್ನು ಸಂಘಟನೆಗಳು ಸವಾಲಾಗಿ ಸ್ವೀಕರಿಸಿವೆ. ಸಿಪಿಐ(ಎಂ), ದಲಿತ ಸಂಘಟನೆಗಳು, ಮಾನವೀಯತೆವುಳ್ಳವರೆಲ್ಲಾ ಸೇರಿ ಪೋಲೀಸ್ ಧಾಳಿಗೆ ಭಯ ಬಿದ್ದವರನ್ನೆಲ್ಲ ಒಗ್ಗೂಡಿಸಿದ್ದಾರೆ. ಜುಲೈ 9 ರಂದು ಕೆಂಭಾವಿಯಲ್ಲಿ ಸಾವಿರಾರು ಜನರ ಬೃಹತ್ ಪಾದಯಾತ್ರೆ ನಡೆದಿದೆ. ಸಿಪಿಐ(ಎಂ) ಮತ್ತು ದಲಿತ ಸಂಘಟನೆಯ ಮುಖಂಡರ ನೇತೃತ್ವದಲ್ಲಿ ಪಾದಯಾತ್ರೆಯಲ್ಲಿ ಹನ್ನೆರಡು ವಯಸ್ಸಿನ ಹೆಂಗೂಸು, 80ರ ಇಳಿ ವಯಸ್ಸಿನ ಅಜ್ಜಿ, ಐದು ವರ್ಷದ ಹಾಲ್ಗೆನ್ನೆಯ ಎಳೆ ಮಗು ಸಹಿತ ದನಿ ಎತ್ತಿ ಸ್ವಾಭಿಮಾನದಿಂದ ಬದುಕುವ ಹಕ್ಕು ಕೇಳಿದ್ದಾರೆ. ಕೊಲೆ ಗಡುಕರಿಗೆ ಬಂಧಿಸಿ, ಪುನರ್ ಪೋಸ್ಟ್ ಮಾರ್ಟಂ ಮಾಡಿ, ಟೆನೆಂಟ್ ಖಾಯಂ ಮಾಡಿ, ಸಾಮಾಜಿಕ ಬಹಿಷ್ಕಾರ ನಿಲ್ಲಿಸಿ, ಸರ್ವೆ ನಂ. 54 ರ ಹೊಲದ ಪಾಣಿಯಲ್ಲಿ ಪರಮಣ್ಣನ ಹೆಸರು ದಾಖಲಿಸಿ, ಪರಮಣ್ಣನ ಕುಟುಂಬಕ್ಕೆ 5 ಲಕ್ಷ ಪರಿಹಾರ ಕೊಡಿ. ಮಾನಪ್ಪ ಮತ್ತು ಲಕ್ಷ್ಮಣ ಮೇಲೆ ಹಲ್ಲೆಗೈದವರನ್ನು ಬಂಧಿಸಿ... ಎಂಬ ಹಕ್ಕೊತ್ತಾಯಗಳನ್ನಿಟ್ಟು ಮೂರು ಹಂತದ ಹೋರಾಟಗಳು ನಡೆದಿವೆ. ಶಹಾಪುರ್‌ನಲ್ಲಿ ರಸ್ತೆ ತಡೆ ಮಾಡಲಾಗಿದೆ.



ಏಟಿನಿಂದ ತಲೆ ಒಡೆದುಹೋದ ಡಿಎಸ್‌ಎಸ್ ಸುರಪುರ ತಾ. ಸಂಚಾಲಕ ಲಕ್ಷ್ಮಣ ರಾಂಪುರ್

ಮತ್ತೆ ಮತ್ತೆ ದೌರ್ಜನ್ಯ

ಸಾವಿರಾರು ಜನ ಸವರ್ಣೀಯರು ದಲಿತರ ವಿರುದ್ಧ ರ್‍ಯಾಲಿ ಮಾಡಿದ ದಿನ ರಾತ್ರಿಯೇ ಯುಕ್ತಾಪುರದ ಗುತ್ತಿ ಬಸವೇಶ್ವರ ದೇವಸ್ಥಾನದ ಹತ್ತಿರ ದಲಿತರ ಮೇಲೆ ಸವರ್ಣೀಯರು ಹಲ್ಲೆ ಮಾಡಿದ್ದಾರೆ. ಬಿಡಿಸಲು ಹೋದ ಒಬ್ಬ ಸವರ್ಣೀಯ ಗುತ್ತಪ್ಪ ಗೌಡನ ಕೈ ಮುರಿದರೆ, ದಲಿತ ಶಿವಾನಂದ ಸಣ್ಣ ತಿಪ್ಪಣ್ಣರ ತಲೆಗೆ ತೀವ್ರ ಪೆಟ್ಟಾಗಿದೆ. ಚಿದಾನಂದ ಕಾಖಂಡಕಿ ಎಂಬ ದಲಿತ ಯುವಕನೂ ಹಲ್ಲೆಗೆ ಬಲಿಯಾಗಿದ್ದಾನೆ. ಇದೆಂಥ ಕ್ರೌರ್ಯ...?

ಸಾವಿರಾರು ವರ್ಷಗಳಿಂದ ಒಂದು ಜನ ಸಮುದಾಯವನ್ನು ಅಸ್ಪೃಶ್ಯರನ್ನಾಗಿಸಿ ಎಲ್ಲ ಹಕ್ಕುಗಳಿಂದ ವಂಚಿಸಿ ಅಮಾನವೀಯವಾಗಿ ನಡೆಸಿಕೊಂಡ ಈ ಜಾತಿ ವ್ಯವಸ್ಥೆಯು ಇಂದು ಹೊಸ ಹೊಸ ರೂಪ ತೊಟ್ಟು ಬರುತ್ತಿದೆ. ಮತ್ತೆ ಮತ್ತೆ ಮಹಿಳೆಯರ ಮೇಲೆ, ದಲಿತರ ಮೇಲೆ, ಬಡ ಜನತೆಯ ಮೇಲೆ ದಾಳಿ ದಬ್ಬಾಳಿಕೆ ನಡೆಸುತ್ತಾ, ಮತ್ತೂ ತಲೆಯೆತ್ತಿ ಮೆರೆಯುತ್ತಿದೆ. ಶ್ರೇಣೀಕೃತ ವ್ಯವಸ್ಥೆಯನ್ನು ಹುಟ್ಟುಹಾಕಿ ಪುರಸ್ಕರಿಸಿ ಪೋಷಿಸಿದ ಚಾತುರ್ವರ್ಣ್ಯದ ವಿರುದ್ಧ, ವೈದಿಕತೆಯ ವಿರುದ್ಧ ಅತ್ಯಂತ ಗಟ್ಟಿದನಿಯಿಂದ ಹೋರಾಟದ ಕಹಳೆ ಮೊಳಗಿದ ನಾಡು ಉತ್ತರ ಕರ್ನಾಟಕ. ಕಾಯಕ ಜೀವಿಗಳ ಚಳುವಳಿ ಕಂಡ ಈ ಪ್ರದೇಶದಲ್ಲಿ ಈವರೆಗೆ ಎಲ್ಲ ರೀತಿಯ ಮಾನವೀಯ ಹಕ್ಕುಗಳು ಮೈಯರಳಿ ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗಬೇಕಿತ್ತು. ಆದರೆ ಉಳಿದ ಹೋದು ಅರೆ ಪಾಳೇಗಾರಿ ಬೆಳೆದು ಬರುವ ಜಮೀನ್ದಾರಿಕೆ ಸಮ್ಮಿಳಿತಗೊಂಡು, ಆರ್ಥಿಕ ರಾಜಕೀಯ ಕ್ಷೇತ್ರಗಳ ಅಟ್ಟ ಹತ್ತಿದ ಪಟ್ಟಭದ್ರ ಶಕ್ತಿಗಳು ಬಹಿರಂಗದಲ್ಲಿ ಬಸವಣ್ಣನ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಅಂತರಂಗದಲ್ಲಿ ಕತ್ತಿ ಮಸೆಯುತ್ತಿರು ವರೆನ್ನುವುದಕ್ಕೆ ಸುರಪುರದ 'ದಲಿತ ವಿರೋಧಿ' ಮೆರವಣಿಗೆ ಸಾಕ್ಷಿಯಾಗಿದೆ.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಎಂದು ದಲಿತನೇ ತಾನಾಗಿದ್ದಂತೆ ಶೋಷಿತ ಸಮುದಾಯಗಳನ್ನು ಎದೆಗಪ್ಪಿಕೊಂಡ ಬಸವಣ್ಣನ ಅಂತರ ಕಾಳಜಿಯರಿಯದವರೇ ಇಂದು ಕಡು ಜಾತಿವಾದಿಗಳೂ ಸಮಾನತೆಯ ವಿರೋಧಿಗಳೂ ಆಗಿ ದಲಿತ ವಿರೋಧಿಗಳಾಗಿದ್ದಾರೆ.

ಆದರೆ ಬದುಕುವ ಹಕ್ಕಿಗಾಗಿ, ಸ್ವಾಭಿಮಾನದ ಜೀವನಕ್ಕಾಗಿ ನಿರಂತರ ಸಂಘರ್ಷ ನಡೆದ ಚರಿತ್ರೆಯೇ ನಮ್ಮ ಮುಂದಿರುವಾಗ, ಜನ ಚಳುವಳಿಯಿಂದಲೇ ಸಮಾನತೆಯ ಬದುಕು ಸಾಧ್ಯವಾಗುವು ದೆಂದಾಗ ಸಂಘಟಿತ ಹೋರಾಟವೇ ದಾರಿಯಲ್ಲವೇ? ದುಡಿವ ಜನತೆ ಶೋಷಿತ ಜನತೆ ಒಂದಾಗುವುದೊಂದೇ ದಾರಿ. ○

ಪ್ಯಾಲೆಸ್ತೀನ್ ವ್ಯಥೆಯೂ

ಪುಟ 13 ರಿಂದ

ಬೇಡಿಕೆಯಿಟ್ಟವು. ಇದಕ್ಕೆ ಪ್ರತಿಕ್ರಿಯೆಯಾಗಿ 1988 ರಲ್ಲಿ ಅಲ್ಜೀರಿಯಾದಿಂದ (PLO) ಇಸ್ರೇಲನ್ನು ಗುರುತಿಸಿ, ಪೂರ್ವ ದಂಡೆ ಮತ್ತು ಗಾಜ ಪಟ್ಟಿಯನ್ನೊಳಗೊಂಡಂತೆ ಪ್ರತ್ಯೇಕ ಸ್ವತಂತ್ರ ಪ್ಯಾಲಸ್ತೈನ್‌ನ್ನು ಘೋಷಿಸಿತು.

ಶಾಂತಿ ಮಾತುಕತೆ

ಇಲ್ಲಿಂದ ಹೋರಾಟಗಳು ಇನ್ನಷ್ಟು ಮುಂದುವರೆದವು. 1991ರಲ್ಲಿ ಮಾಂಡ್ರಿಡ್‌ನಲ್ಲಿ ಆರಂಭವಾದ ಮಾತುಕತೆ ಪ್ರಕ್ರಿಯೆ 1993ರಲ್ಲಿ ಓಸ್ಲೋದಲ್ಲಿ ಸಮ್ಮತ ಸಾಧಿಸುವುದರೊಂದಿಗೆ ಮುಕ್ತಾಯವಾಯ್ತು. ಪಶ್ಚಿಮ ದಂಡೆ ಮತ್ತು ಗಾಜಾಗಳ ಮೇಲೆ ಪ್ಯಾಲಸ್ತೈನರಿಗೆ ನಾಗರೀಕ ನಿಯಂತ್ರಣ ಸಾಧ್ಯವಾಗಿಸಿತು. ಜೆರುಸಲೇಂನ ಸ್ಥಾನಮಾನ, ನೀರು ಮತ್ತು ಗಡಿಗಳ ಪ್ರಶ್ನೆಯನ್ನು ನಂತರ ಚರ್ಚಿಸಲಾಯ್ತು. ಸಾಮ್ರಾಜ್ಯಶಾಹಿ ಅಮೇರಿಕಾ ನಿರ್ದೇಶಿಸಿದ ಶಾಂತಿ ಒಮ್ಮತ ಇದಾಗಿತ್ತು. ಇದು ಸಹಜವಾಗಿಯೇ ಮುರಿದು ಬಿತ್ತು. 2002ರಲ್ಲಿ ಮೌಂಟ್ ದೇವಸ್ಥಾನಕ್ಕೆ ಏರಿಯಲ್ ಶೆರಾನ್‌ರ ಭೇಟಿ ಶಾಂತಿಗೆ ಇದ್ದ ಅಲ್ಪ ಸ್ವಲ್ಪ ಅವಕಾಶಗಳನ್ನೂ ಇಲ್ಲವಾಗಿಸಿತು.

3.5 ಮಿಲಿಯನ್‌ಗೂ ಹೆಚ್ಚು ಪಾಲಸ್ತೈನಿಯರನ್ನರು ಆಕ್ರಮಿತ ಪ್ರದೇಶಗಳಲ್ಲಿ ನರಕ ಸದೃಶ ಬಾಳ್ವೆ ನಡೆಸಿದ್ದಾರೆ. ಶೇ.70ಕ್ಕೂ ಹೆಚ್ಚಿನ ಪ್ಯಾಲಸ್ತೈನಿಯನ್ನರು ಕಡು ಬಡವರು, ಆಕ್ರಮಿತ ಪ್ರದೇಶಗಳಲ್ಲಿ ಇಸ್ರೇಲ್‌ನ ಮಿಲಿಟರಿ ಆಡಳಿತ ಸೂತ್ರ ಹಿಡಿದಿದೆ. ಕರ್ಫ್ಯೂ, ರಸ್ತೆ ಮತ್ತು ಶಾಲೆಗಳನ್ನು ಮುಚ್ಚುವುದು ಮತ್ತು ಮನೆಗಳನ್ನು ಕೆಡುವುವುದೇ ಮುಂತಾದ ಸಾಮೂಹಿಕ ಶಿಕ್ಷೆಗಳಿಗೆ ಜನತೆಯನ್ನು ಒಳಪಡಿಸುತ್ತಿದೆ. ಅತೀವ ಕ್ರೂರ ವಿಧಾನಗಳಿಂದ ಸಹಸ್ರಾರು ಮಹಿಳೆಯರು ಮತ್ತು ಮಕ್ಕಳನ್ನು ಕೊಲ್ಲಲಾಗಿದೆ. ದುರದೃಷ್ಟಕರವಾಗಿ ಪಾಲಿಸ್ತೈನ್ ಮಿಲಿಟರಿ ಕೂಡ ಮುಗ್ಧ ಇಸ್ರೇಲಿಗಳನ್ನು ಹಿಂಸೆಗೆ ಒಳಪಡಿಸಿ ಪ್ರತಿಕ್ರಿಯಿಸುತ್ತಿದೆ. ಇಸ್ರೇಲ್ ಸಹಸ್ರಾರು ರಾಜಕೀಯ ಕಾರ್ಯಕರ್ತರನ್ನು ಇತರ ಅರಬ್ ರಾಷ್ಟ್ರಗಳಿಗೆ ಗಡಿಪಾರು ಮಾಡಿದೆ. ಸಹಸ್ರಾರು ಎಕರೆ ಪಾಲಸ್ತೈನ್ ಭೂಮಿಯನ್ನು ಆಕ್ರಮಿಸಿ ಹಲವಾರು ಕಾನೂನು ಬಾಹಿರ ಇಸ್ರೇಲಿ ವಸತಿ ಸಮುಚ್ಚಯಗಳು ತಲೆಯೆತ್ತಿವೆ. 1967ರಿಂದೀಚೆಗೆ 3 ಲಕ್ಷಕ್ಕೂ ಹೆಚ್ಚು ಪಾಲಸ್ತೈನಿಯನ್ನರನ್ನು ಅಕಾರಣವಾಗಿ ಬಂಧನದಲ್ಲಿಡಲಾಗಿದೆ ಮತ್ತು ನೂರಾರು ಜನರನ್ನು ಕೊಲ್ಲಲಾಗಿದೆ. ನಾಲ್ಕು ಮಿಲಿಯನ್ ಪಾಲಸ್ತೈನಿಯರನ್ನು ನಿರಾಶ್ರಿತರನ್ನಾಗಿಸಿದೆ. ಧೈರ್ಯದಿಂದ ಇಸ್ರೇಲ್‌ನಲ್ಲೇ ಉಳಿದಿರುವ ಪಾಲಸ್ತೈನಿಯರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ನಡೆಸಿಕೊಳ್ಳಲಾಗುತ್ತಿದೆ. ಶೇ.40 ರಷ್ಟು ಪಾಲಸ್ತೈನಿಯನ್ನರ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡು ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಬಳಸಿಕೊಳ್ಳ ಲಾಗಿದೆ. 1965ರವರೆಗೂ ಇಸ್ರೇಲಿನ ಅರಬ್‌ರಿಗೆ ಯಾವುದೇ ಕಾರ್ಮಿಕ ಸಂಘಟನೆಗಳ ಸದಸ್ಯರಾಗುವ ಹಕ್ಕನ್ನೂ ನಿರಾಕರಿಸಲಾಗಿತ್ತು.

ಈ ಕಾನೂನು ಬಾಹಿರ ಆಕ್ರಮಣ ನಿಲ್ಲಲೇಬೇಕು ಪ್ಯಾಲಸ್ತೈನ್ ಸಮಸ್ಯೆಗೆ ಪರಿಹಾರ ದೊರಕದೇ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ. ಇಸ್ರೇಲ್ ಉದ್ಧಟತನದ ಪ್ರತೀಕವಾಗಿದೆ. ವಿಶ್ವ ಸಂಸ್ಥೆಯ ಎಲ್ಲ ನಿರ್ಧಾರಗಳನ್ನೂ ಅದು ಕಡೆಗಣಿಸಿದೆ. ಪ್ಯಾಲಸ್ತೈನ್‌ನ ಸುತ್ತ ರಕ್ಷಣಾ ಗೋಡೆ ಕಟ್ಟಬಾರದೆಂದು ಅಂತರಾಷ್ಟ್ರೀಯ ನ್ಯಾಯಾಲಯ ನೀಡಿದ ತೀರ್ಪನ್ನು ಮೀರಿ ಅದು ಮುಂದುವರೆದಿದೆ. ಸಾಮ್ರಾಜ್ಯಶಾಹಿ ಅಮೇರಿಕಾ ಇಸ್ರೇಲ್‌ಗೆ ಕುಮ್ಮಕ್ಕು ನೀಡಿ ಎಲ್ಲ ಬೆಂಬಲ ನೀಡುತ್ತಿದೆ. ಇಡೀ ಅರಬ್ ರಾಷ್ಟ್ರಗಳ ಮೇಲೆ ಅದು ತನ್ಮೂಲಕ ಹಿಡಿತ ಸಾಧಿಸಲು ಹವಣಿಸುತ್ತಿದೆ. ಅಂತರಾಷ್ಟ್ರೀಯ ಸಮುದಾಯ ಇದಕ್ಕೆ ಮೌನ ಪ್ರೇಕ್ಷಕನಾಗಿರುವುದು ಸಾಧ್ಯವಿಲ್ಲ. ಜಗತ್ತಿನ ಎಲ್ಲ ಶಾಂತಿಪ್ರಿಯ ಪ್ರಗತಿಪರ ಜನತೆ ಪ್ಯಾಲಸ್ತೈನ್‌ನ ಪರವಾಗಿ ದನಿಯೇರಿಸ ಬೇಕಿದೆ. ○

ವಾರದ ಸಂದರ್ಶನ

ಜಾಕಿ ಡೆವೆ ಮ್ಯಾಥ್ಯೂಸ್ ಅವರು ಇಂಗ್ಲೆಂಡ್‌ನಲ್ಲಿ ಛಾಯಾಗ್ರಹಣ ಪತ್ರಿಕೋದ್ಯಮ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಯಾಗಿದ್ದಾರೆ. ಭಾರತದಲ್ಲಿ ಮಹಿಳೆಯರ ಸ್ಥಿತಿಗತಿ ಕುರಿತು ಅಧ್ಯಯನಕ್ಕಾಗಿ ಅವರು ಇಲ್ಲಿಗೆ ಬಂದಿದ್ದಾರೆ. ಬೆಂಗಳೂರು ಭೇಟಿಯ ಸಂದರ್ಭದಲ್ಲಿ ಅವರೊಂದಿಗೆ ಇಂಗ್ಲೆಂಡಿನ ಕೃಷಿ-ರೈತರ ಸ್ಥಿತಿಗತಿ ಬಗೆಗೆ ಕುರಿತು ನಡೆಸಿದ ಕಿರು ಸಂದರ್ಶನ ಇಲ್ಲಿದೆ.



ಜಾಕಿ ಡೆವೆ ಮ್ಯಾಥ್ಯೂಸ್ ಸಂದರ್ಶನ

ಸಂದರ್ಶಿಸಿದವರು: ಆರ್.ರಾಮಕೃಷ್ಣ

ಇಂಗ್ಲೆಂಡಿನಲ್ಲೂ ರೈತರ ಆತ್ಮಹತ್ಯೆ!

ಇಂಗ್ಲೆಂಡಿನಲ್ಲಿ ಕೃಷಿ ರಂಗ, ರೈತರ ಪರಿಸ್ಥಿತಿ ಹೇಗಿದೆ?

ಇಂಗ್ಲೆಂಡಿನಲ್ಲಿ ರೈತರ ಪರಿಸ್ಥಿತಿ ದಿನೇ ದಿನೇ ಕಷ್ಟಕರವಾಗುತ್ತಾ ಹೋಗುತ್ತಿದೆ. ರೈತರಾಗಿರುವುದು ಇಂಗ್ಲೆಂಡ್‌ನಲ್ಲಿ ತುಂಬಾ ಕಷ್ಟವಾಗುತ್ತಿದೆ. ನ್ಯೂಜಿಲೆಂಡ್ ದೇಶದಿಂದ ಭಾರಿ ಸಬ್ಸಿಡಿ ಪಡೆದ ಮಾಂಸ ಆಮದಾಗುತ್ತಿರುವುದರಿಂದ ಇಂಗ್ಲೆಂಡಿನ ವೇಲ್ಸ್ ಪ್ರದೇಶದ ರೈತರು ಕುರಿ ಸಾಗುವುದು, ಮಾಂಸ ಮಾರಿ ಹಣ ಸಂಪಾದಿಸುವುದಕ್ಕೆ ತುಂಬಾ ತೊಂದರೆಯಾಗಿದೆ.

ಹಿಂದೆ ಕೃಷಿಯಲ್ಲಿ ತೊಡಗುತ್ತಿದ್ದಷ್ಟು ಜನರು ಈಗ ತೊಡಗುತ್ತಿಲ್ಲ. ರೈತರ ಮಕ್ಕಳು, ತಂದೆ ತಾಯಿಗಳಿಗೆ ಕೃಷಿ ಕೆಲಸದಲ್ಲಿ ಸಹಾಯ ಮಾಡುವುದು ಕಡಿಮೆಯಾಗುತ್ತಿದೆ. ಅವರು ಕೃಷಿ ಕ್ಷೇತ್ರಕ್ಕೆ ಬರಲು ಇಷ್ಟಪಡುವುದಿಲ್ಲ. ಅವರು ಇತರ ಕ್ಷೇತ್ರಗಳ ಕಡೆ ಹೊರಳುತ್ತಿದ್ದಾರೆ. ಇದರಿಂದಾಗಿ ಕೃಷಿಕರಿಗೆ ಕೃಷಿ ಕೆಲಸ ಮತ್ತಷ್ಟು ಕಠಿಣವಾಗಿದೆ. ಯುವಜನರು ಬರುವುದಿಲ್ಲವಾದ್ದರಿಂದ ಈಗ ಕೃಷಿಯಲ್ಲಿ ತೊಡಗಿದ ರೈತರ ಸರಾಸರಿ ವಯಸ್ಸು 58 ವರ್ಷಕ್ಕೆ ಏರಿದೆ. ರೈತರು ಕೃಷಿ ಫಾರಂಗಳಲ್ಲಿ ಹಿಂದೆ ದುಡಿಯುತ್ತಿದ್ದುದಕ್ಕಿಂತ ಹೆಚ್ಚು ಸಮಯ ದುಡಿಯಬೇಕಿದೆ.

ಸರ್ಕಾರದ ಧೋರಣೆ ಹೇಗಿದೆ?

ಸರ್ಕಾರ ನಡೆಸುವವರು ಲಂಡನ್ ನಗರದಲ್ಲಿ ಕುಳಿತು ಕಾನೂನುಗಳನ್ನು ರಚಿಸುತ್ತಾರೆ. ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಲಂಡನ್‌ನಲ್ಲಿ ದೊಡ್ಡ ದೊಡ್ಡ ಕಾರುಗಳಿಗೆ ಸರ್ಕಾರ ತೆರಿಗೆ ಹೆಚ್ಚಿಸಿದೆ. ದೊಡ್ಡ ಕಾರುಗಳು ಹೆಚ್ಚು ಪರಿಸರ ಮಾಲಿನ್ಯ ಉಂಟು ಮಾಡುವುದರಿಂದ ಅದನ್ನು ನಿಯಂತ್ರಿಸಲು ಈ ತೆರಿಗೆ. ಆದರೆ ಇದೇ ತೆರಿಗೆಯನ್ನು ಗ್ರಾಮೀಣ ಪ್ರದೇಶಕ್ಕೂ ಅನ್ವಯಿಸಿರುವುದರಿಂದ ತುಂಬಾ ತೊಂದರೆಯಾಗಿದೆ. ಏಕೆಂದರೆ ರೈತರಿಗೆ ದೊಡ್ಡ ಕಾರುಗಳು ತಮ್ಮ ಕೃಷಿ ಚಟುವಟಿಕೆಗಳಿಗೆ ಅಗತ್ಯವಾಗಿದೆ.

ಅದೇ ರೀತಿ ಇಂದು ಹಸು ಸಾಕಣೆಯೂ ದುಬಾರಿಯಾಗಿದೆ. ಹಾಲು ಕರೆಯುವುದು. ಅದನ್ನು ಮಾರುವುದು ಕಷ್ಟವಾಗುತ್ತಾ ರೈತರು ಹಣ ಕಳೆದುಕೊಳ್ಳುವಂತಾಗಿದೆ. ಹಾಲಿನ ಬೆಲೆ ಕಡಿಮೆಯಾಗಿದೆ.

ಇಂಗ್ಲೆಂಡಿನಲ್ಲಿ ಪ್ರಾಣಿಗಳಿಗೂ ಪಾಸ್‌ಪೋರ್ಟ್ ಮಾಡಿಸಬೇಕಿದೆ. ಇಲ್ಲದಿದ್ದರೆ ಅದನ್ನು ಮಾರಾಟ ಮಾಡಲು ಸಾಧ್ಯವಿಲ್ಲ. ಪಾಸ್‌ಪೋರ್ಟ್ ವ್ಯವಹಾರ ದುಬಾರಿಯಾಗಿದೆ.

ಪಾಸ್‌ಪೋರ್ಟ್ ಯಾಕೆ ಮಾಡಿಸಬೇಕು?

ಇಂಗ್ಲೆಂಡ್‌ನಲ್ಲಿ ಹಸುಗಳಿಗೆ ಹಲವು ಸಾಂಕ್ರಾಮಿಕ ರೋಗಗಳು ಹರಡುವ ಭಯವಿರುವುದರಿಂದ ಅದು ಹರಡದಂತೆ ತಡೆಯಲು ಸರ್ಕಾರ ಹಸುಗಳು, ಪ್ರಾಣಿಗಳು ಯಾವ ಪ್ರದೇಶದವು, ಎಲ್ಲಿಗೆ ಒಯ್ಯಲಾಗುತ್ತದೆ ಎಲ್ಲವನ್ನೂ ಪರಿಶೀಲಿಸುತ್ತದೆ.

ಸರ್ಕಾರ ಕೃಷಿ ಫಾರಂಗಳ ತಪಾಸಣೆ, ಪರಿಶೀಲನೆಯನ್ನು ಬಿಗಿಗೊಳಿಸಿದೆ. ಈ ಫಾರಂಗಳಲ್ಲಿ ಪರಿಸರ ಮಾಲಿನ್ಯದ ಕುರಿತು ಇನ್ಸ್‌ಪೆಕ್ಟರ್‌ಗಳು ತೀವ್ರ ತನಿಖೆ -ಪರಿಶೀಲನೆ ನಡೆಸುತ್ತಾರೆ. ಸಣ್ಣಪುಟ್ಟ ಸಮಸ್ಯೆಗಳಿಗೂ ರೈತರಿಗೆ ದೊಡ್ಡ ಪ್ರಮಾಣದ ದಂಡ ವಿಧಿಸಲಾಗುತ್ತದೆ. ಇಂತಹ ಫಾರಂಗಳಿಗೆ ಸರ್ಕಾರ ಕೃಷಿಗೆ ನೀಡುವ ಸಹಾಯಧನ (ಸಬ್ಸಿಡಿ)ಯನ್ನು ತಡೆ ಹಿಡಿಯಲಾಗುತ್ತದೆ. ಪರಿಸರವಾದಿಗಳ ಒತ್ತಡಗಳಿಂದಾಗಿ ಇದೆಲ್ಲಾ ಆಗುತ್ತಿದೆ.

ಇಂತಹ ಎಲ್ಲ ಸಮಸ್ಯೆಗಳಿಂದ ತೊಂದರೆಗೊಳಗಾಗಿರುವ ರೈತರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಎಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನನ್ನ ಬಳಿ ಅಷ್ಟೆಲ್ಲಾ ನಿಖರವಾದ ಮಾಹಿತಿಗಳಿಲ್ಲ. ನಾನೇನು ಈ ವಿಷಯ ಬಗೆಗೆ ತಜ್ಞೆ ಅಲ್ಲ. ಇಂಗ್ಲೆಂಡ್ ರೈತರು ಬಿಕ್ಕಟ್ಟಿನಲ್ಲಿದ್ದಾರೆ. ಅದಂತೂ ಸ್ಪಷ್ಟ. ಇಂಗ್ಲೆಂಡಿನಲ್ಲಿ ತಲೆ ಎತ್ತಿರುವ ದೊಡ್ಡ ಸೂಪರ್ ಮಾರ್ಕೆಟ್‌ಗಳಿಂದಲೂ ರೈತರಿಗೆ ತೊಂದರೆಯಾಗಿದೆ. ಟೆಸ್ಕೋ, ಅಸ್ದಾ ಮುಂತಾದ ದೊಡ್ಡ ದೊಡ್ಡ ಕಂಪನಿಗಳಿಂದಾಗಿ ಗ್ರಾಮೀಣ ಪ್ರದೇಶದ ಅಂಗಡಿಗಳು ಸಣ್ಣ ವ್ಯಾಪಾರಿ ಮಳಿಗೆಗಳು ಮುಚ್ಚಿ ಹೋಗುತ್ತಿವೆ.

ಇದಲ್ಲದೆ ಈ ದೊಡ್ಡ ದೊಡ್ಡ ಕಂಪನಿಗಳ ಪೈಪೋಟಿ, ಬೆಲೆ ಸಮರದಿಂದ ಸರಕುಗಳ ಬೆಲೆ ಅಗ್ಗವಾಗಿ ರೈತರಿಗೆ ತೊಂದರೆಯಾಗಿದೆ. ಇವರು ಗುಣಮಟ್ಟದ ಬಗ್ಗೆ ಹೆಚ್ಚು ಗಮನ ಕೊಡುವುದಿಲ್ಲ.



ಬಂದೈತಿಂಥ ಕಾಲ, ತಿನ್ನಕ್ಕಿಲ್ಲ ಕೂಳ

ಉದಾರೀಕರಣದ ಒಂದೊಂದು ಕ್ರಮವೂ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಶ್ರೀಮಂತರ ಅನುಕೂಲ ಹೆಚ್ಚಿಸುವ ಕ್ರಮಗಳಾಗಿವೆ. ಹಾಗೆಯೇ ಶ್ರೀಮಂತರ ಸಂಖ್ಯೆ ಕಡಿಮೆಗೊಳಿಸಿ ಬಡವರ ಸಂಖ್ಯೆ ಹೆಚ್ಚಿಸುವ ಕ್ರಮಗಳೂ ಆಗಿವೆ.


ಐಟಿ ಬಿಟಿಗಳ ಈ ಕಾಲದಲ್ಲಿ ಶ್ರೀಮಂತಿಕೆಯ ಹೊಳೆಯೇ ಹರಿದಿದೆ ಎಂದು ಉದಾರೀಕರಣವಾದಿಗಳು ಹೇಳುತ್ತಾರೆ. ಇದು ಕೆಲವೇ ಕೆಲವರಿಗೆ ನಿಜವಿರಬಹುದು. ಆದರೆ ಬಹುಸಂಖ್ಯೆಯಲ್ಲಿರುವ ಬಡವ/ಜನಸಾಮಾನ್ಯರಿಗೆ ಕಣ್ಣೀರಿನ ಹೊಳೆ ಮಾತ್ರ ಹರಿಯುತ್ತಿದೆ. ಮಾಧ್ಯಮಗಳಲ್ಲಿ ಈ ಕೆಲವರ ಶ್ರೀಮಂತಿಕೆಯನ್ನೇ ಬಿಂಬಿಸಿ ಹೆಚ್ಚಿನ ಉದಾರೀಕರಣವನ್ನು ಸರ್ಕಾರಗಳು ಮಾಡುತ್ತಿವೆ.

ಕೇಂದ್ರ ಸರ್ಕಾರ ಪಡಿತರ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ನೀಡುವ ಅನುದಾನದ ಪ್ರಮಾಣವನ್ನು ಇಳಿಸಿದೆ. ಬದಲಾದ ಪರಿಸ್ಥಿತಿಯಲ್ಲಿ ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ರೂಢಿಸಿಕೊಂಡು ಈ ಕೊರತೆಯನ್ನು ಭರಿಸಿಕೊಳ್ಳಬೇಕೆಂಬುದು ಕೇಂದ್ರದ ವಾದ. ಬಹುತೇಕ ಸಂಪನ್ಮೂಲ ಗಳನ್ನು ತನ್ನ ನೌಕರರ ಸಂಬಳ ಭತ್ಯೆಗಳಿಗೆಂದೇ ತೆಗೆದಿರಿಸಬೇಕಾದ ಸ್ಥಿತಿಯಿರುವ ರಾಜ್ಯ ಸರ್ಕಾರಗಳು ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವಲ್ಲಿ ಹಲವು ಮಿತಿಗಳಿವೆ. ಇದರ ಅರ್ಥವೇನೆಂದರೆ ಬಡತನ ರೇಖೆಗಿಂತ ಕೆಳಗಿರುವ ಜನ ಹೊತ್ತಿನ ಕೂಳಿಗಾಗಿಯೂ ಪರದಾಡಬೇಕಾಗುತ್ತದೆ ಎಂದು.

ಐಟಿ-ಬಿಟಿಗಳ ಅಬ್ಬರ ಜೋರಾಗಿರುವ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲೇ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಜಾಸ್ತಿಯಿದೆ ಎಂಬುದು ಇನ್ನೊಂದು ಮುಖ್ಯ ವಿಷಯ.

ಉದಾರೀಕರಣ ಇನ್ನೂ ಹಲವು ರೀತಿಯಲ್ಲಿ ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ. ಉದಾಹರಣೆಗೆ ಪೌಷ್ಟಿಕಾಂಶದ ಕೊರತೆ ಇರುವುದು ಬಡವರಿಗೆ ದ್ವಿದಳ ಧಾನ್ಯಗಳ ಬೆಲೆಗಳು ತೀವ್ರ ಏರಿರುವುದರಿಂದ (ಇದು ಮುಂಗಡ ವ್ಯಾಪಾರ Futher Trade ದ ಫಲದಿಂದಾಗಿ) ಬಡವರು ಇವನ್ನು ತಿನ್ನುವಂತಿಲ್ಲ. ದೇಹಕ್ಕೆ ಅವಶ್ಯವಾದ ಹಲವು ಪೌಷ್ಟಿಕಾಂಶಗಳು ದ್ವಿದಳ ಧಾನ್ಯಗಳಲ್ಲಿ ಸಿಗುತ್ತವೆ. ಆದರೆ ಬಡವರಿಗೆ ಇವುಗಳ ಕೈ ಗೆಟುಕದ ಈ ಸಾಮಾನುಗಳು ಬೇಳೆ ಕಾಳುಗಳಿಲ್ಲದ ಬರೀ ಅನ್ನ/ ಮುದ್ದೆ/ರೊಟ್ಟಿಯನ್ನು ಬಡ ಜನತೆ ತಿನ್ನಬೇಕು. ಇದೇ ರೀತಿ ಸೊಪ್ಪು ತರಕಾರಿಗಳು ಇವುಗಳ ಬೆಲೆಗಳೂ ಗಗನಕ್ಕೇರಿವೆ. ಇವುಗಳನ್ನು ಬೆಳೆಯುವ ರೀತಿಗಳನ್ನೇ ಬದಲಾಯಿಸಿರುವುದರಿಂದ ಇವುಗಳಲ್ಲಿನ ಪೌಷ್ಟಿಕಾಂಶಗಳಲ್ಲಿ ಕೊರತೆಯಾಗಿ ವಿಷಯುಕ್ತ ರಸಾಯನಿಕಗಳು ಹೆಚ್ಚಳವಾಗಿವೆ. ಉದಾಹರಣೆಗೆ ರಸಗೊಬ್ಬರಗಳಲ್ಲಿ ಸಸಾರಜನಕ ಮಾತ್ರ ಕಡಿಮೆ ದರದಲ್ಲಿ ಸಿಗುವುದರಿಂದ ರೈತರು ಇದನ್ನೇ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಇದು ತರಕಾರಿಗಳ ಅಂತಃಸತ್ವವನ್ನೇ ಕಡಿಮೆ ಮಾಡುವದಲ್ಲದೆ ಭೂಮಿಯ ಫಲವತ್ತತೆಯನ್ನು ಏರುಪೇರುಗೊಳಿಸುತ್ತದೆ. ರೋಗ/ಕೀಟಗಳ ಬಾಧೆ ಇದರಿಂದಾಗಿ ಹೆಚ್ಚುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕೀಟ ನಾಶಕಗಳನ್ನು ಬಳಸಲಾಗುತ್ತದೆ.

ಹೆಚ್ಚು ಲಾಭ ಬರುವುದರಿಂದ ರೈತರು ದವಸ ಧಾನ್ಯಗಳಿಗೆ ಬದಲಾಗಿ ತೋಟಗಾರಿಕಾ ಬೆಳೆಗಳತ್ತ ಹೆಚ್ಚಿನ ಒಲವು ತೋರಿಸುತ್ತಿದ್ದಾರೆ.



ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ನಾವು ಆಹಾರದಲ್ಲಿ ಪೂರ್ತಿ ಸ್ವಾವಲಂಬನೆ ಹೊಂದಿಲ್ಲ ಎನ್ನುವುದು ಒಂದೆಡೆಯಾದರೆ ಈಗ ಇರುವ ಸ್ವಾವಲಂಬನೆಯನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ.

ತೋಟಗಾರಿಕಾ ಬೆಳೆಗಳ ಉತ್ಪನ್ನಗಳು ರಫ್ತಿಗಾಗಿ ಮತ್ತು ನಮ್ಮ ಶ್ರೀಮಂತರಿಗಾಗಿ. ಬಡ ಜನ ಸಾಮಾನ್ಯರ ಗತಿ? ಕೇಳಬೇಡಿ.

ಹೀಗೆ ಉದಾರೀಕರಣದ ಒಂದೊಂದು ಕ್ರಮವೂ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಶ್ರೀಮಂತರ ಅನುಕೂಲ ಹೆಚ್ಚಿಸುವ ಕ್ರಮಗಳಾಗಿವೆ. ಹಾಗೆಯೇ ಶ್ರೀಮಂತರ ಸಂಖ್ಯೆ ಕಡಿಮೆಗೊಳಿಸಿ ಬಡವರ ಸಂಖ್ಯೆ ಹೆಚ್ಚಿಸುವ ಕ್ರಮಗಳೂ ಆಗಿವೆ. ಇಂತಹ ಕಾಲದಲ್ಲಿ ಬಡವರಿಗೆಲ್ಲಿ ಕೂಳು?



ಸದಭಿರುಚಿಯ ಚಿತ್ರ 'ಜನಪದ'

ಓದು ಬರಹ ಗೊತ್ತಿಲ್ಲದ ಯುವಕ ಜನಪದವನ್ನು ಕಾಯಕ ಮಾಡಿಕೊಂಡು ಹಳ್ಳಿಯ ಜನರ ನೋವು ನಲಿವುಗಳಿಗೆ ಜನಪದ ಹಾಡುಗಳ ಮೂಲಕ ಸ್ಪಂದಿಸುವುದೇ ಜನಪದ ಚಿತ್ರದ ಪ್ರಮುಖ ಅಂಶವಾಗಿದೆ.

ಹುಟ್ಟಿನಿಂದ ತಂದೆ ತಾಯಿಗಳನ್ನು ಕಳೆದುಕೊಂಡ ಅನಾಥ ಹಾಗೂ ಬಡವ ಚಿತ್ರದ ನಾಯಕ ಚಂದ್ರು (ರಾಘವ್) ಹಳ್ಳಿಯ ಜನ ಮಳೆ ಬೆಳೆ ಇಲ್ಲದೆ ಚಿಂತಿಸುತ್ತಿರುವಾಗ ಒಂದು ಜನಪದ ಹಾಡನ್ನು ಹಾಡುತ್ತಾನೆ. ಕಾಕತಾಳೀಯವೋ ಎಂಬಂತೆ ತಕ್ಷಣ ಮಳೆ ಬರುತ್ತದೆ. ಹಳ್ಳಿಯ ಜನರೆಲ್ಲಾ ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾರೆ.

ಆತ ದಿನೇ ದಿನೇ ಜನಪದದಲ್ಲಿ ಪ್ರಸಿದ್ಧನಾಗುತ್ತಾ ಉತ್ತಮ ಜನಪದ ಹಾಡುಗಾರನಾಗಿ ಹಳ್ಳಿಯ ಜನರ ಮನಗೆಲ್ಲುತ್ತಾನೆ. ಸರ್ಕಾರ ಚಂದ್ರುವಿಗೆ 'ಜನಪದ ರತ್ನ ಪ್ರಶಸ್ತಿ' ನೀಡಿ ಗೌರವಿಸುತ್ತದೆ. ತಾನು ನೆಲೆಸಿದ ಕಾಂತರಾಜಪುರ ಎಂಬ ಹಳ್ಳಿಯಲ್ಲಿ ಶಾಲೆ ಬಿದ್ದು ಎಷ್ಟೋ ವರ್ಷಗಳಾಗಿರುತ್ತದೆ. ಇದನ್ನು ಅರಿತ ಚಂದ್ರು ತನಗೆ ಬಂದ ಪ್ರಶಸ್ತಿ ಹಾಗೂ ಹಳ್ಳಿಯವರು ನೀಡಿದ ಬಹುಮಾನವನ್ನೆಲ್ಲಾ ಶಾಲೆ ನಿರ್ಮಿಸಲು ನೀಡುತ್ತಾನೆ.

ಮನೆ ಕೆಲಸಕ್ಕೆಂದು ಕರೆದುಕೊಂಡು ಹೋದ ಗೌರಿ ಎಂಬಾಕೆಯನ್ನು ದುಷ್ಟರು ಬೆನ್ನಟ್ಟಿ ಬರುತ್ತಿರುವಾಗ ಎದುರಾದ ನಾಯಕ ದುಷ್ಟರಿಂದ ಅವಳನ್ನು ರಕ್ಷಿಸುತ್ತಾನೆ. ಅವಳು ಕೂಡ ಅನಾಥಳಾದ್ದರಿಂದ ಅವಳನ್ನು ತಂಗಿಯೆಂದು ಆಶ್ರಯ ನೀಡುತ್ತಾನೆ.

ಜನಪದ ಹಾಡುಗಾರನ ಕುರಿತು ಪುಸ್ತಕ ಬರೆಯಬೇಕೆಂದು ಚಿತ್ರದ ನಾಯಕಿ ರಾಘವ್ವ (ರಾಧಿಕಾ) ಪಟ್ಟಣದಿಂದ ಹಳ್ಳಿಗೆ ಬರುತ್ತಾಳೆ. ಚಂದ್ರುವಿನ ಹಾಡುಗಳನ್ನು ಕೇಳಿದ ರಾಘವ್ವಳ ಮನದಲ್ಲಿ ಒಳಗೊಳಗೆ ಅವನ ಬಗ್ಗೆ ಪ್ರೀತಿ ಮೂಡುತ್ತದೆ.

ತಂಗಿಯ ಮದುವೆ ನಿಶ್ಚಯವಾಗಿರುವಾಗ ಮದುವೆ ಗಂಡು ಮಾರಾ (ಕರಿಬಸವಯ್ಯನ) ಮಾತು ಕೇಳಿ ಗೌರಿಯನ್ನು ಮದುವೆ ಯಾಗುವುದಿಲ್ಲ ವೆಂದು ತಿರಸ್ಕರಿಸುತ್ತಾನೆ. ಇದರಿಂದ ಅವಮಾನಿತಳಾದ ಗೌರಿ ನಾಗರಹುತ್ತಕ್ಕೆ ಕೈಹಾಕಿದಾಗ ಹಾವು ಕಡಿಯುತ್ತದೆ. ಆಗ ಶಾಲಾಶಿಕ್ಷಕನೊಬ್ಬ ಅವಳ ಕೈಯಲ್ಲಿನ ಹಾವಿನ ವಿಷವನ್ನು ತೆಗೆಯುತ್ತಾನೆ. ಕೊನೆಗೆ ಶಿಕ್ಷಕ ಗೌರಿಯನ್ನು ಮದುವೆಯಾಗುತ್ತಾನೆ.

ಹಳ್ಳಿಯ ಪಟೇಲನ ಮಾತನ್ನು ತಿರಸ್ಕರಿಸಿದ್ದಕ್ಕಾಗಿ ಚಂದ್ರುವಿಗೆ ಹಳ್ಳಿಯಿಂದ



ಹಾಗೂ ಜನಪದ ಗೀತೆ ಹಾಡುವುದಕ್ಕೆ 3 ತಿಂಗಳ ಬಹಿಷ್ಕಾರ ಹಾಕಲಾಗುತ್ತದೆ. ಚಂದ್ರು ಜೋಳಿಗೆಯನ್ನು ಹೊತ್ತು ಊರುಬಿಟ್ಟು ನಡೆಯುತ್ತಾನೆ.

ಪಟೇಲ ಹಳ್ಳಿಯಲ್ಲಿ ಜನಪದ ಕಲಾವಿದರನ್ನೆಲ್ಲಾ ಸೇರಿಸಿ ಜನಪದ ಉತ್ಸವ ನಡೆಸಬೇಕೆಂದು ತೀರ್ಮಾನಿಸುತ್ತಾನೆ. ನಾಯ[illegible] ರಾಘವ್ವ ಜನಪದ ಕಲಾವಿದರನ್ನೆಲ್ಲಾ ಮನವೊಲಿಸಿ ಚಂದ್ರುವಿನ ಬೆಂಬಲಕ್ಕೆ ನಿಲ್ಲುವ[illegible] ಮಾಡುತ್ತಾಳೆ. ಕೊನೆಗೆ ಚಂದ್ರು (ನಾಯಕ) ಹಾಗೂ ಕಲಾವಿದರೆಲ್ಲರೂ ಒಟ್ಟುಗೂಡಿ ಬಹಿಷ್ಕಾರವನ್ನು ಉಲ್ಲಂಘಿಸುತ್ತಾರೆ. ಕೊನೆಗೆ ಕಲಾವಿದರೆಲ್ಲರ ಸಮ್ಮುಖದಲ್ಲಿ ಚಂದ್ರು ಹಾಗ[illegible] ರಾಘವ್ವ ಪರಸ್ಪರ ಮದುವೆಯಾಗುತ್ತಾರೆ.

ಚಿತ್ರದಲ್ಲಿ ಜನಪದ ಕೃತಿ ಕಲಾವಿದರ [illegible] ಇವನ್ನು ಸೊಗಸಾಗಿ ಚಿತ್ರಿಸಲಾಗಿದೆ. ಹಾಡುಗಳು ಜನಪದ ಶೈಲಿಯಲ್ಲಿ ತುಂಬಾ [illegible] ಸೊಗಸಾಗಿ ಮೂಡಿಬಂದಿವೆ. ಸಾಹಿತಿ ಬರಗೂರು ರಾಮಚಂದ್ರಪ್ಪನವರ ನಿರ್ದೇಶ[illegible] ಚೆನ್ನಾಗಿದೆ.

ಛಾಯಾಗ್ರಾಹಕ ನಾಗರಾಜ ಅವಧಾನಿ[illegible] ಹಳ್ಳಿಯ ಚಿತ್ರಣವನ್ನು ತುಂಬಾ ಚೆನ್ನಾಗಿ ಸೆರೆಹಿಡಿದಿದ್ದಾರೆ. ಚಿತ್ರದಲ್ಲಿ ಹಂಸಲೇಖ[illegible] ಉತ್ತಮ ಸಂಗೀತವಿದೆ. ಕರಿಬಸವಯ್ಯ, ಸುಂದರರಾಜ್, ಶರತ್ ಲೋಹಿತಾಶ್ವ ಇನ್ನುಳಿದ ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಒಟ್ಟಾರೆ 'ಜನಪದ' ಚಿತ್ರ ಮನೆಮಂದಿಯೆಲ್ಲಾ ಕುಳಿತು ನೋಡಬಹುದಾಗಿದೆ.



ಕಾಂಚಾಣದ ಬೆನ್ನೇರಿದ ಕೇಬಲ್ ಉದ್ಯಮ

ನೂರೆಂಟು ಖಾಸಗಿ ಚಾನೆಲ್‌ಗಳು, ಹತ್ತಾರು ಆಕರ್ಷಣೆ, ಜಾಹಿರಾತು, ಹಣದ ಹೊಳೆ, ಈ ನಡುವೆ ಬೆಳೆದ ಕೇಬಲ್ ಉದ್ಯಮ ಲಾಬಿಯಾಗಿ ಈಗ ಮಾಫಿಯಾ ಆಗಿ ಬಲಿತು ನಿಂತಿದೆ.



ಉದ್ಯಮದಿಂದ ಲಾಬಿಯತ್ತ

ಸುಮಾರು 2 ದಶಕದ ಹಿಂದಿನ ಮಾತು. ಆಗ ವಿದ್ಯುನ್ಮಾನ ಮಾಧ್ಯಮ ಇಷ್ಟೊಂದು ಬೃಹದಾಕಾರವಾಗಿ ಬೆಳೆದಿರಲಿಲ್ಲ. ಎಲ್ಲರಿಗೂ ದೂರದರ್ಶನವೇ ಅಚ್ಚುಮೆಚ್ಚು. ಅದರ ಕಾರ್ಯಕ್ರಮ, ವಾರ್ತೆ ಎಲ್ಲವೂ ಅಚ್ಚುಮೆಚ್ಚಾಗಿತ್ತು. ವೀಕ್ಷಕರಿಗೂ ಪ್ರಿಯವಾಗಿತ್ತು.

ಈ ಮಾಧ್ಯಮ ಕ್ಷೇತ್ರಕ್ಕೆ ಖಾಸಗಿ ಚಾನೆಲ್‌ಗಳ ಪ್ರವೇಶ ಎಲ್ಲವನ್ನೂ ಬದಲಾಯಿಸಿತು.

ಖಾಸಗಿ ಪ್ರವೇಶ :

ಸಿನೆಮಾ ಮೂಲಕ ಪ್ರೇಕ್ಷಕರಿಗೆ ಖಾಸಗಿ ಚಾನೆಲ್ ಹುಚ್ಚು ಹಿಡಿಸಿತು. ಒಂದೊಂದಾಗಿ ಚಾನೆಲ್‌ಗಳು ಹೆಚ್ಚಿಕೊಂಡವು. ಮೊದಲು ಸ್ಟಾರ್, ಆಮೇಲೆ ಜಿ, ಮತ್ತೆ ಇನ್ನೊಂದು, ಮತ್ತೊಂದು ಹೀಗೆ ನೂರಾರು ಚಾನೆಲ್. ಅದಕ್ಕೆ ಅಪರದ್ದೇ ಆದ ವೀಕ್ಷಕರು.

ಗರಿಗೆದರಿದ ಉದ್ಯಮ :

ಇದರೊಂದಿಗೆ ಇನ್ನೊಂದು ಉದ್ಯಮವೂ ಗರಿಗೆದರಿತು. ಅದೇ ಕೇಬಲ್ ಉದ್ಯಮ. ಬಣ್ಣದ ಟಿವಿ ಒಂದು ಕಾಲದಲ್ಲಿ ಪ್ರತಿಷ್ಠೆ ಪ್ರಶ್ನೆಯಾಗಿತ್ತು. ಅದೇ ರೀತಿ ಕೇಬಲ್ ಹಾಕಿಕೊಂಡವರೇ ಪ್ರತಿಷ್ಠಿತರು ಎಂಬುದು ಸಾಮಾನ್ಯರಲ್ಲಿ ನಂಬಿಕೆ ಅಷ್ಟು ಗಾಢವಾಗಿತ್ತು.

ಹಾಗಾಗಿ ಮನೆ ಮನೆಗಳಿಗೆ ಕೇಬಲ್ ಬಂತು ಒಂದು ಉದ್ಯಮವಾಗಿ ಬೆಳೆಯಿತು. ಈಗ ಅದೊಂದು ಮಾಫಿಯ ಆಗಿಬಿಟ್ಟಿದೆ.

ಕೇಬಲ್ ಒಂದು ಉದ್ಯಮವಾಗಿ :

ಒಂದು ಮನೆಗೆ ಕೇಬಲ್ ಬೇಕಾದರೆ 3ರಿಂದ 4 ಸಾವಿರ ಕೊಡಬೇಕು. ಅಷ್ಟು ಡಿಮ್ಯಾಂಡ್ ಇತ್ತು. ಮಧ್ಯದಲ್ಲಿ ಬೇಡ ಅಂದರೆ ಅವರಿಗೆ ಹಣ ವಾಪಸ್ ಇಲ್ಲ. ಹೀಗೆ ಮೊದಮೊದಲು 10ರಿಂದ 15 ಮನೆಗಳಿಗೆ ಹಾಕುವವರೆಗೆ ಕೇಬಲ್ ವಹಿವಾಟು ಕಷ್ಟವೇ ಆಗಿತ್ತು.

ಯಾವಾಗ ಖಾಸಗಿ ಚಾನೆಲ್‌ಗಳ ಭರಾಟೆ ಆರಂಭವಾಯಿತೋ, ಆಗಲೇ ಕೇಬಲ್ ಉದ್ಯಮವೂ ಚಿಗುರಿಕೊಂಡಿತು. ಬೃಹದಾಕಾರವಾಗಿ ಬೆಳೆಯುತ್ತ ಬಂತು.

ಲಾಬಿಯಾಗಿ ಬದಲಾದ ಉದ್ಯಮ :

ಜನಗಳು ಕೇಬಲ್‌ಗೆ ಮಾರು ಹೋದಾಗಲೇ ಕೇಬಲ್‌ನವರು ಒಂದಿಷ್ಟು ಕಾಸು ನೋಡುವಂತಾಯಿತು. ಈ ಹಂತದಲ್ಲಿ ಚಾನೆಲ್‌ಗಳನ್ನು ಒಂದು ಕಾಲಿನಲ್ಲಿ ನಿಲ್ಲುವಷ್ಟರ ಮಟ್ಟಿಗೆ ಉದ್ಯಮ ಬೆಳೆಯಿತು. ಏಕೆಂದರೆ ಈ ಹಂತದಲ್ಲಿ ಕೇಬಲ್‌ನವರೂ ಸಂಘಟಿತರಾಗಿದ್ದರು. ಹಾಗಾಗಿ ಉದ್ಯಮ ಲಾಬಿಯಾಗಿ ಬದಲಾಯಿತು.



ಪೇ ಚಾನೆಲ್‌ಗಳ ಸಮರ :

ಒಂದು ಕಾಲದಲ್ಲಿ ವೀಕ್ಷಕರಿಗೆ ಮನರಂಜನೆ ಚಾನೆಲ್‌ನ ಮುಖ್ಯ ಉದ್ದೇಶವಾಗಿತ್ತು. ಬಳಿಕ ಜನರನ್ನು ಆಕರ್ಷಿಸುವುದರ ಜೊತೆ ಜಾಹಿರಾತು ಸಂಗ್ರಹ ಆದ್ಯತೆ ಆಯಿತು. ನಂತರ ಇನ್ನೊಂದು ಘಟ್ಟ ಅಂದರೆ, ವೀಕ್ಷಕರಿಗೆ ಹಣ ಪಡೆದು ಮನರಂಜನೆ ನೀಡುವುದು. ಇದುವೇ ಪೇ ಚಾನೆಲ್ ಕಲ್ಪನೆ. ಅಂದರೆ, ಈ ಚಾನೆಲ್ ವೀಕ್ಷಣೆಗೆ ಗ್ರಾಹಕ 'ಚಾನೆಲ್'ಗೆ ಕೇಬಲ್ ಉದ್ಯಮಗಳ ಮೂಲಕ ಹಣ ಕೊಡಬೇಕು.

ಲಾಬಿಗಳ ಲೋಕದಲ್ಲಿ

ಒಂದು ಸಂಘಟಿತ ಕೇಬಲ್ ಜಾಲ ಇಡೀ ನಗರವನ್ನೇ ವ್ಯಾಪಿಸುತ್ತದೆ. ಅವರು ಹಾಕುವ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ)ಗೆ 200ಕ್ಕೂ ಹೆಚ್ಚು ಚಾನೆಲ್ ನೀಡುವ ಸಾಮರ್ಥ್ಯ ಹೊಂದಿದೆ. ಮೊದಲ 28 ಚಾನೆಲ್ ಗುಣಮಟ್ಟದಲ್ಲಿ ಚೆನ್ನಾಗಿರುತ್ತದೆ. ಬಳಿಕದ್ದು ಸಾಧಾರಣ. ಇನ್ನೂ ಕೊನೆಕೊನೆಯಲ್ಲಿ ಕಳಪೆ ಗುಣಮಟ್ಟದ್ದು.

ಹಾಗಾಗಿ ಬಹುತೇ[illegible] ಚಾನೆಲ್‌ಗಳು ಪ್ರೈಂ ಬ್ಯಾಂಡ್‌ನ[illegible] ಅಂದರೆ ಮೊದ ಮೊದ[illegible] ಬ್ಯಾಂಡ್‌ನಲ್ಲೇ ತಮ[illegible] ಚಾನೆಲ್‌ಗಳನ್ನು ನೀಡಬೇಕೆಂ[illegible] ಕೇಬಲ್‌ಗಳಿಗೆ ದುಂಬಾ[illegible] ಬಿದ್ದವು. ಕೇಬಲ್‌ಗಳವರ[illegible] ಇದನ್ನು ತಮ್ಮ ದಾಳವಾ[illegible] ಬಳಸಿದರು.

Prime Bandನಲ್ಲಿ ನೀಡಬೇಕಿದ್ದರೆ ಇ[illegible] ಹಣ ಕೊಡಿ ಎಂಬ ಡಿಮ್ಯಾಂಡ್ ಹಾಕ[illegible] ಆರಂಭಿಸಿದರು. ಕೇಬಲ್ ಉದ್ಯಮಿಗಳು. ಒಂ[illegible] ಕಡೆ ಗ್ರಾಹಕರಿಂದ, ಇನ್ನೊಂದೆಡೆ ಚಾನೆಲ್‌ಗಳಿ[illegible] ಹಣದ ಹೊಳೆಯೋ ಹರಿಯಲಾರಂಭಿಸಿತು.

2ರಿಂದ 3 ವರ್ಷಗಳ ಮೊದಲು ಉದ[illegible] ಟಿವಿ ಚಾನೆಲ್ ಪೇ ಆದಾಗ ಉದ್ಯಮದಲ್ಲಿ ಒಂ[illegible] ತಲ್ಲಣ ಉಂಟಾಗಿತ್ತು. ರಾಜ್ಯದ ಎಲ್ಲಾ [illegible] ಪ್ರತಿಭಟನೆಯ ಮಹಾಪೂರವೇ ಹರಿದುಬಂ[illegible] ಬಹುತೇಕ ಜನ ಈ ಪ್ರಕ್ರಿಯೆಯಿಂ[illegible] ಆತಂಕಕ್ಕೊಳಗಾದರು. ಆದಾಗಲೇ ಸ್ಟಾರ್, [illegible] ಸಂಸ್ಥೆಗಳು ಪೇ ಆಗಿದ್ದವು.

ಬದಲಾದ ಟ್ರೆಂಡ್ :

ಈಗ ಕೇಬಲ್ ಉದ್ಯಮದ ಟ್ರೆಂ[illegible] ಬದಲಾಗಿದೆ. ಹೊಸ ಚಾನೆಲ್ ಬಂತು ಅಂ[illegible] ಇವರಿಗೆ ಹಬ್ಬ. ಕೇಬಲ್‌ನಲ್ಲಿ ನೀಡಬೇಕಾದರ[illegible] ಲಕ್ಷ ಕೊಡಿ 5 ಲಕ್ಷ ಕೊಡಿ ಎಂದು ಬೇಡಿಕೆ[illegible] ಪಟ್ಟಿ ಮುಂದಿಡುತ್ತಿದ್ದಾರೆ. ಇನ್ನು ಪ್ರೈಮ[illegible] ಚಾನೆಲ್ ಆಗಿ ಕೊಡಬೇಕಿದ್ದರೆ ಈ ಬೇಡಿ[illegible] ಇನ್ನೊಂದಿಷ್ಟು ಬೇಡಿಕೆ.

ಒಟ್ಟಿನಲ್ಲಿ ಖಾಸಗಿ ವಿದ್ಯುನ್ಮಾನ ಮಾಧ್ಯ[illegible] ಗಳಲ್ಲಿ ಕೇಬಲ್ ಮಾಫಿಯಾ ತನ್ನ ಕರಾಳ ಹಸ್ತ[illegible] ಚಾಚುತ್ತಿದೆ.

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE 560027 Published by G.N.NAGARAJ, No 12, 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE 560 027 Karnataka (State) and Published at BANGALORE No 12, 18th Cross, S.R.Nagar, BANGALORE 560027 Editor S.Y.GURURSHANTH, No12, 18th Cross, S.R.Nagar, BANGALORE 560027 Editor S.Y.GURUSHANTH